ಸಂಪುಟ: ೦೬/ ಸಂಚಿಕೆ: ೨೮೪/ಶುಕ್ರವಾರ ದಿನಾಂಕ : ೧೦-೦೧-೨೦೨೫/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

# ಬೆಳಗಿನ ಸೂರ್ಯೋದಯ

ಕನ್ನಡ ಪ್ರಾದೇಶಿಕ ದಿನಪತ್ರಿಕೆ

ಬೆಳಗಾವಿ ■ ಧಾರವಾಡ ■ ಬಾಗಲಕೋಟ ■ ವಿಜಯಪುರ ■ ಗದಗ ■ ಕೊಪ್ಪಳ ■ ಹಾವೇರಿ ■ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ. ಕದಮ, Editor : GURURAJ IRAPPA. KADAM Cell : 9620099959

Volume : 06/ ISSUE : 284/ FRIDAY Date : 10-01-2025/ RNI No. KARKAN/2019/77640/ Postal Reg No. PMG/KA/NK/BM/135/21-24 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00

## ನಕ್ಸಲ್ ಮುಕ್ತ ಕರ್ನಾಟಕ- ಎಎನ್‌ಎಫ್ ರದ್ದುಗೊಳಿಸಲು ತೀರ್ಮಾನ : ಮುಖ್ಯಮಂತ್ರಿ

ಬೆಂಗಳೂರು : ಆರು ಮಂದಿ ಶರಣಾಗುವ ಮೂಲಕ ರಾಜ್ಯದಲ್ಲಿ ನಕ್ಸಲ್ ಹೋರಾಟ ಅಂತ್ಯ ಕಂಡಿದ್ದು, ನನ್ನ ಪ್ರಕಾರ ಕರ್ನಾಟಕ ರಾಜ್ಯವು ನಕ್ಸಲ್ ಹೋರಾಟದಿಂದ ಮುಕ್ತಗೊಂಡಿದೆ. ಹೀಗಾಗಿ, ಮುಂದಿನ ದಿನಗಳಲ್ಲಿ ನಕ್ಸಲ್ ನಿಗ್ರಹ ಪಡೆ(ಎಎನ್–ಎಫ್) ರದ್ದುಗೊಳಿಸುವ ಕುರಿತು ಚರ್ಚೆ ನಡೆಸಿ ತೀರ್ಮಾನ ಪ್ರಕಟಿಸಲಾಗುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಬುಧವಾರ ಇಲ್ಲಿನ ಗೃಹ ಕಚೇರಿ ಕೃಷ್ಣದಲ್ಲಿ ಆರು ಮಂದಿ ನಕ್ಸಲ್ ಹೋರಾಟಗಾರರನ್ನು ಮುಖ್ಯವಾಹಿನಿಗೆ ಸ್ವಾಗತಿಸಿದ ಬಳಿಕ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ನಕ್ಸಲಿಸಂ ರಹಿತವಾದ ಮುಕ್ತವಾದ ಸಮಾಜ ನಮ್ಮ ಗುರಿ. ಈ ಹಿನ್ನೆಲೆಯಲ್ಲಿ ಮುಖ್ಯವಾಹಿನಿಗೆ ಬರುವ ನಕ್ಸಲಿಯರಿಗೆ ಎಲ್ಲಾ ರೀತಿಯ ನೆರವು ಬಹಿರಂಗವಾಗಿ ಹೇಳಿದ್ದೆ. ನಿಮಮ್ಮನ್ನು ಕ್ರಿಮಿನಲ್‌ಗಳ ರೀತಿ ನೋಡದೆ, ಮಾನವರಂತೆ ನೋಡುವ ಭರವಸೆ ನೀಡಿದ್ದೆ ಎಂದರು.

ನಕ್ಸಲೀಯರ ಶರಣಾಗತಿಯಲ್ಲಿ ಸಮಿತಿಯ ಸದಸ್ಯರ ಪಾತ್ರ ಮುಖ್ಯವಾಗಿದ್ದು, ಅವರಿಗೆ ಹಾಗೂ ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದ ಎಲ್ಲಾ ಅಧಿಕಾ–ರಿಗಳಿಗೆ ಧನ್ಯವಾದ ಸಲ್ಲಿಸಬಯಸುತ್ತೇನೆ ಎಂದ ಅವರು, ಅನ್ಯಾಯದ ವಿರುದ್ಧ, ಶೋಷಣೆ, ದೌರ್ಜನ್ಯದ ವಿರುದ್ಧ ನ್ಯಾಯಕ್ಕಾಗಿ ಹೋರಾಡುವುದು ತಪ್ಪಲ್ಲ. ವ್ಯವಸ್ಥೆ ಬದಲಾವಣೆಗೆ ಹೋರಾಟ ಮಾಡಲು ಸಂವಿಧಾನದಲ್ಲಿ ಅವಕಾಶವಿದೆ. ಆದರೆ ಹೋರಾಟ ಶಾಂತಿಯುತವಾಗಿ , ನ್ಯಾಯಯುತವಾಗಿ ಮಾಡಬೇಕು ಎಂದು ಹೇಳಿದರು.



ನಕ್ಸಲಿಸಂ, ಶಸ್ತ್ರಾಸ್ತ್ರ ಹೋರಾಟಕ್ಕೆ ಸಂವಿಧಾನದಲ್ಲಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಕಾಶವಿಲ್ಲ. ಈ ಹಿಂದೆಯೂ ಬಹಳ ನಕ್ಸಲೀಯರು ಶಸ್ತ್ರಾಸ್ತ್ರ ತ್ಯಜಿಸಿ ಮುಖ್ಯಧಾರೆಗೆ ಬಂದಿದ್ದಾರೆ. ಇವರ ಪುನರ್ ವಸತಿಗೆ ಸರ್ಕಾರ ನೆರವು ಒದಗಿಸಿದೆ. ಶಾಂತಿಗಾಗಿ ನಾಗರಿಕ ವೇದಿಕೆಯವರು ನನ್ನನ್ನು ಭೇಟಿ ಮಾಡಿ ನಕ್ಸಲಿಯರ ಮನವೊಲಿಸುವ ಬಗ್ಗೆ ತಿಳಿಸಿದ್ದರು. ಆ ಸಂದರ್ಭದಲ್ಲಿ ನಕ್ಸಲಿಸಂ ತ್ಯಜಿಸಿ ಮುಖ್ಯವಾಹಿನಿಗೆ ಬರಲು ಸರಕಾರ ಎಲ್ಲನೆರವು ನೀಡಲಿದೆ ಎಂದು ಹೇಳಿದ್ದೆ. ನಾವು ಕರ್ನಾಟಕದಲ್ಲಿ ನಕ್ಸಲಿಸಂ ಕೊನೆಗಾಣಿಸಲು, ಅವರ ಬೇಡಿಕೆಗೆ ಸ್ಪಂದಿಸಲು ಏನೆಲ್ಲಾ ಕಾರ್ಯಕ್ರಮ ಬೇಕೋ ಅದನ್ನು ಕಾನೂನು ಚೌಕಟ್ಟಿನಲ್ಲಿ ಮಾಡುತ್ತೇವೆ ಎಂದು ಉಲ್ಲೇಖಿಸಿದರು.

ಬಡವರ ಹಕ್ಕುಗಳ ರಕ್ಷಣೆಗಾಗಿ ಅವರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಶಕ್ತಿ ಬರಲು ಅನೇಕ ಕಾರ್ಯಕ್ರಮ ಜಾರಿ ಮಾಡಿದೆ. ಗ್ಯಾರಂಟಿ ಯೋಜನೆಗಳಾದ ಶಕ್ತಿ, ಗೃಹಲಕ್ಷ್ಮೀ ಯೋಜನೆ ಉದ್ದೇಶ ಇದೇ ಆಗಿದೆ. ಗೌರವಯುತವಾಗಿ ಬಡವರು ಬದುಕಲು ಅವಕಾಶ ಇದರಿಂದ ಸಿಗಲಿದೆ. ಬಡವರಿಗೆ ಆರ್ಥಿಕ ಮತ್ತು ಸಾಮಾಜಿ–ಕವಾಗಿ ಬದುಕಲು ಶಕ್ತಿ ಬಂದರೆ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯ ಎಂದು ಸಿದ್ದರಾಮಯ್ಯ ಹೇಳಿದರು.

ಸುನೀಲ್ ಕುಮಾರ್‌ಗೆ ತಿರುಗೇಟು ಕೊಟ್ಟ ಸಿಎಂ: 'ರಾಜ್ಯದಲ್ಲಿ ಆರು ಮಂದಿ ನಕ್ಸಲೀಯರು ಶರಣಾಗುತ್ತಿರುವಾಗ ಬೆಚ್ಚಿಬಿದ್ದಿರುವ ಬಿಜೆಪಿ ಶಾಸಕ ಸುನೀಲ್ ಕುಮಾರ್ ಕಳೆದ ತಿಂಗಳು ಛತ್ತೀಸ್‌ಘಢದಲ್ಲಿ ಶರಣಾದ 30 ನಕ್ಸಲರನ್ನು ಕೇಂದ್ರ ಗೃಹಸಚಿವ ಅಮಿತ್ ಶಾ ಅವರೇ ಖುದ್ದಾಗಿ ಬರಮಾಡಿಕೊಂಡು ಆನಂದಬಾಷ್ಪ ಸು–ರಿಸಿದಾಗ ಯಾಕೆ ಬೆಚ್ಚಿಬಿದ್ದಿಲ್ಲ ಎಂದು ಕೇಳಬೇಕಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಅಮಿತ್ ಶಾ ಅವರಿಗೆ ನಕ್ಸಲರ ಬಗ್ಗೆ ಯಾಕೆ ಇಷ್ಟೊಂದು ಪ್ರೀತಿ ಎಂದು ಕೇಳುವ ದಮ್ಮು ಸುನೀಲ್ ಕುಮಾರ್ ಅವರಿಗೆ ಇದೆಯೇ?. ಕಳೆದ ವರ್ಷ ಮಹಾರಾಷ್ಟ್ರದಲ್ಲಿ ಶರಣಾದ ನಕ್ಸಲ್ ದಂಪತಿಗೆ ಅಲ್ಲಿನ ಬಿಜೆಪಿ ಸರಕಾರದ ಉಪಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು 41 ಲಕ್ಷ ರೂಪಾಯಿಗಳ ನೆರವು ನೀಡಿರುವುದು ಶಾಸಕ ಸುನೀಲ್ ಕುಮಾರ್ ಗೊತ್ತಿರಲಿಲ್ಲವೇ? ಈ ನೆರವನ್ನು ಯಾವ ಮಾನದಂಡದಲ್ಲಿ ನೀಡಿದ್ದೀರಿ ಎಂದು ಕೇಳುವ ಧೈರ್ಯ ಸುನೀಲ್ ಕುಮಾರ್ ಅವರಿಗೆ ಇದೆಯೇ? ಎಂದು ಖಾರವಾಗಿ ಪ್ರಶ್ನಿಸಿದ್ದಾರೆ.

ಅಲ್ಲದೆ, ಶರಣಾಗಿರುವ ಈ ನಕ್ಸಲೀಯರ ಅನುಸರಿಸಿದ ಹಿಂಸಾ ಮಾರ್ಗದ ಬಗ್ಗೆ ನಮಗೆಲ್ಲರಿಗೂ ವಿರೋಧವಿದೆ. ಆದರೆ ಇವರಲ್ಲಿ ಯಾರೂ ಜನರ ತೆರಿಗೆ ಹಣವನ್ನು ನುಂಗಿದ ಭ್ರಷ್ಟರೂ ಅಲ್ಲ, ರಾಮ–ಪರಶುರಾಮನ ಮೂರ್ತಿ ನಿರ್ಮಾಣದಲ್ಲಿಯೂ ಮೋಸ ಮಾಡಿ ಜೇಬು ತುಂಬಿಕೊಂಡವರೂ ಅಲ್ಲ. ಲಾಠಿ–ದೊಣ್ಣೆ, ಕತ್ತಿ–ತ್ರಿಶೂಲಗಳನ್ನು ನೀಡಿ ಅಮಾಯಕರನ್ನು ಹಿಂಸಾಮಾರ್ಗಕ್ಕೆ ಇಳಿಸಿ ರಾಜಕೀಯ ಲಾಭ ಗಳಿಸುವ ಕುತಂತ್ರದ ರಾಜಕಾರಣ ನಮ್ಮದ್ದಲ್ಲ. ದಾರಿ ತಪ್ಪಿ ಹಿಂಸೆಯ ಮಾರ್ಗ ಹಿಡಿದವರ ಮನವೊಲಿಸಿ ಸಮಾಜದ ಮುಖ್ಯವಾಹಿನಿಗೆ ಸೇರಿಸಿ ಅವರನ್ನು ಜವಾಬ್ದಾರಿಯುತ ನಾಗರಿಕರನ್ನಾಗಿ ಪರಿವರ್ತನೆ ಮಾಡುವುದು ಒಂದು ಸರಕಾರದ ಕರ್ತವ್ಯವಾಗಿದೆ ಎಂದರು.

**3 ಲಕ್ಷ ರೂ ಬಿಡುಗಡೆ :** ಆರು ಮಂದಿ ನಕ್ಸಲರ ಶರಣಾಗತಿ ಬೆನ್ನಲ್ಲೇ ರಾಜ್ಯ ಸರಕಾರವೂ ಚಿಕ್ಕಮಗಳೂರು ಜಿಲ್ಲಧಿಕಾರಿ ಮೂಲಕ ಪುನರ್ ವಸತಿ ಕಲ್ಪಿಸಲು ತಲಾ ಮೂರು ಲಕ್ಷ ರೂ. ಬಿಡುಗಡೆ ಮಾಡಿ ಅಧಿಕೃತ ಆದೇಶ ಹೊರಡಿಸಿದೆ.

****

## ಕ್ಯಾನ್ಸರ್‌ಗೆ ರಾಜ್ಯದಲ್ಲಿಯೇ ಅಂತಾರಾಷ್ಟ್ರೀಯ ಗುಣಮಟ್ಟದ ಚಿಕಿತ್ಸೆ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸೂಚನೆ



ಬೆಂಗಳೂರು: ರಾಜೀವ್ ಗಾಂಧಿ ವೈದ್ಯಕೀಯ ವಿವಿಯಲ್ಲಿ ಹೆಚ್ಚುವರಿಯಾಗಿ ಸಂಗ್ರಹವಾಗಿರುವ ಮೊತ್ತವನ್ನು ಸರ್ಕಾರಿ ವೈದ್ಯಕೀಯ ಕಾಲೇಜುಗಳ ಮೂಲ ಸೌಲಭ್ಯಗಳಿಗಾಗಿ ಒದಗಿಸಲು ಮತ್ತು ನಿಮ್ಹಾನ್ಸ್‌ನಲ್ಲಿ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿಯ ನೇಮಕಾತಿಗೆ ಕ್ರಮ ಕೈಗೊಳ್ಳಲು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನೆ ಸಭೆಯಲ್ಲಿ ಸಿಎಂ ಈ ಸೂಚನೆ ನೀಡಿದರು. ಪ್ರಸಕ್ತ ಸಾಲಿನಲ್ಲಿ ವೈದ್ಯಕೀಯ ಕಾಲೇಜುಗಳ ನಿರ್ಮಾಣ ಮತ್ತು ಉಪಕರಣಗಳ ಖರೀದಿಗೆ 400 ಕೋಟಿ ರೂ. ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ನಿರ್ಮಾಣಕ್ಕಾಗಿ 130 ಕೋಟಿ ರೂ. ಅನುದಾನ ಒದಗಿಸಲಾಗಿದೆ. ಈ ಕಾಮಗಾ–ರಿಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಸಿದ್ದರಾಮಯ್ಯ ಸೂಚಿಸಿದರು.

2023–24 ಸಾಲಿನಲ್ಲಿ ಅನುಮೋದನೆಗೊಂಡು, ಎಲ್ಲಾ ಕಾಮಗಾರಿಗಳನ್ನು ನಿಗದಿತ ಸಮಯದ ಒಳಗಾಗಿ ಪೂರ್ಣಗೊಳಿಸಬೇಕು. ಗದಗ, ಕೊಪ್ಪಳ, ಕಾರವಾರ ಮತ್ತು ಕೊಡಗು ಜಿಲ್ಲೆಗಳಲ್ಲಿ ನಿರ್ಮಾಣ ಹಂತದಲ್ಲಿರುವ 450 ಹಾಸಿಗೆ ಆಸ್ಪತ್ರೆಗಳ ನಿರ್ಮಾಣವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಕ್ಯಾನ್ಸರ್ ಪ್ರಮಾಣ ಹೆಚ್ಚಳವಾಗಲು ಕಾರಣ ಕುರಿತು ಅಧ್ಯಯನ ನಡೆಸಿ ವರದಿ ಸಲ್ಲಿಸಬೇಕು. ಕ್ಯಾನ್ಸರ್ ಚಿಕಿತ್ಸೆಗೆ ಅಂತಾರಾಷ್ಟ್ರೀಯ ಗುಣಮಟ್ಟದ ಚಿಕಿತ್ಸೆ ರಾಜ್ಯದಲ್ಲಿಯೇ ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಸಿದ್ದರಾಮಯ್ಯ ನಿರ್ದೇಶಿಸಿದರು.

2024–25ನೇ ಸಾಲಿನಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಗೆ 4331 ಕೋಟಿ ರೂ. ಅನುದಾನ ಹಂಚಿಕೆ ಮಾಡಲಾಗಿದ್ದು, ಈವರೆಗೆ 3,099 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ಇದರಲ್ಲಿ 3005 ಕೋಟಿ ರೂ. ವೆಚ್ಚ ಮಾಡಲಾಗಿದ್ದು, ಬಿಡುಗಡೆ ಮೊತ್ತಕ್ಕೆ ಶೇ.96.97 ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಸಚಿವರು ವಿವರಿಸಿದರು.

## ತಿರುಪತಿ ಕಾಲ್ತುಳಿತ ಪ್ರಕರಣ; ಮೃತರ ಕುಟುಂಬಸ್ಥರಿಗೆ ತಲಾ ರೂ.25 ಲಕ್ಷ ಪರಿಹಾರ ಘೋಷಿಸಿದ ಆಂಧ್ರ ಸರ್ಕಾರ



ತಿರುಪತಿ (ಆಂಧ್ರಪ್ರದೇಶ) : ವಿಶ್ವಪ್ರಸಿದ್ಧ ತಿರುಪತಿ ತಿಮ್ಮಪ್ಪನ ಸರ್ವದರ್ಶನ ಟಿಕೆಟ್ ಖರೀದಿಯ ವೇಳೆ ಉಂಟಾದ ಕಾಲ್ತುಳಿತದಲ್ಲಿ ಮೃತಪಟ್ಟ ಭಕ್ತರ ಕುಟುಂಬಕ್ಕೆ ಆಂಧ್ರಪ್ರದೇಶ ಸರ್ಕಾರ ತಲಾ 25 ಲಕ್ಷ ರೂಪಾಯಿ ಪರಿಹಾರವನ್ನು ಗುರುವಾರ ಘೋಷಿಸಿದೆ.

ವೈಕುಂಠ ಏಕಾದಶಿ ಹಿನ್ನೆಲೆಯಲ್ಲಿ ತಿಮ್ಮಪ್ಪನ ದರ್ಶನಕ್ಕಾಗಿ ದೇಶದ ವಿವಿಧೆಡೆಯಿಂದ ಭಕ್ತರು ತಿರುಪತಿಗೆ ಆಗಮಿಸಿದ್ದಾರೆ. ಬುಧವಾರ ಸಂಜೆ ಸರ್ವದರ್ಶನ ಟಿಕೆಟ್ ವಿತರಣೆಯ ವೇಳೆ ಜನರು ಏಕಾಏಕಿ ನುಗ್ಗಿದ್ದರಿಂದ ಕಾಲ್ತುಳಿತ ಉಂಟಾಗಿತ್ತು. ಇದರಲ್ಲಿ ಐವರು ಮಹಿಳೆಯರು ಸೇರಿ 6 ಮಂದಿ ಸಾವನ್ನಪ್ಪಿದ್ದಾರೆ. 40 ಕ್ಕೂ ಅಧಿಕ ಭಕ್ತರು ಗಾಯಗೊಂಡಿದ್ದಾರೆ.

ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ಕೊಡಿಸಲಾಗುವುದು. ಕಾಲ್ತುಳಿತದಲ್ಲಿ ಪ್ರಾಣ ಕಳೆದುಕೊಂಡ ಭಕ್ತರ ಕುಟುಂಬಕ್ಕೆ ತಲಾ 25 ಲಕ್ಷ ಪರಿಹಾರ ನೀಡಲಾಗುವುದು ಎಂದು ಸಿಎಂ ಚಂದ್ರಬಾಬು ನಾಯ್ಡು ಅವರ ನೇತೃತ್ವದ ಸರ್ಕಾರ ತಿಳಿಸಿದೆ.

ಈ ಬಗ್ಗೆ ಮಾಹಿತಿ ನೀಡಿರುವ ರಾಜ್ಯ ಕಂದಾಯ ಮತ್ತು ಮುಜರಾಯಿ ಇಲಾಖೆಯ ಸಚಿವ ಎ. ಸತ್ಯ ಪ್ರಸಾದ್, ಮೃತ ಭಕ್ತರ ಕುಟುಂಬಗಳ ಜೊತೆಗೆ ನಾವಿದ್ದೇವೆ. ಪ್ರಾಣ–ಕ್ಕೆ ಪರ್ಯಾಯವಾಗಿ ಏನನ್ನೂ ಮಾಡಲಾಗದು. ಘಟನೆ ನಡೆದಿರುವುದು ದುರಂತ. ಟಿಕೆಟ್ ವಿತರಣೆಯಲ್ಲಿ ತೀವ್ರ ಕಟ್ಟೆಚ್ಚರ ವಹಿಸಲಾಗಿದೆ ಎಂದು ತಿಳಿಸಿದರು.

ಮೃತರ ಕುಟುಂಬಗಳಿಗೆ ನೆರವಾಗಲು ಸರ್ಕಾರ ಪರಿಹಾರ ಘೋಷಣೆ ಮಾಡಿದೆ. ಶೀಘ್ರದಲ್ಲೇ ಸಿಎಂ ಚಂದ್ರಬಾಬು ನಾಯ್ಡು ಅವರು ಸಂತ್ರಸ್ತರ ಕುಟುಂಬಸ್ಥರನ್ನು ಭೇಟಿ ಮಾಡಿ ಮಾತುಕತೆ ನಡೆಸಲಿದ್ದಾರೆ. ಮುಂದೆ ಇಂತಹ ಘಟನೆಗಳು ಜರುಗದಂತೆ ಎಚ್ಚರಿಕೆ ವಹಿಸಲಾಗುವುದು ಎಂದು ಅವರು ಹೇಳಿದರು. ಅಧಿಕಾರಿಗಳ ವಿರುದ್ಧ ಸಿಎಂ ಗರಂ : ಹಿಂದುಗಳ ಪವಿತ್ರ ಕ್ಷೇತ್ರದಲ್ಲಿ ದುರಂತ ಸಂಭವಿಸಿದ್ದಕ್ಕೆ ಸಿಎಂ ಚಂದ್ರಬಾಬು ನಾಯ್ಡು ಅವರು ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ. ಹೆಚ್ಚಿನ ಭಕ್ತರು ಬರುವುದನ್ನು ಗಮನಿಸಿ ಸೂಕ್ತ ವ್ಯವಸ್ಥೆ ಮಾಡದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಭಕ್ತರ ಪ್ರಮಾಣದ ಆದ–ಾರದ ಮೇಲೆ ಹೆಚ್ಚಿನ ಕಡೆಗಳಲ್ಲಿ ಟಿಕೆಟ್ ಕೌಂಟರ್‌ಗಳನ್ನು ತೆರೆಯಲು ವ್ಯವಸ್ಥೆ ಮಾಡಬೇಕಿತ್ತು. ಭದ್ರತೆಯನ್ನು ಮತ್ತಷ್ಟು ಹೆಚ್ಚಿಸಬೇಕಿತ್ತು ಎಂದು ಸಿಎಂ ಗರಂ ಆಗಿದ್ದಾರೆ.

ಶ್ರೀ. ನಿಜಶರಣ ಅಂಬಿಗರ ಚೌಡಯ್ಯನವರ ದಿನಾಚರಣೆ ಪೂರ್ವಭಾವಿ ಸಭೆ

## ಫೆ. 1 ರಂದು ಅರ್ಥಪೂರ್ಣ ಜಯಂತಿ ಆಚರಣೆಗೆ ನಿರ್ಧಾರ

ಬೆಳಗಾವಿ, ನಿಜಶರಣ ಅಂಭಿಗರ ಚೌಡಯ್ಯ ದಿನಾಚರಣೆಯನ್ನು ಫೆ.1 ರಂದು ಅರ್ಥಪೂರ್ಣವಾಗಿ ಆಚರಿಸಲು ಸಿದ್ಧತೆಗಳನ್ನು ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ (ಜ.9) ಜರುಗಿದ ನಿಜಶರಣ ಅಂಬಿಗರ ಚೌಡಯ್ಯ ದಿನಾಚರಣೆ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಿಷ್ಟಾಚಾರದಂತೆ ಅತಿಥಿ ಗಣ್ಯರನ್ನು ಆಹ್ವಾನಿಸಲು, ವೇದಿಕೆ, ಆಹ್ವಾನ ಪತ್ರಿಕೆ ಸೇರಿದಂತೆ ಇನ್ನಿತರ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು. ಕಾರ್ಯಕ್ರಮದ ಕುರಿತು ಉಪನ್ಯಾಸ ನೀಡಲು ನು–ರಿತ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಬೇಕು.



ನಗರದ ಕೋಟೆ ಕೆರೆಯಿಂದ ಕುಮಾರ ಗಂಧರ್ವ ರಂಗಮಂದಿರದ ವರೆಗೆ ಜರುಗಲಿರುವ ಮೆರವಣಿಗೆಯಲ್ಲಿ ಜಾನಪದ ಕಲಾತಂಡಗಳನ್ನು ನಿಯೋಜನೆ, ಮೆರವಣಿಗೆ ಮಾರ್ಗದಲ್ಲಿ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಕ್ರಮ ವಹಿಸಲು ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ ಅವರು ಸೂಚಿಸಿದರು.

ಸಭೆಯಲ್ಲಿ ಕಾರ್ಯಕ್ರಮದ ವಿವಿಧ ವಿಷಯಗಳ ಕುರಿತು ಚರ್ಚಿಸಲಾಯಿತು.

ಸಮಾಜದ ಮುಖಂಡರಾದ ದಿಲೀಪ ಕುರುಂದವಾಡೆ ಅವರು ಮಾತನಾಡಿ ಅಂಬಿಗರ ಚೌಡಯ್ಯನವರ ಕುರಿತು ನುರಿತ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಬೇಕು. ವೇದಿಕೆ ಕಾರ್ಯಕ್ರಮಕ್ಕೆ ಆಗಮಿಸುವ ಸಾರ್ವಜನಿಕರಿಗೆ ಆಸನದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಕಾರ್ಯಕ್ರಮಕ್ಕೂ ಮುನ್ನ ಜರುಗುವ ಮೆರವಣಿಗೆಯಲ್ಲಿ ಜಾನಪದ ಕಲಾತಂಡಗಳ ನಿಯೋಜನೆ ಮಾಡುವಂತೆ ತಿಳಿಸಿದರು.

ಸಭೆಯಲ್ಲಿ ಮಹಾನಗರ ಪಾಲಿಕೆ ಆಯುಕ್ತೆ ಶುಭಾ ಬಿ, ಉಪ ಆಯುಕ್ತ ಉದಯಕುಮಾರ ತಳವಾರ, ಎಸಿಪಿ ಸದಾಶಿವ ಕಟ್ಟಿಮನಿ, ಕನ್ನಡ ಮತ್ತು ಸಂಸ್ಕತಿ ಇಲಾಖೆ ಉಪನಿರ್ದೇಶಕಿ ವಿದ್ಯಾವತಿ ಭಜಂತ್ರಿ, ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ ರಾಹುಲ್ ಕಾಂಬಳೆ ಸಮಾಜದ ಮುಖಂಡರಾದ ಅಶೋಕ ಕಬ್ಬಳಿಗೇರ ಸೇರಿದಂತೆ ಸಮಾಜದ ಗಣ್ಯರು, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತ–ರಿದ್ದರು.

## ಅಮಿತ್ ಶಾ ಹೇಳಿಕೆಗೆ ಖಂಡನೆ

### ಹುಬ್ಬಳ್ಳಿ ಧಾರವಾಡ ಬಂದ್ ಮುಕ್ತಾಯ, ಸಹಜಸ್ಥಿತಿಯತ್ತ ಅವಳಿನಗರ


ಹುಬ್ಬಳ್ಳಿ/ವಿಜಯನಗರ: ಡಾ. ಬಿ.ಆರ್. ಅಂಬೇಡ್ಕರ್ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಖಂಡಿಸಿ ಕರೆ ನೀಡಿದ್ದ ಹುಬ್ಬಳ್ಳಿ–ಧಾರವಾಡ ಮತ್ತು ವಿಜನಗರ ಜಿಲ್ಲೆಯ ಕೂಡ್ಲಿಗಿ ಬಂದ್ ನಡೆಯಿತು.

ಹುಬ್ಬಳ್ಳಿ ಧಾರವಾಡದ ಬಹುತೇಕ ಎಲ್ಲಾ ಅಂಗಡಿ ಮುಂಗಟ್ಟುಗಳು ಮುಚ್ಚಿದ್ದವು. ಬಸ್ ಮತ್ತಿತರ ವಾಹನ ಸಂಚಾರ ಸಂಪೂರ್ಣ ಸ್ಥಗಿತವಾಗಿತ್ತು. ಶಾಲಾ–ಕಾಲೇಜುಗಳಿಗೆ ರಜೆ ನೀಡಲಾಗಿತ್ತು. ಹಳೆ–ಹೊಸ ಬಸ್ ನಿಲ್ದಾಣ, ಹೊಸೂರು, ಹಳೇಹುಬ್ಬಳ್ಳಿ, ಗೋಕುಲ ರಸ್ತೆ, ಗಾಂಧಿ ಮಾರುಕಟ್ಟೆ ಸೇರಿ ಎಲ್ಲೆಡೆ ಜನರ ಓಡಾಟವಿಲ್ಲದೆ ಬಿಕೋ ಎನ್ನುತ್ತಿತ್ತು.

ಇನ್ನು ನಗರದ ಹೊರವಲಯದ ಗಬ್ಬೂರು, ಗದಗ ರಸ್ತೆ, ಕುಸುಗಲ್ ರಸ್ತೆಯಲ್ಲಿ ಲಾಂಗ್ ರೂಟ್ ಬಸ್ಸಗಳು ಸಂಚಾರ ಕಂಡುಬಂತು. ಇದನ್ನು ಹೊರತು ಪಡಿಸಿ ನಗರದಲ್ಲಿ ಯಾವುದೇ ಬಸ್ ಸಂಚಾರ ಇರಲಿಲ್ಲ.

ಬೆಳಗ್ಗೆ 6 ಗಂಟೆಯಿಂದಲೇ ಪ್ರತಿಭಟನಾಕಾರರು, ಚೆನ್ನಮ್ಮ ವೃತ್ತದಲ್ಲಿ ಟೈರ್‌ಗೆ ಬೆಂಕಿ ಹಚ್ಚಿ ಪ್ರತಿಭಟಿಸಿದರು. ಅಮಿತ್ ಶಾ, ಬಿಜೆಪಿ ವಿರುದ್ಧ ಘೋಷಣೆ ಕೂಗುತ್ತ ಡಾ.ಬಿ.ಆರ್. ಅಂಬೇಡ್ಕರ್ ವೃತ್ತಕ್ಕೆ ತೆರಳಿದರು. ಅಂಬೇಡ್ಕರ್ ಪ್ರತಿಮೆಗೆ ಗೌರವ ಸಲ್ಲಿಸಿದರು. ಬಳಿಕ ನಗರದಾದ್ಯಂತ ವಿವಿಧ ದಲಿತ ಪರ ಸಂಘಟನೆಗಳು ಬೈಕ್ ರ್ಯಾಲಿ, ಪ್ರತಿಭಟನಾ ಮೆರವಣಿಗೆ ನಡೆಸಿದವು.

ಅಮಿತ್ ಶಾ ಅವರನ್ನು ಸಂಪುಟದಿಂದ ವಜಾಗೊಳಿಸಲು ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಿರ್ದೇಶನ ನೀಡಬೇಕು ಎಂದು ವಿವಿಧ ಸಂಘಟನೆಗಳ ಮುಖಂಡರು ರಾಷ್ಟ್ರಪತಿ ದ್ರೌಪತಿ ಮುರ್ಮು ಅವರಿಗೆ ಹುಬ್ಬಳ್ಳಿ ತಹಶೀಲ್ದಾರರ ಮೂಲಕ ಮನವಿ ಸಲ್ಲಿಸಿದರು. ಬಳಿಕ ಮಾತನಾಡಿದ ಶಾಸಕ ಪ್ರಸಾದ ಅಬ್ಬಯ್ಯ, ವಿವಿಧ ದಲಿತ ಪರ ಸಂಘಟನೆಗಳು ಕರೆ ಕೊಟ್ಟಿದ್ದ ಹುಬ್ಬಳ್ಳಿ–ಧಾರವಾಡ ಬಂದ್ ಯಶಸ್ವಿಯಾಗಿದೆ. ಪಕ್ಷಾತೀತ, ಜಾತ್ಯಾತೀತವಾಗಿ ಬಂದ್??ಗೆ ಬೆಂಬಲ ಕೊಡುವ ಮೂಲಕ ಅವಳಿ ನಗರದ ಜನ ಅಂಬೇಡ್ಕರ್ ಸರ್ವ ಜನಾಂಗದ ನಾಯಕ ಎಂಬುದನ್ನು ಸಾಬೀತು ಮಾಡಿದ್ದಾರೆ. ಅವಳಿ ನಗರದ ನಾಗ–ರಿಕರು ಹಾಗೂ ವ್ಯಾಪಾರಸ್ಥರು ಸ್ವಯಂಪ್ರೇರಿತವಾಗಿ ಬಂದ್ ಮಾಡುವುದರ ಮೂಲಕ ಅಂಬೇಡ್ಕರ್ ಅವರಿಗೆ ಅಪಮಾನ ಮಾಡಿದ್ದನ್ನು ಒಪ್ಪುವುದಿಲ್ಲ ಎಂಬ ಸಂದೇಶವನ್ನು ದೇಶಕ್ಕೆ ಕೊಟ್ಟಿದ್ದಾರೆ. ಬಿಜೆಪಿಯವರ ಮನಸ್ಥಿತಿ ಹೇಗಿದೆ ಎಂಬುದನ್ನು ತೋರಿಸುತ್ತದೆ. ಅಂಬೇಡ್ಕರ್ ನಮ್ಮ ಫ್ಯಾಷನ್ ಅಲ್ಲ. ನಮ್ಮ ಪ್ರಾಣ, ಉಸಿರು ಮತ್ತು ನಾಡಿಮಿಡಿತವಾಗಿದೆ ಎಂದರು.



ಕೂಡ್ಲಿಗಿ ಬಂದ್ : ಅಮಿತ್ ಶಾ ಹೇಳಿಕೆ ಖಂಡಿಸಿ ವಿಜಯನಗರ ಜಿಲ್ಲಾ ಸಂವಿಧಾನ ಸಂರಕ್ಷಣಾ ಸಮಿತಿ, ಕಾಂಗ್ರೆಸ್ ಪಕ್ಷದ ವಿಜಯನಗರ ಜಿಲ್ಲಾ ಘಟಕ, ದಲಿಪರ ಹಾಗೂ ಕನ್ನಡಪರ ಸಂಘಟನೆಗಳು, ಕಾರ್ಮಿಕರ ಸಂಘಟನೆಗಳ ಸಹಯೋಗದಲ್ಲಿ ಇಂದು ಕೂಡ್ಲಿಗಿ ಬಂದ್?ಗೆ ಕರೆ ನೀಡಲಾಗಿತ್ತು. ಸಾರ್ವಜನಿಕರಿಂದ ಬೆಂಬಲ ವ್ಯಕ್ತವಾಗಿದ್ದರಿಂದ ಬಂದ್ ಗೆ ಬೆಂಬಲ ವ್ಯಕ್ತವಾಯಿತು. ಬೆಳಗ್ಗೆಯಿಂದಲೇ ಪಟ್ಟಣದಲ್ಲಿ ಅಂಗಡಿ, ಹೋಟೆಲ್‌ಗಳು, ವಾಣಿಜ್ಯ ವ್ಯಾಪಾರ ಮಳಿಗೆಗಳು ಬಂದ್ ಆಗಿದ್ದವು. ಆಟೋ ಸೇರಿದಂತೆ ಯಾವುದೇ ಖಾಸಗಿ ವಾಹನಗಳು ರಸ್ತೆಗೆ ಇಳಿದಿರಲಿಲ್ಲ. ರಸ್ತೆಗಳು ಖಾಲಿ ಖಾಲಿಯಾಗಿ ಕಂಡುಬಂದವು.

ಔಷಧ ಅಂಗಡಿ, ಆಸ್ಪತ್ರೆಗಳು, ಪೆಟ್ರೋಲ್ ಬಂಕ್, ಸರ್ಕಾರಿ ಕಚೇರಿಗಳು, ಶಾಲಾ ಕಾಲೇಜಿ ಗಳು ಹೊರತು ಪಡಿಸಿ ಉಳಿದೆಲ್ಲ ವಾಣಿಜೋದ್ಯಮಗಳು ಸ್ಥಗಿತವಾಗಿದ್ದವು. ಬಂದ್‌ಗೆ ಸಹಕರಿಸುವಂತೆ ಸಾರ್ವಜನಿಕರಲ್ಲಿ ಸಂಘಟನೆಗಳು ಮನವಿ ಮಾಡಿಕೊಂಡಿದ್ದರು. ಇದರಿಂದಾಗಿ ಸ್ವಯಂ ಪ್ರೇರಿತ ಬಂದ್ ವಾತಾವರಣ ನಿರ್ಮಾಣವಾಗಿತ್ತು.

ಪ್ರತಿಭಟನಾಕಾರರು ಪಟ್ಟಣದ ಪ್ರಮುಖ ವೃತ್ತಗಳಲ್ಲಿ ಕೇಂದ್ರ ಸಚಿವ ಅಮಿತ್ ಶಾ ಅವರನ್ನು ಸಂಪುಟದಿಂದ ವಜಾಗೊಳಿಸುವಂತೆ ಒತ್ತಾಯಿಸಿದರು.

## ಮದ್ಯ ಮಾರಾಟ ನಿಷೇಧ

ಬೆಳಗಾವಿ, : ಜಿಲ್ಲಾಡಳಿತದ ವತಿಯಿಂದ ಜನೇವರಿ 12 ಹಾಗೂ 13 ರಂದು ಸಂಗೊಳ್ಳಿ ರಾಯಣ್ಣ ಉತ್ಸವವನ್ನು ಅತೀ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಸಂಗೊಳ್ಳಿ ರಾಯಣ್ಣ ಉತ್ಸವದ ಪ್ರಯುಕ್ತ ಸಾರ್ವಜನಿಕ ನೆಮ್ಮದಿ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ದಿನಾಂಕ:11–01–2025 ರ ಸಂಜೆ 6 ಗಂಟೆಯಿಂದ ದಿನಾಂಕ:14–01–2025ರ ಮುಂಜಾನೆ 6 ಗಂಟೆಯ ವರೆಗೆ ಬೈಲಹೊಂಗಲ ತಾಲೂಕಿನ ಸಂಗೊಳ್ಳಿ ಗ್ರಾಮದ ವ್ಯಾಪ್ತಿಯಲ್ಲಿರುವ ಎಲ್ಲ ಮದ್ಯ/ಬಾರ್ ಅಂಗಡಿಗಳನ್ನು ಬಂದ್ ಮಾಡಿ ಮದ್ಯ ಮಾರಾಟವನ್ನು ನಿಷೇಧಿಸಿ ಜಿಲ್ಲಾಧಿಕಾರಿಗಳಾದ ಮೊಹಮ್ಮದ್ ರೋಷನ್ ಅವರು ಆದೇಶ ಹೊರಡಿಸಿರುತ್ತಾರೆ.

### ಅನುಕಂಪ ಆಧಾರ ಮೇಲೆ ನೇಮಕಾತಿ ದಾಖಲೆ ಪರಿಶೀಲನೆ

ಬೆಳಗಾವಿ, : ನಗರದ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಮಂಗಳವಾರ ಜಿಪಂ ಸಿಇಓ ರಾಹುಲ್ ಶಿಂಧೆ ಅವರ ಅಧ್ಯಕ್ಷತೆಯಲ್ಲಿ ಗ್ರಾಪಂಗಳಲ್ಲಿ ಸೇವೆ ಸಲ್ಲಿಸುವಾಗ ಮರಣ ಹೊಂದಿದವರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಕು–ರಿತು ಸಮಿತಿಯ ಸಭೆ ಹಮ್ಮಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಜಿಲ್ಲೆಯ ವಿವಿಧ ಗ್ರಾಪಂಗಳಲ್ಲಿ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸಂದರ್ಭದಲ್ಲಿ ಮರಣ ಹೊಂದಿದ ಕರ ವಸೂಲಿಗಾರ, ಕ್ಲರ್ಕ, ಕ್ಲರ್ಕ ಕಂ. ಡಾಟಾ ಎಂಟ್ರಿ ಆಪರೇಟರ್, ವಾಟರಮೆನ್, ಸಿಪಾಯಿ, ಸ್ವಚ್ಛತಾಗಾರರವರ ಕುಟುಂಬಗಳಿಗೆ ಅನುಕಂಪ ಆಧಾರದ ಮೇಲೆ 27 ಜನರ ಅವಲಂಬಿತ–ರಿಗೆ ಸದರಿ ಗ್ರಾಪಂಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಮಾಡುವ ಕುರಿತು ದಾಖಲೆಗಳನ್ನು ಪರಿಶೀಲನೆ ಮಾಡಲಾಯಿತು.

ಸಮಿತಿ ಸದಸ್ಯ ಜಿಪಂ ಉಪಕಾರ್ಯದರ್ಶಿ ಬಸವರಾಜ ಹೆಗ್ಗನಾಯಕ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಹರ್ಷ ಎಸ್., ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಅಧಿಕಾರಿ ಎಫ್.ಯು. ಪೂಜೇರ, ಹಾಗೂ ಸಂಬಂಧಪಟ್ಟ ಗ್ರಾಪಂ ಅಧ್ಯಕ್ಷರು ಮತ್ತಿತರ ಉಪಸ್ಥಿತರಿದ್ದರು.

## ವಿವಿಧ ಇಲಾಖೆಗಳೊಂದಿಗೆ ಮುಖ್ಯಮಂತ್ರಿ ಸಭೆ

ಬೆಂಗಳೂರು: ಗೃಹಕಚೇರಿ ಕೃಷ್ಣಾದಲ್ಲಿ ಗುರುವಾರದಂದು ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮ ಶೀಲತೆ ಹಾಗೂ ಜೀವನೋಪಾಯ ಇಲಾಖೆ ಜೊತೆ ಪ್ರಗತಿ ಪರಿಶೀಲನಾ ಸಭೆ ಮಾಡಿದ್ದಾರೆ. ವೈದ್ಯಕೀಯ ಕಾಲೇಜುಗಳ ನಿರ್ಮಾಣ, 2024–25ನೇ ಸಾಲಿನ ವೈದ್ಯಕೀಯ ಶಿಕ್ಷಣ ಇಲಾಖೆಗೆ ಅನುದಾನ ಹಂಚಿಕೆ, ಆಸ್ಪತ್ರೆಗಳ ನಿರ್ಮಾಣ ಹೀಗೆ ಹಲವು ವಿಚಾರಗಳ ಬಗ್ಗೆ ಚರ್ಚೆ ಮತ್ತು ಕೆಲ ಸೂಚನೆಗಳನ್ನು ಅಧಿಕಾರಿಗಳಿಗೆ ಸಿಎಂ ನೀಡಿದ್ದಾರೆ.

ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಭೆ ಮುಖ್ಯಾಂಶಯಗಳು

ಪ್ರಸ್ತುತ ಬಜೆಟ್‌ನಲ್ಲಿ ಇಲಾಖೆಗೆ ರೂ.1864 ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ. ಇದುವರೆಗೆ ರೂ. 1235 ಕೋಟಿ ವೆಚ್ಚವಾಗಿದೆ. ರಾಜ್ಯದಲ್ಲಿ 50 ವರ್ಷ ಪೂರ್ಣಗೊಳಿಸಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪಾರಂಪರಿಕ ಸಂಸ್ಥೆಗಳೆಂದು ಘೋಷಿಸಿ ಉನ್ನತೀಕರಣಕ್ಕಾಗಿ ರೂ.100 ಕೋಟಿ ಒದಗಿಸಲಾಗಿದೆ, ಈ ಕಾಮಗಾರಿಯನ್ನು ಆದಷ್ಟು ಬೇಗನೆ ಪೂರ್ಣಗೊಳಿಸಬೇಕು.

ಕೌಶಲ್ಯಾಭಿವೃದ್ಧಿ ಆದರೆ ಮಾತ್ರ ಉದ್ಯೋಗ ಸಿಗಲು ಸಾಧ್ಯವಿದೆ. ಕೌಶಲ್ಯ ನೀಡಿಕೆ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಬೇಕು. ಯುವನಿಧಿ ಯೋಜನೆಯಡಿ ನೋಂದಣಿಗೊಂಡವ–ರಿಗೆ ಆದ್ಯತೆ ಮೇರೆಗೆ ಕೌಶಲ್ಯ ತರಬೇತಿ ನೀಡಬೇಕು.

ಯುವನಿಧಿ ಯೋಜನೆಯಡಿ ಇದುವರೆಗೆ 1,97,060 ಅಭ್ಯರ್ಥಿಗಳು ನೋಂದಾಯಿಸಿದ್ದು, ಇವರ ಪೈಕಿ 1,61,883 ಅರ್ಹ ಫಲಾನುಭವಿಗಳಿಗೆ ರೂ.216.38 ಕೋಟಿ ನಿರುದ್ಯೋಗ ಭತ್ಯೆ ನೀಡಲಾಗಿದೆ. ಯೋಜನೆಯಡಿ ಅರ್ಹ ಅಭ್ಯರ್ಥಿಗಳ ನೋಂದಣಿಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು.



ಈ ವರ್ಷದ ಬಜೆಟ್‌ನಲ್ಲಿ ಘೋಷಿಸಲಾಗಿದ್ದು, ಸುಮಾರು 20ಸಾವಿರ ಐಟಿಐ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಮತ್ತು ಕಮ್ಯುನಿಕೇಶನ್ ಕೌಶಲ್ಯ ತರಬೇತಿ ನೀಡುವ ಕಾರ್ಯಕ್ರಮವನ್ನು ಆದ–ಷ್ಟು ಬೇಗನೆ ಅನುಷ್ಠಾನಗೊಳಿಸಬೇಕು.

ರಾಜ್ಯದಲ್ಲಿ ಆರಂಭಿಸಲಾಗಿರುವ ಅಕ್ಕ ಕಾಫಿ ಘಟಕಗಳ ಮಾದರಿಯಲ್ಲಿ ಇಂದಿರಾ ಕ್ಯಾಂಟೀನ್‌ಗಳನ್ನು ಮಹಿಳಾ ಸ್ವಸಹಾಯ ಸಂಘಗಳ ಮೂಲಕ ನಡೆಸುವ ಕುರಿತು ಪ್ರಸ್ತಾವನೆಯನ್ನು ಸಲ್ಲಿಸಲು ಸೂಚನೆ. ಆರ್ಥಿಕ ಚಟುವಟಿಕೆಗಳಲ್ಲಿ ಗ್ರಾಮೀಣ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಗ್ರಾಮ ಪಂಚಾಯತ್ ಮಟ್ಟದಲ್ಲಿ ಗ್ರಾಮೀಣ ಮಹಿಳೆಯರಿಗೆ ಕೌಶಲ್ಯ ತರಬೇತಿಗೆ ಕ್ರಮ. ಐಟಿಐ ಪ್ರವೇಶಾತಿಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು.

ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಮುಖ್ಯಾಂಶಗಳು:

ಪ್ರಸ್ತುತ ಸಾಲಿನಲ್ಲಿ ವೈದ್ಯಕೀಯ ಕಾಲೇಜುಗಳ ನಿರ್ಮಾಣ ಮತ್ತು ಉಪಕರಣಗಳ ಖರೀದಿಗೆ ರೂ.400 ಕೋಟಿ ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ನಿರ್ಮಾಣಕ್ಕಾಗಿ ರೂ.130 ಕೋಟಿ ಅನುದಾನ ಒದಗಿಸಲಾಗಿದೆ. ಈ ಕಾಮಗಾ–ರಿಗಳನ್ನು ಆದಷ್ಟು ಬೇಗನೆ ಪೂರ್ಣಗೊಳಿಸಲು ಸೂಚನೆ. 2024–25 ನೇ ಸಾಲಿನಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಗೆ ರೂ.4331 ಕೋಟಿ ಅನುದಾನ ಹಂಚಿಕೆ ಮಾಡಲಾಗಿದ್ದು, ಇದುವರೆಗೆ ರೂ.3099 ಕೋಟಿ ಅನುದಾನ ಬಿಡುಗಡೆಯಾಗಿದೆ. ಇದರಲ್ಲಿ ರೂ.3005 ಕೋಟಿ ವೆಚ್ಚ ಮಾಡಲಾಗಿದ್ದು, ಬಿಡುಗಡೆ ಮೊತ್ತಕ್ಕೆ ಶೇ. 96.97 ಪ್ರಗತಿ ಸಾಧಿಸಲಾಗಿದೆ ಎಂದು ಸಚಿವರು ವಿವರಿಸಿದ್ದಾರೆ.

2023–24 ಸಾಲಿನಲ್ಲಿ ಅನುಮೋದನೆಗೊಂಡು, ಎಲ್ಲಾ ಕಾಮಗಾ–ರಿಗಳನ್ನು ನಿಗದಿತ ಸಮಯದ ಒಳಗಾಗಿ ಪೂರ್ಣಗೊಳಿಸಬೇಕು. ಗದಗ, ಕೊಪ್ಪಳ, ಕಾರವಾರ,ಕೊಡಗು ಜಿಲ್ಲೆಗಳಲ್ಲಿ ನಿರ್ಮಾಣ ಹಂತದಲ್ಲಿರುವ 450 ಹಾಸಿಗೆ ಆಸ್ಪತ್ರೆಗಳ ನಿರ್ಮಾಣವನ್ನು ತ್ವ–ರಿತವಾಗಿ ಪೂರ್ಣಗೊಳಿಸಲು ಸೂಚನೆ ನೀಡಲಾಗಿದೆ. ರಾಜೀವ್ ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಹೆಚ್ಚುವ–ರಿಯಾಗಿ ಸಂಗ್ರಹವಾಗಿರುವ ಮೊತ್ತವನ್ನು ಸರ್ಕಾರಿ ವೈದ್ಯಕೀಯ ಕಾಲೇಜುಗಳ ಮೂಲಸೌಲಭ್ಯಗಳಿಗಾಗಿ ಒದಗಿಸುವ ಕು–ರಿತು ಕ್ರಮ ಕೈಗೊಳ್ಳಬೇಕು. ನಿಮ್ಹಾನ್ಸ್‌ನಲ್ಲಿ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿಯ ನೇಮಕಾತಿಗೆ ಕ್ರಮ ಕೈಗೊಳ್ಳಬೇಕು.

ಕ್ಯಾನ್ಸರ್ ಪ್ರಮಾಣ ಹೆಚ್ಚಳವಾಗಲು ಕಾರಣ ಕುರಿತು ಅಧ್ಯಯನ ನಡೆಸಿ ವರದಿ ಸಲ್ಲಿಸಬೇಕು. ಕ್ಯಾನ್ಸರ್ ಚಿಕಿತ್ಸೆಗೆ ಅಂತಾರಾಷ್ಟ್ರೀಯ ಗುಣಮಟ್ಟದ ಚಿಕಿತ್ಸೆ ರಾಜ್ಯದಲ್ಲಿಯೇ ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಲಾಗಿದೆ.

# ಸನ್ಮಾನ ಕಾರ್ಯಕ್ರಮ



ಹಳ್ಳೂರ : ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ರೈತರು ವಾಸಮಾಡಿರುತ್ತಾರೆ ರೈತರಿಗೆ ಕೂಲಿಕಾರ-ರಿಗೆ ಸಹಾಯ ಸಹಕಾರ ನೀಡಿ ಗ್ರಾಮದ ಶ್ರೇಯೋಭಿವೃದ್ಧಿಗೆ ಶ್ರಮ ಪಟ್ಟು ಒಳ್ಳೆಯ ಕೆಲಸ ಕಾರ್ಯ ಮಾಡುತ್ತಿದ್ದವರಿಗೆ ದೇವರ ಆಶೀರ್ವಾದ ಸದಾಕಾಲ ಇರುತ್ತದೆಂದು ಬಬಲಾದಿ ಮೂಲ ಸಂಸ್ಥಾನ ಮಠದ ವೇದ ಮೂರ್ತಿ ಚಂದ್ರಶೇಖರ ಹೀರೆಮಠ ಪೂಜ್ಯರು ಹೇಳಿದರು.ಅವರು ಗ್ರಾಮದ ಯಮನಪ್ಪ ನಿಡೋಣಿ ಅವರ ತೋಟದಲ್ಲಿ ಹಮ್ಮಿಕ್ಕೊಂಡ ಸನ್ಮಾನ ಕಾರ್ಯ್ರಮದ ಸಾನಿಧ್ಯ ವಹಿಸಿ ಸನ್ಮಾನ ಸ್ವೀಕರಿಸಿ ಮಾತನಾಡಿ ಜಾತಿ ಭೇದ ಭಾವ ಮಾಡದೆ ಎಲ್ಲರೂ ಒಗ್ಗಟ್ಟಾಗಿ ಪ್ರೀತಿ ವಿಶ್ವಾಸದಿಂದ ಜೀವನ ಸಾಗಿಸಬೇಕು. ಆಸ್ತಿ ಅಧಿಕಾರ ಅಂತಸ್ತು ಯಾವುದೂ ಸ್ಥಿರವಲ್ಲ ನಾವೂ ಸಮಾಜ, ಬೇರೆಯವ-ರಿಗೆ ಮಾಡಿದ ಸಹಾಯ ಮಾತ್ರ ಕೊನೆಯವರೆಗೆ ಉಳಿದೂ ಆದ್ದರಿಂದ ಪುಣ್ಯ ಲಭಿಸುತ್ತದೆ.ಅನ್ಯಾಯ ಅಧರ್ಮದ ದಾರಿಯಲ್ಲಿ ಸಾಗಿದರೆ ಕೆಡುಕು ಕಟ್ಟಿಟ್ಟ ಬುತ್ತಿ,ಹಳ್ಳೂರ ಮಹಾಲಕ್ಷ್ಮೀ ದೇವಿ ಜಾಗೃತ ದೇವರಿದ್ದಾರೆ ನಂಬಿ ನಡೆದರೆ ಒಳ್ಳೆಯದು ಎಂದು ಹೇಳಿದರು. ವೇದಮೂರ್ತಿ ಚಂದ್ರಶೇಖರ ಹೀರೆಮಠ ಪೂಜ್ಯರನ್ನು ನಿಡೋಣಿ ಕುಟುಂಬದವರು ಸನ್ಮಾನಿಸಿ ಗೌರವಿಸಿದರು.ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಭೀಮಶಿ ಮಗದುಮ.ಪಿಕೆಪಿಎಸ್ ನೂತನ ಅದ್ಯಕ್ಷರಾಗಿ ಆಯ್ಕೆಯಾದ ಮಹಾವೀರ ಛಬ್ಬಿ.ಸದಸ್ಯರಾದ ಯಾದಪ್ಪ ನಿಡೋಣಿ.ತುಕಾರಾಮ ಸನದಿ. ಬಾಳೆಶ ನೇಸುರ.ರೇವಪ್ಪ ಸಿಂಪಿಗೆರ.ಸೇ-ರಿದಂತೆ ಅನೇಕ ಪ್ರಮುಖರಿಗೆ ಸನ್ಮಾನ ಮಾಡಿ ಗೌರವಿಸಿದರು. ನೂರಾರು ಜನರು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಮುರಿಗೆಪ್ಪ ಮಾಲಗಾರ ಸ್ವಾಗತಿಸಿ ನಿರೂಪಿಸಿದರು.

## ಶಾಲೆಯ ವಾರ್ಷಿಕೋತ್ಸವದ ನಿಮಿತ್ತ ವಸ್ತು ಪ್ರದರ್ಶನ ಉದ್ಘಾಟನೆ



ಗೋಕಾಕ: ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಕೌಶಲಗಳನ್ನು ವೃದ್ದಿಗೊಳಿಸಿಕೊಂಡು ಪ್ರತಿಭಾವಂತರಾಗಿರೆಂದು ಇಲ್ಲಿನ ಮಯೂರ ಆಂಗ್ಲ ಮಾಧ್ಯಮ ಶಾಲೆಯ ಉಪಾಧ್ಯಕ್ಷೆ ಶ್ರೀಮತಿ ಸಂದ್ಯಾ ಲಖನ್ ಜಾರಕಿಹೊಳಿ ಹೇಳಿದರು.

ಬುಧವಾರದಂದು ನಗರದ ಮಯೂರ ಆಂಗ್ಲ ಮಾಧ್ಯಮ ಶಾಲೆಯ ವಾರ್ಷಿಕೋತ್ಸವದ ನಿಮಿತ್ತ ಹಮ್ಮಿಕೊಂಡ ವಸ್ತು ಪ್ರದರ್ಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪಠ್ಯದೊಂದಿಗೆ ಕ್ರೀಡೆ, ಸಂಸ್ಕೃತಿ-ಕ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಸಹಕಾರಿಯಾಗುತ್ತವೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹೆಚ್ಚು ಅವಕಾಶ ವಿದ್ದು,ಗುರುಗಳ ಮಾರ್ಗದರ್ಶನದಲ್ಲಿ ಪ್ರಯತ್ನ ಶೀಲರಾಗಿ ತಮ್ಮ ಬದುಕು ರೂಪಿಸಿಕೊಳ್ಳಿರಿ, ಉತ್ತಮ ಸಾಧಕರಾಗಿ ತಂದೆ, ತಾಯಿ,ಗುರು ಹಾಗೂ ಸಂಸ್ಥೆಗೂ ಕೀರ್ತಿ ತನ್ನಿರೆಂದು ಹಾರೈಸಿದರು.

ಈ ಸಂದರ್ಭದಲ್ಲಿ ಆಡಳಿತಾಧಿಕಾರಿ ಎಸ್.ಡಿ.ಮುರಗೋಡ, ಪ್ರಾಚಾರ್ಯ ಸುಚಿತ್ರಾ ಹತಪಾಕಿ ಹಾಗೂ ಶಿಕ್ಷಕರು, ಸಿಬೀ ವರ್ಗದವರು ಉಪಸ್ಥಿತರಿದ್ದರು.

*********



**ಗೋಕಾಕ: ಇಲ್ಲಿಯ ಗೋಕಾಕ ಶಿಕ್ಷಣ ಸಂಸ್ಥೆಯ ಆದರ್ಶ ಕನ್ನಡ ಪೂರ್ವ ಪ್ರಾಥಮಿಕ, ಜೆಇಎಸ್ ಪ್ರೌಢಶಾಲೆ ಗೋಕಾಕ ಮತ್ತು ಮಾಡರ್ನ ಆಂಗ್ಲ ಮಾಧ್ಯಮ ಶಾಲೆ ಹಾಗೂ ನವ ಚೇತನ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ 2024-25ನೇ ಸಾಲಿನ ವಾರ್ಷಿಕ ಕ್ರೀಡಾಕೂಟಗಳನ್ನು ಸಂಸ್ಥೆಯ ಆಡಳಿತ ಮಂಡಳಿ ಹಿರಿಯ ನಿರ್ದೇಶಕ ಎಮ್ ಡಿ ಚುನಮರಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಜಮಖಂಡಿಯ ಪಿಎಸ್ಐ ಶಿವಾನಂದ ಸಿಂಗನ್ನವರ, ಸಂಸ್ಥೆಯ ಕಾರ್ಯದರ್ಶಿ ಆರ್ ಆರ್ ವಾಲಿ, ಶಿಕ್ಷಕರಾದ ಎಸ್ ಎಸ್ ಇಜೇರಿ, ಎಸ್ ಕೆ ಮಠದ, ಎ ಎಮ್ ಶೆಟ್ಟೆನ್ನವರ, ವಾಯ್ ಎ ಹನಗಂಡಿ, ಎ ಪಿ ಕರಜಗಿಮಠ ಇದ್ದರು.**

## ಸಾವಿತ್ರಿಭಾಯಿ ಪುಲೆ ಜನ್ಮ ದಿನಾಚರಣೆ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಫುಲೆ ಪ್ರೋತ್ಸಾಹ



ಮುಧೋಳ: ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡಿ ಮಕ್ಕಳ ಶಿಕ್ಷಣಕ್ಕೆ ಭದ್ರ ಬುನಾದಿ ಹಾಕಿದ್ದ ಸಾವಿತ್ರಿಬಾಯಿ ಫುಲೆಯವರ ಜೀವನಾದರ್ಶಗಳು ಇಂದಿಗೂ ಪ್ರಸ್ತುತ ಎಂದು ತ್ರಿವೇಣಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಸ್. ಮಲಘಾಣ ಹೇಳಿದರು.

ನಗರದ ಶ್ರೀ ಸಂಗಮನಾಥ ಶಾಲೆಯ ಅವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಪ್ರಥ-'ಮ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಜನ್ಮ ದಿನಾಚರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.ಹೆಣ್ಣು ಮಕ್ಕಳಿಗೆ ವಿದ್ಯೆಯನ್ನು ನಿರಾಕರಿಸಿದ್ದ ಸಮಾಜಕ್ಕೆ ಎದುರಾಗಿ ನೋವು, ಅಪಮಾನಗಳನ್ನು ಮೆಟ್ಟಿ ನಿಂತು ಎಲ್ಲ ವರ್ಗಗಳ ಹೆಣ್ಣುಮಕ್ಕಳಿಗೆ ಶಾಲೆ ಪ್ರಾರಂಭಿಸಿ, ಅಕ್ಷರ ಕಲಿಸಿದ ದಿಟ್ಟ.

ಮಹಿಳಾ ವರ್ಗಕ್ಕೆ ಮಾದರಿಯಾಗಿದ್ದಾರೆ' ಇಡೀ ವಿಶ್ವಕ್ಕೆ ಸಮಾನತೆಯ ಸಂದೇಶ ಸಾರಿದ ಧೀರ ಮಹಿಳೆ' ಮಹಿಳೆಯರಿಗೆ ಶಿಕ್ಷಣ ಒದಗಿಸಲು ಸಾವಿತ್ರಿಬಾಯಿ ಫುಲೆ ಅವರು, ದೇಶದುದ್ದಕ್ಕೂ ಹೋರಾಟ ಮಾಡಿದರು. ಎಂದರು.

ಕಾರ್ಯಕ್ರಮದಲ್ಲಿ ಆಡಳಿತಾಧಿಕಾರಿ ಮಲ್ಲು ಕಳ್ಳಿನವರ ಪ್ರಾಚಾರ್ಯ ಸುರೇಶ ಭಜಂತ್ರಿ, ಮುಖ್ಯೋಪಾಧ್ಯಾಯ ವೆಂಕಟೇಶ ಗುಡೆಪ್ಪನವರ ಸೇ-ರಿದಂತೆ ಶಿಕ್ಷಕರು,ಸಿಬ್ಬಂದಿ ಇದ್ದರು.

*****

## ಜ 12ರಂದು 3ನೇ ಕರ್ನಾಟಕ ರಾಜ್ಯ ಯೋಗಾಸನ ಸ್ಪೋರ್ಟ್ಸ್ ಲೀಗ್



ಗೋಕಾಕ: ಕರ್ನಾಟಕ ಸ್ಟೇಟ್ ಅಮೆಚೂರ್ ಯೋಗಾ ಸ್ಪೋರ್ಟ್ಸ್ ಅಸೋಸಿಯೇಷನ್ ಮತ್ತು ಸತೀಶ್ ಜಾರಕಿಹೊಳಿ ಫೌಂಡೇಶನ್ ಹಾಗೂ ಶ್ರೀ ವಿವೇಕಾನಂದ ಯೋಗ ಮತ್ತು ಸಂಸ್ಕೃತಿ ವಿಕಾಸ ಸಂಘ ಗೋಕಾಕ್ ಇವುಗಳ ಸಂಯುಕ್ತ ಆಶ್ರಯದಲ್ಲಿ ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆಯ ಪ್ರಯುಕ್ತ 3ನೇ ಕರ್ನಾಟಕ ಸ್ಪೋರ್ಟ್ಸ್ ಲೀಗ್ ಅನ್ನು ರವಿವಾರ ದಿನಾಂಕ 12/01/2025 ಬೆಳಗ್ಗೆ 9 -30ಕ್ಕೆ ನಗರದ ಎಚ್ ಕೆ ಜಿ ಎನ್ ಸಭಾಂಗಣದಲ್ಲಿ ನಡೆಯಲಿದೆ.

ಸಂಸದೆ ಕುಮಾರಿ ಪ್ರಿಯಾಂಕಾ ಸತೀಶಣ್ಣ ಜಾರಕಿಹೊಳಿ ಉದ್ಘಾಟಿಸಲಿದ್ದಾರೆ. ಶಾಸಕ ಬಾಲಚಂದ್ರ ಜಾರಕಿಹೊಳಿ ಅಧ್ಯಕ್ಷತೆ ವಹಿಸಲಿದ್ದಾರೆ. ವಿಶೇಷ ಆಮಂತ್ರಿತರಾಗಿ ವಿಜಯಕಾಂತ ಡೈರಿ ಮತ್ತು ಆಹಾರ ಉತ್ಪನ್ನಗಳ ಉಪಾಧ್ಯಕ್ಷೆ ಕುಮಾರಿ ನಿವೇದಿತಾ ವಿಜಯಕಾಂತ ಸಿದ್ನಾಳ ಕಾರ್ಯಕ್ರಮದ ನೇತೃತ್ವವನ್ನು ಕರ್ನಾಟಕ

ಅಮೇಚೂರ್ ಯೋಗ ಸ್ಪೋರ್ಟ್ಸ್ ಅಸೋಸಿಯೇಷನ್ ಅಧ್ಯಕ್ಷರಾದ ಬೆಂಗಳೂರಿನ ಜಿ ಎನ್ ಕೃಷ್ಣಮೂರ್ತಿ ಮುಖ್ಯ ಅತಿಥಿಗಳಾಗಿ ಸುಶ್ಮಿತಾ ಕಿಶೋರ್ ಶೆಟ್ಟಿ ಬಸವರಾಜ ಕಲ್ಯಾಣಶೆಟ್ಟಿ ಚಂದ್ರಶೇಖರ ಕೊಣ್ಣೂರ ಸುನಂದಾ ಮಾದರ ವಿಷ್ಣು ಲಾತೂರ ಸಾಹಿತಿ ಜಯಾನಂದ ಮಾದರ ಡಾ॥ ಪ್ರಮೋದ ಎತ್ತಿನಮನಿ ಡಾ॥ ಸುಶ್ರುತ ಕಡಲಗಿಕರ ಸಂತೋಷ್ ಪಾಟೀಲ್ ಆಗಮಿಸಲಿದ್ದಾರೆ ಎಂದು ಶ್ರೀ ವಿವೇಕಾನಂದ ಯೋಗ ಮತ್ತು ಸಂಸ್ಕೃತಿ ವಿಕಾಸ ಸಂಘದ ಅಧ್ಯಕ್ಷ ಆನಂದ ಸೋರಾಗಾಂವಿ ತಿಳಿಸಿದ್ದಾರೆ....

## ವಧು-ವರ ಸಮಾವೇಶದ ವಿವಿಧ ಸಾಧಕರಿಗೆ ಸನ್ಮಾನ

ಬೆಳಗಾವಿ : ಬೆಳಗಾವಿಯ ಬಣಗಾರ ಸಮಾಜದ ವತಿಯಿಂದ ರವಿವಾರ ಜ 12 ರಂದು ಮುಂಜಾನೆ 10 ಗಂಟೆಗೆ ಬೆಳಗಾವಿಯಲ್ಲಿ 8 ನೇಯ ಅಖಿಲ ಭಾರತ ಮಟ್ಟದ ವಧು-ವರ ಮತ್ತು ಪಾಲಕರ ಸಮಾವೇಶವನ್ನು ಡಾ॥ ಬಿ. ಎಸ್. ಜಿರಗೆ ಸಭಾಂಗಣ, ಜೆ.ಎನ್.ಎಂ.ಸಿ ಆವರಣ ನೆಹರು ನಗರ, ಬೆಳಗಾವಿಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷ ಸಂತೋಷ ಕೊಳಕಿ ತಿಳಿಸಿದ್ದಾರೆ,

ಸಮಾರಂಭದ ಅಧ್ಯಕ್ಷತೆಯನ್ನು ಬಣಗಾರ ಸಮಾಜದ ಜಿಲ್ಲಾಧ್ಯಕ್ಷ ಅರುಣಕುಮಾರ ಜೋತಾವರ ವಹಿಸುವರು,ಮುಖ್ಯ ಅತಿಥಿಗಳಾಗಿ ಹಿರಿಯ ನ್ಯಾಯವಾದಿ ರಮೇಶ ಮಣೂರೆ, ಶಿವಮೊಗ್ಗದ ಬಣಗಾರ ಸಮಾಜದ ಅಧ್ಯಕ್ಷ ವಿರುಪಾಕ್ಷ ಜವಳಿ, ಕಮತಗಿಯ ದೊಡ್ಡನ್ನವರ ಟ್ರೇಡರ್ಸ ಉಪಾಧ್ಯಕ್ಷ ರಾಚಪ್ಪ ಸರಡಗಿ.ಬೆಳಗಾವಿಯ ಸಂಗಮನಾಥ ಕರಡೆಗುದ್ದಿ ಹಾಗೂ ಉದ್ಯಮೇದಾರರಾದ ಪಂಚಾಕ್ಷರಿ ಚೊನ್ನದ, ಶಿವಶಂಕರ ಚೊನ್ನದ ಆಗಮಿಸುವರು, ಸಂಜೆ 4 ಗಂಟೆಗೆ ವಿವಿಧ ಸಾಧಕರನ್ನು ಸನ್ಮಾನಿಸಲಾಗುವದು ಎಂದು ವಧು ವರರ ಸಮಾವೇಶದ ಅಧ್ಯಕ್ಷ ಹೇಮಂತ ಕಿತ್ತೂರ ತಿಳಿಸಿದ್ದಾರೆ,

ಸಮಾವೇಶದ ಕುರಿತಾಗಿ ಹೆಚ್ಚಿನ ಮಾಹಿತಿಗಾಗಿ ಅರುಣಕುಮಾರ ಜೋತಾವರ, ಮೋ ನಂ: 9448635260-9448191690 ಸಂಪರ್ಕಿಸಬೇಕು. ಬೆಳಗಾವಿಯಲ್ಲಿ ನಡೆಯುವ ಈ ಸಮಾವೇಶಕ್ಕೆ ಬಣಗಾರ ಸಮಾಜದ ವಧು-ವರ ಮತ್ತು ಪಾಲಕರು ಆಗಮಿಸಿ ಯಶಸ್ವಿಗೊಳಿಸಲು ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿರುತ್ತಾರೆ.

## ಮಕರ ಸಂಕ್ರಾಂತಿಯ ಪ್ರಯುಕ್ತ ಮೃಗಾಲಯದ ವೀಕ್ಷಣೆಗೆ ಅವಕಾಶ

ಗದಗ : ಗದಗ ಮೃಗಾಲಯವು ಮಕರ ಸಂಕ್ರಾಂತಿಯ ಪ್ರಯುಕ್ತ ಜನೆವರಿ 14 ರಂದು ವೀಕ್ಷಣೆಗೆ ತೆರೆದಿರುತ್ತದೆ. ಸಾಮಾನ್ಯವಾಗಿ ಪ್ರತಿ ಮಂಗಳವಾರದಂದು ಗದಗ ಮೃಗಾಲಯವು ರಜೆ ಇರುತ್ತದೆ. ಆದರೆ ಈ ಹಬ್ಬವನ್ನು ಸಾರ್ವಜನಿಕರು ತಮ್ಮ ಕುಟುಂಬದೊಂದಿಗೆ ವನ್ಯ ಜೀವಿಗಳು ಹಾಗೂ ಪ್ರಕೃತಿಯ ಸೌಂದರ್ಯವನ್ನು ಸವಿಯುವುದರ ಮೂಲಕ ಆಚರಿಸಲು ಅನುಕೂಲವಾಗುವಂತೆ ಜನೆವರಿ 14 ರಂದು ಮಂಗಳವಾರದಂದು ಮೃಗಾಲಯವನ್ನು ವೀಕ್ಷಣೆಗೆ ತೆರೆಯಲಾಗಿದೆ. ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಗದಗ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

*******

## ಶಾಲಾ ಮಟ್ಟದ ವಾರ್ಷಿಕ ಕ್ರೀಡಾಕೂಟ ಸಮಾರಂಭ



ಬೈಲಹೊಂಗಲ- ಮಕ್ಕಳು ಪಠ್ಯೇತರ ಚಟುವಟಿಕೆಗಳ ಜೊತೆಗೆ ಕ್ರೀಡಾ ಮನೋಭಾವನೆ ರೂಡಿಸಿಕೊಂಡಾಗ ಮಾತ್ರ ಸದೃಡ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವೆಂದು ಎಸ್‌ಡಿ-ಎಂಸಿ ಅಧ್ಯಕ್ಷ ಅರ್ಜುನ ಕಲಕುಟಕರ ಹೇಳಿದರು.

ಅವರು ಪಟ್ಟಣದ ಶಾಸಕರ ಮತಕ್ಷೇತ್ರ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆ ನಂ 4 ರಲ್ಲಿ ನಡೆದ ಶಾಲಾ ಮಟ್ಟದ ವಾರ್ಷಿಕ ಕ್ರೀಡಾ ಕೂಟದ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಸರಕಾರ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು ಅವುಗಳನ್ನು ಸದುಪಯೋಗಪಡಿಸಿಕೊಂಡಾಗ ಮಾತ್ರ ಅವುಗಳಿಗೆ ಮಹತ್ವ ಸಿಗಲಿದೆ ಎಂದರು.


ಕ್ಷೇತ್ರ ಸಮನ್ವಯ ಅಧಿಕಾರಿ ಬಿ.ಎನ್.ಕಸಾಳೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಖಾಸಗಿ ಶಿಕ್ಷಣ ಸಂಸ್ಥೆಗಳ ಪೈಪೋಟಿಗಳ ಮಧ್ಯ ಸರಕಾರಿ ಶಾಲೆಯಲ್ಲಿ ಕಲಿತ ಮಕ್ಕಳು ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಿ ಕೀರ್ತಿ ಹೆಚ್ಚಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಕಷ್ಟಪಟ್ಟು ಅಧ್ಯಯನ ಮಾಡಿ ಸಾಧನೆ ಮಾಡುವ ಮೂಲಕ ಪಾಲಕರ ಮತ್ತು ಶಾಲೆಯ ಕೀರ್ತಿ ಹೆಚ್ಚಿಸಿ ರಾಷ್ಟ್ರಾಭಿಮಾನ ರೂಡಿಸಿಕೊಳ್ಳಬೇಕೆಂದರು.

ವ್ುುಖ್ಯೋಪಾಧ್ಯಾಯುುು ಚಂದ್ರಶೇಖರ್ ಶೀಗಿಹಳ್ಳಿ, ಶಿಕ್ಷಕರಾದ ಸಿ.ಎಸ್. ಧರೆಪ್ಪನವರ, ಸಂದೀಪ್ ಕುಲಕರ್ಣಿ, ದೈಹಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಡಿ.ಎನ್. ಹಲಕಿ, ಎಸ್‌ಡಿ-ಎಂಸಿ ಉಪಾಧ್ಯಕ್ಷ್ಯೆ ಗಂಗಮ್ಮ ಸಾಲಿ, ಸದಸ್ಯರಾದ ಮಹಾಂತೇಶ ರಾಜಗೋಳಿ, ಪೂಜಾ ಕೋಟಬಾಗಿ, ರಾಮನಿಂಗ ಗೋಣಿ, ನಾಗರಾಜ ಸಾಲಿಮಠ, ಪವಿತ್ರಾ ತಲ್ಲೂರ, ಜ್ಯೋತಿ ಕುರಬೇಟ, ಭಾರತಿ ಬಾದಾಮಿ, ಮಂಜುಳಾ ಬಂಡಿವಡ್ಡರ ಇನ್ನಿತರ ಸದಸ್ಯರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಸರಸ್ವತಿ ಪೂಜೆ ನೆರವೇರಿಸಲಾಯಿತು.

ಶಿಕ್ಷಕಿ ಎಸ್.ಬಿ.ಮರಲಿಂಗಣ್ಣವರ ಸ್ವಾಗತಿಸಿದರು. ಎಸ್.ಎಂ.ಕರಾಳೆ ನಿರೂಪಿಸಿದರು. ಎ.ಟಿ.ಪಠಾಣಿ ವಂದಿಸಿದರು. ಶಿಕ್ಷಕ ಸಿಬ್ಬಂದಿ, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

********

## ಶ್ರೀ ಸಂಗಮೇಶ್ವರ ಪಿಕೆಪಿಎಸ್‌ನ ಆಡಳಿತ ಮಂಡಳಿಗೆ ಆಯ್ಕೆಯಾದ ನೂತನ ಪ್ರತಿನಿಧಿಗಳಿಗೆ ಸನ್ಮಾನ



ಬೈಲಹೊಂಗಲ- ಗ್ರಾಮೀಣ ಭಾಗದ ರೈತರಿಗೆ ಸರಿಯಾಗಿ ಸಾಲ ವಿತರಿಸಿ ಆರ್ಥಿಕವಾಗಿ ಸಭಲರನ್ನಾಗಿಸಲು ಸಂಸ್ಥೆಯ ಆಡಳಿತ ಮಂಡಳಿಯು ಹೆಚ್ಚಿನ ಒತ್ತು ನೀಡಬೇಕಾಗಿದೆ ಎಂದು ಮಾಜಿ ಶಾಸಕ ಡಾ. ವಿಶ್ವನಾಥ ಪಾಟೀಲ ಹೇಳಿದರು.

ಪಟ್ಟಣದ ವಿದ್ಯಾನಗರದಲ್ಲಿರುವ ತಮ್ಮ ಕಚೇರಿಯಲ್ಲಿ ತಾಲೂಕಿನ ದೊಡವಾಡ ಗ್ರಾಮದ ಶತಮಾನೋತ್ಸವ ಸಂಸ್ಥೆ ಶ್ರೀ ಸಂಗಮೇಶ್ವರ ಪಿಕೆಪಿಎಸ್‌ನ ಆಡಳಿತ ಮಂಡಳಿಗೆ ಆಯ್ಕೆಯಾದ ನೂತನ ಪ್ರತಿನಿಧಿಗಳನ್ನು ಸನ್ಮಾನಿಸಿ ಮಾತನಾಡಿ, ಈ ಸಂಸ್ಥೆಯು ಸುಮಾರು ನೂರು ವರ್ಷಗಳಿಂದ ಶೇರುದಾರರಿಗೆ ಉತ್ತಮ ಸೇವೆ ಒದಗಿಸಿದರ ಪರಿಣಾಮ ಶತಮಾನೋತ್ಸವ ಆಚರಿಸುತ್ತಿರುವದು ಅತ್ಯಂತ ಹರ್ಷದಾಯಕವಾಗಿದೆ ಎಂದರು. ಎಂದರು.

ಶ್ರೀ ಸಂಗಮೇಶ್ವರ ಪಿಕೆಪಿ-ಎಸ್ ಸಹಕಾರ ಸಂಘದ ಅಧ್ಯಕ್ಷ ನಿಂಗಪ್ಪ ಚೌಡಣ್ಣವರ, ಉಪಾಧ್ಯಕ್ಷ ಗುರುನಾಥ ತಡಕೋಡ ಮಾತನಾಡಿ, ದೊಡವಾಡ ಹಾಗೂ ನನಗುಂಡಿಕೊಪ್ಪ ಗ್ರಾಮಗಳ ಎಲ್ಲ ರೈತರ ಮತ್ತು ನಾಗ-ರೀಕರ ಸಹಕಾರದೊಂದಿಗೆ ಸಂಸ್ಥೆಯ ಸಮಗ್ರ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುತ್ತೇವೆ. ಜಿಲ್ಲೆಯ ಮತ್ತು ತಾಲೂಕಿನ ಜನಪ್ರತಿನಿಧಿಗಳ ಮಾರ್ಗದರ್ಶನ ಮತ್ತು ಸಹಕಾರ ಪಡೆದು ಸಂಘವನ್ನು ಅತ್ಯುತ್ತಮ ಸಹಕಾರಿಯಾಗಿಸಲು ಶ್ರಮಿಸುವುದಾಗಿ ಎಂದರು. ಶ್ರೀ ಸಂಗಮೇಶ್ವರ ಪಿಕೆಪಿ-ಎಸ್ ಸಹಕಾರ ಸಂಘದ ಅಧ್ಯಕ್ಷ ನಿಂಗಪ್ಪ ಚೌಡಣ್ಣವರ, ಉಪಾಧ್ಯಕ್ಷ ಗುರುನಾಥ ತಡಕೋಡ, ನಿರ್ದೇಶಕರಾದ ಅಜ್ಜಪ್ಪ ಪಟಾತ, ಬಸವರಾಜ ಮುರಗೋಡ, ಗಿರೀಶ ಧಾರವಾಡ, ಲಕ್ಕಪ್ಪ ಅಲಕ್ಕನವರ, ಗದಿಗೆಪ್ಪ ದೊಡಮನಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ತಾಲೂಕಾ ಕೃಷಿಕ ಸಮಾಜದ ಜಿಲ್ಲಾ ಪ್ರತಿನಿಧಿ ನಾಗನಗೌಡ ಭರಮಗೌಡರ ಉಪಸ್ಥಿತರಿದ್ದರು.

## ವಿವಿಧ ಕಾಮಗಾರಿಗೆ ಭೂಮಿ ಪೂಜೆ




ಹುಕ್ಕೇರಿ : ಶಾಲೆಗಳು ಮೂಲಭೂತ ಸೌಲಭ್ಯಗಳನ್ನು ಹೊಂದಿ ಮಕ್ಕಳಲ್ಲಿ ಕಲಿಕೆಯ ಪೂರಕ ವಾತವರಣದಿಂದ ಉತ್ತಮ ಶಿಕ್ಷಣ ಸಾಧ್ಯವೆಂದು ಶಾಸಕ ನಿಖಿಲ್ ಕತ್ತಿ ಹೇಳಿದರು.

ಅವರು ಗುರುವಾರ ಹುಕ್ಕೇರಿ ಪಟ್ಟಣದ ಉರ್ದು ಪ್ರಾಥಮಿಕ ಶಾಲೆಯ ಆವರಣದಲ್ಲಿ ಹಮ್ಮಿಕೊಂಡ ವಿವಿಧ ಸರಕಾರಿ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳಿಗಾಗಿ 41 ಲಕ್ಷ ರೂ ರೂ ವೆಚ್ಚದ ಕಾಮಗಾರಿಗೆ ಗುದ್ದಲಿ ಪೂಜೆ ನೇರವೇರಿಸಿ ಮಾತನಾಡಿದರು. ಶಾಲೆಗಳ ಅಭಿವೃದ್ದಿಗಾಗಿ, ಶಾಲಾ ಸಮಿತಿಯವರು, ಸಾರ್ವಜನಿಕರು ಕೈಜೋಡಿಸಿದಾಗ ಮಕ್ಕಳಲ್ಲಿ ಗುಣಮಟ್ಟ ಹೆಚ್ಚಾಗುತ್ತದೆ ಎಂದರು.

ಪಟ್ಟಣದ ಶಾಲೆಗಳಿಗೆ ಗಣ-ಕಯಂತ್ರಗಳನ್ನು ನೀಡಬೇಕು ಎಂದು ಶಾಲಾ ಸಮಿತಿಯವರು ಶಾಸಕರಿಗೆ ಮನವಿ ಸಲ್ಲಿಸಿದರು.

ಶಾಸಕರು ಇದಕ್ಕ ಮುನ್ನ ಕ್ಷೇತ್ರದ ಬಡಕುಂದ್ರಿ, ಯರಗಟ್ಟಿ, ಯರನಾಳ, ಮದಮಕ್ಕನಾಳ, ಗೌಡವಾಡ, ಬಸ್ತವಾಡ, ಮದಿಹಳ್ಳಿ, ಬೆಣ್ಣಿವಾಡ, ಸುಲ್ತಾನಪೂರ, ನೋಗನಿಹಾಳ, ಅವರಗೋಳ ವಿವಿಧ ಗ್ರಾಮಗಳ ಸಾರ್ವಜನಿಕ ಸಂಪರ್ಕ ಸಭೆಗಳನ್ನು ಅಧಿಕಾರಿಗಳೊಂದಿಗೆ ನಡೆಸಿ ಕುಂದುಕೊರತೆಗಳನ್ನು ಆಲಿಸಿ ಪರಿಹಾರಕ್ಕಾಗಿ ಸೂಚಿಸಿದರು. ಹಲವು ಬೇಡಿಕೆಗಳ ಇಡೇರಿಕೆಗಾಗಿ ಗ್ರಾಮಸ್ಥರು ಮನವಿ ಸಲ್ಲಿಸಿದರು

ಯರನಾಳ ಗ್ರಾಮದ ಹತ್ತಿರ ಹಿರಣ್ಯಕೇಶಿ ನದಿಗೆ ನಿರ್ಮಿಸುತ್ತಿರುವ ಶ್ರೀ ಅಡವಿಸಿದ್ದೇಶ್ವರ ಯಾತನೀರಾವರಿ ಜಾಕ್ವೆಲ್ ಕಾಮಗಾರಿ ವಿಕ್ಷಣೆ ಮಾಡಿ ಸಂಪೂರ್ಣ ಕಾಮಗಾರಿ ಪೂರ್ತಿಗೊಳಿಸಿ ಶೀಘ್ರದಲ್ಲಿ ಲೋಕಾರ್ಪಣೆಗೊಳಲಿ ಎಂದು ಅಧಿಕಾರಿ ಹಾಗೂ ಗುತ್ತಿಗೆದಾರ-ರಿಗೆ ತಿಳಿಸಿದರು.

ವಿದ್ಯುತ್ ಸಂಘದ ಅಧ್ಯಕ್ಷ ಕಲಗೌಡ ಪಾಟೀಲ, ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆಯ ನಿರ್ದೇಶಕ ಅಶೋಕ ಪಟ್ಟಣಶೆಟ್ಟಿ, ಪಿಎಲ್ ಡಿ ಬ್ಯಾಂಕಿನ ಪರಗೌಡ ಪಾಟೀಲ ಪುರಸಭೆ ಸದಸ್ಯ ರಾಜು ಮುನ್ನೋಳಿ, ಮಾಜಿ ಉಪಾಧ್ಯಕ್ಷ ಶಹಜಾನ ಬಡಗಾವಿ, ಲಖಮಗೌಡ ಪಾಟೀಲ ಆನಂದ ಲಕ್ಕುಂಡಿ, ಬಸವರಾಜ ಗಂಗನ್ನವರ, ಶಾಲಾ ಸಮಿತಿ ಮಹ್ಮದ ರಫಿಕ್ ಮುಜಾವರ, ರಮಜಾನ ಮುಜಾವರ, ಹೈದರಲಿ ಮೋಮಿನ್ ಮುಸ್ತಾಕ್‌ಅಲಿ ಮಕಾನದಾರ, ಪೀರಜಾದೆ ಹೈದರಲಿ ಮಕಾನದಾರ, ಶಂಕರ ತಿಪ್ಪನಾಯಕ, ಮತ್ತಿತರರರು ಉಪಸ್ತಿತ-ರಿದ್ದರು. ತಾಲೂಕಾ ಅಧಿಕಾರಿಗಳಾದ ತಹಶಿಲ್ದಾರ ಮಂಜುಳಾ ನಾಯಕ, ಇಓ ಟಿ.ಆರ ಮಲ್ಲಾಡದ, ಬಿಈಓ ಪ್ರಭಾವತಿ ಪಾಟೀಲ, ರಾಜಶೇಖರ ಪಾಟೀಲ, ಶಶಿಕಾಂತ ವಂದಾಳೆ ನೌಕರ ಸಂಘದ ಅಧ್ಯಕ್ಷ ಅವಿನಾಶ ಹೊಳೆಪ್ಪಗೋಳ, ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

*****

## ಅಪ್ರಚಾರ ಮಾಡುತ್ತಿರುವ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಮನವಿ



ಬೈಲಹೊಂಗಲ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರಾಯೋಜಿತ ಸ್ವಸಹಾಯ ಸಂಘಗಳ ಚಟುವಟಿಕೆಗಳ ಬಗ್ಗೆ ಅಪ್ರಚಾರ ಮಾಡುತ್ತಿರುವ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ಸ್ವಸಹಾಯ ಸಂಘಗಳ ಮಹಿಳಾ ಸದಸ್ಯೆಯರು ಉಪವಿಭಾಗಾಧಿಕಾರಿಗಳಿಗೆ ಹಾಗೂ ಡಿವೈ-ಎಸ್‌ಪಿ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯ ಜಯಂತ ಡಿ. ಎಂಬುವರ ನೇತೃತ್ವದಲ್ಲಿ ಮಂಜುನಾಥ ಮರಶೆಟ್ಟಿ, ಸುನೀಲ ಹಲಗಿ, ಆನಂದ ಪಟಾತ, ಇನ್ನುಳಿದವರು ಧರ್ಮಸ್ಥಳ ಸಂಘದವರು ಆಕ್ರಮ ಬಡ್ಡಿ ದಂದೆ ಮಾಡುತ್ತಿರುವುದನ್ನು ನಿಲ್ಲಿಸಬೇಕೆಂದು ಉಪವಿಭಾಗಾಧಿಕಾ-ರಿಗಳಿಗೆ ಮನವಿ ಸಲ್ಲಿಸುತ್ತಿರುವ ಸುದ್ದಿ ತಿಳಿದ ಸಂಘದ ಮುನ್ನೂರಕ್ಕೂ ಹೆಚ್ಚು ಮಹಿಳೆಯರು ಏಕಾಏಕಿ ಎಸಿ ಕಚೇರಿ ಎದುರು ಜಮಾವಣೆಗೊಂಡು ಧರ್ಮಸ್ಥಳ ಸಂಘದ ಹೆಸರು ಕೆಡಿಸಲು ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದ ವ್ಯಕ್ತಿ ಸ್ಥಳಿಯ ಕೆಲ ವ್ಯಕ್ತಿಗಳಿಗೆ ಹಣ ನೀಡಿ ಪ್ರತಿಭಟಿಸುವಂತೆ ಪ್ುಸ್ಲಾಯಿುಸ್ುತ್ತಿದ್ದಾರೆಂದ್ು ಉಪವಿಭಾಗಾಧಿಕಾರಿಗಳ ಹಾಗೂ ಪೊಲೀಸ ಇಲಾಖೆಗೆ ಮನವರಿಕೆ ಮಾಡಿಕೊಟ್ಟರು.

ಮಹಿಳೆಯರು ಅಪ್ರಚಾರ ನಡೆಸುತ್ತಿರುವ ಕಿಡಿಗೇಡಿಗಳನ್ನು ನಾವು ಬಿಡೆವು, ಬಡ ಮಹಿಳೆಯರ ಆರ್ಥಿಕ ಬಲಿಷ್ಠತೆಗೆ ನೆರವು ನೀಡುತ್ತಿರುವ ಸಂಘದ ಬಗ್ಗೆ ಕೀಳಾಗಿ ಅವಹೇಳನ ಮಾಡುವ ವ್ಯಕ್ತಿ ಇರಲಿ ಅವರ ಮೇಲೆ ಉಗ್ರ ಹೋರಾಟಕ್ಕೆ ಇಳಿಯುವುದಾಗಿ ಮಹಿಳೆಯರು ರೋಷ ವ್ಯಕ್ತಪಡಿಸಿದಲ್ಲದೇ ಸೇರಿದ ಮಹಿಳೆಯರು ಪ್ರವಾಸಿ ಮಂದಿರದಲ್ಲಿ ತಂಗಿದ್ದ ಜಯಂತ ಡಿ. ಹಾಗೂ ಇನ್ನೂಳಿದವರಿಗೆ ಮುತ್ತಿಗೆ ಹಾಕಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ತಾಕತ್ತಿದ್ದರೇ ನೀವು ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡಿ, ಅವಿದ್ಯಾವಂತ ಸ್ವಸಹಾಯ ಸಂಘದ ಮಹಿಳೆಯರಿಗೆ ಇಲ್ಲಸಲ್ಲದ ವಿಚಾರಗಳನ್ನು ಮನಸ್ಸಿನಲ್ಲಿ ಬಿತ್ತಿ ದಾರಿ ತಪ್ಪಿಸುವ ಕೆಲಸ ಮಾಡಬೇಡಿ. ತಮ್ಮ ಸ್ವಾಥ-'ಕ್ಕೆ ಬಡ ಮಹಿಳೆಯರ ಅಶಾಕಿರಣವಾದ ಸಂಘದ ಹೆಸರು ಕೆಡಿಸಲು ಷಡ್ಯಂತ್ರ ಮಾಡುತ್ತಿದ್ದಿಯಾ ಹೊರಗೆ ಬಾರೋ ಎಂದು ಮಹಿಳೆಯರು ಪ್ರವಾಸಿ ಮಂದಿರದಲ್ಲಿ ಆಕ್ರೋಶ ಹೊರ ಹಾಕುತ್ತಿದ್ದಂತೆ ತಕ್ಷಣ ಎಚ್ಚೆತ್ತುಕೊಂಡ ಪೊಲೀಸರು ಪರಿಸ್ಥಿತಿ ವಿಕೋಪಕ್ಕೆ ಹೋಗುವದನ್ನು ಅರಿತು ಮಹಿಳೆಯರ ವಿಶ್ವಾಸ ತೆಗೆದುಕೊಂಡು ಶಾಂತಗೊಳಿಸಿದರು. ಮಹಿಳೆಯರ ಪ್ರತಿಭಟನೆ ಅರಿತ ಸಂಘದ ವಿರುದ್ದ ಅಪ್ರಪಚಾರ ಮಾಡುವ ವ್ಯಕ್ತಿಗಳು ಒಬ್ಬೊಬ್ಬರೆ ಅಲ್ಲಿಂದ ಕಾಲ್ಕಿತ್ತರು ಎಂದು ತಿಳಿದು ಬಂದಿದೆ.

ಧರ್ಮಸ್ಥಳ ಸಂಘದ ಒಳ್ಳೆಯ ಚಟುವಟಿಕೆಗಳನ್ನು ಅಲ್ಲಿದ್ದ ಜನ ಕೊಂಡಾಡುತ್ತಿದ್ದರಲ್ಲದೇ ಅಂತಹ ಒಳ್ಳೆಯ ಸಂಸ್ಥೆಗೆ ಕಪ್ಪುಚುಕ್ಕೆ ತರುತ್ತಿರುವ ಜನರನ್ನು ಧರ್ಮಸ್ಥಳ ಮಂಜುನಾಥನೇ ನೊಡಿಕೊಳ್ಳಲಿ ಎಂದು ಹಿಡಿಶಾಪ ಹಾಕುತ್ತಿರುವುದು ಕಂಡು ಬಂತು. ಉಪವಿಭಾಗಾಧಿಕಾರಿಗಳಿಗೆ ಮನವಿ ಅರ್ಪಿಸಿದ ಸಂಘದ ಮಹಿಳೆಯರಾದ ಚಂದ್ರಿಕಾ ಕಳಂಮಕರ, ರತ್ನಾ ಗೋಧಿ, ಶೈಲಾ ಸಂಗನಗೌಡ್ರ, ರಾಜನಬಿ ನಿರಾಬರ, ಹುಸೇನಬಿ ನದಾಫ ಮಾತನಾಡಿ, ತಾಲೂಕಿನಲ್ಲಿ ಬಡವರ ಕಲ್ಯಾಣಕ್ಕಾಗಿ ಸಮಾಜಮುಖಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿರುವ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು 3085 ಸ್ವಸಹಾಯ ಸಂಘಗಳನ್ನು ರಚಿಸಿ ತರಬೇತಿ ನೀಡಿ, ಸರ್ಕಾರ ಮತ್ತು ಇತರೆ ಸೌಲಭ್ಯಗಳನ್ನು ಪರಿಚಯಿಸಿದ್ದಲ್ಲದೇ ಸಂಘದ ಎಲ್ಲಾ ಸದಸ್ಯರಿಗೆ ಆರ್ಥಿಕ ಸ್ವಾವಲಂಬನೆ ಉದ್ದೇಶಕೋಸ್ಕರ ಬಿ ಸಿ ಕಾರ್ಯಕ್ರಮದಡಿಯಲ್ಲಿ ನಮ್ಮ ಸಂಘದ ಖಾತೆಗಳನ್ನು ಬ್ಯಾಂಕ ಆಫ್ ಮಹಾರಾಷ್ಟ್ರ ಬ್ಯಾಂಕಿನಲ್ಲಿ ಖಾತೆ ತೆರೆದು ಅತಿ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯಗಳನ್ನು ಸಿಗುವಂತೆ ಮಾಡಿ ಎಷ್ಟೊ ಬಡ ಕುಟುಂಬಗಳಿಗೆ ಆರ್ಥಿಕವಾಗಿ ಸಾಲ ನೀಡುವುದರ ಮೂಲಕ ನಮ್ಮ ಸ್ಥಿತಿಗತಿಗಳನ್ನು ಸದೃಡಗೊಳಿಸಿ ಜೀವನ ಶೈಲಿಯನ್ನು ಉತ್ತಮಗೊಳಿಸಿದ್ದಾರೆ. ಸ್ವಸಹಾಯ ಸಂಘಗಳ ವ್ಯವಹಾರವು ಪಾರದರ್ಶಕವಾಗಿದೆ. ಹೀಗಿರುವಾಗ ಕೆಲ ಕಿಡಿಗೇಡಿಗಳು ತಮ್ಮ ಸ್ವಾರ್ಥಕ್ಕಾಗಿ ಯುಟ್ಯೂಬ ಚಾನೆಲಗಳ ಮೂಲಕ ಸುಳ್ಳು ಆರೋಪಗಳನ್ನು ಮಾಡುತ್ತ ಸಂಘದ ಸದಸ್ಯರಿಗೆ ಪಡೆದುಕೊಂಡ ಸಾಲಗಳನ್ನು ಕಟ್ಟಬೇಡಿ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ವ್ಯವಹಾರಗಳನ್ನು ಅಸ್ತವ್ಯಸ್ತಗೊಳಿಸಲು ಜಯಂತ ಶೆಟ್ಟಿ, ಗೀರಿಶ ಮಟ್ಟಣ್ಣವರ, ರವೀಂದ್ರ ಶೆಟ್ಟಿ, ಸಂತೋಷ ಶೆಟ್ಟಿ ಸುನೀಲ ಹಲಗಿ, ಮಂಜುನಾಥ ಮರಶೆಟ್ಟಿ, ಆನಂದ ಪಟಾತ ಎಂಬುವರು ಹುನ್ನಾರ ಮಾಡುತ್ತಿದ್ದಾರೆ. ಇವರುಗಳು ಕಾನೂನು ಸುವ್ಯವಸ್ಥೆ ಹದಗೆಡಿಸುವ ಮೊದಲೇ ಮುನ್ನೆಚ್ಚರಿಕೆ ಕ್ರಮವಾಗಿ ಇವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿಯಲ್ಲಿ ತಿಳಿಸಲಾಗಿದ್ದು ಇಂತಹ ಚಟುವಟಿಕೆಗಳನ್ನು ಇನ್ನೂ ಮಾಡಿದ್ದಾದರೆ ತಾಲೂಕಿನ ಸಂಘದ ಮಹಿಳೆಯರು ಬೀದಿಗಿಳಿದು ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಗೀರಿಜಾ ದೇವಲತ್ತಿ, ಮಹಾದೇವಿ ಅರಳಿಗಿಡದ, ಸುರೇಖಾ ಹುಲಮನಿ, ನಿರ್ಮಲಾ ಭಜಂತ್ರಿ ಸೇರಿದಂತೆ ಮಹಿಳೆಯರು ಇದ್ದರು.

# ಫೈನಾನ್ಸ ಕಂಪನಿಯಿಂದ ಬಾಣಂತಿ ಹಸುಗೂಸು ಪರದಾಟ



ಮೂಡಲಗಿ : ತಂದೆ ಮಾಡಿದ ಸಾಲಕ್ಕೆ ಮಗಳು ಬಾಣಂತಿ ಹಾಗೂ ಒಂದು ತಿಂಗಳು ಕೂಸು ಕೊರೆಯುವ ಚಳಿಯಲ್ಲಿ ಮನೆಯಂಗಳದಲ್ಲಿ ಮಲಗಿದ ಘಟನೆ ಮೂಡಲಗಿ ತಾಲೂಕಿನ ನಾಗನೂರ ಪಟ್ಟಣದಲ್ಲಿ ಜರುಗಿದೆ,

ನಾಗನೂರ ಗ್ರಾಮದ ಸೈದಪ್ಪ ಗದಾಡಿ ಎನ್ನುವ ರೈತ ಚಿಕ್ಕೋಡಿಯ ಒಂದು ಫೈನಾನ್ಸನಿಂದ 2021ರಲ್ಲಿ 5 ಲಕ್ಷ ಹೈನುಗಾರಿಕೆಯ ಮೇಲೆ ಸಾಲ ಪಡೆದಿದ್ದರು, ಪಶುಗಳ ಸಾವಿನಿಂದ ಹಣ ತುಂಬಲಾಗದ ಪರಿಸ್ಥಿಯಲ್ಲೂ ಅವರು 3.50 ಲಕ್ಷದ ವರಗೆ ಹಣ ಪಾವತಿಸಿದ್ದರೂ ಇನ್ನು 4 ಲಕ್ಷದ ಮೇಲೆ ಹಣ ತುಂಬುವಂತೆ ಫೈನಾನ್ಸ ಕಂಪನಿಯವರು ನೋಟಿಸ ನೀಡಿದ್ದರು ಹಣ ತುಂಬದ ಕಾರಣ ಫೈನಾನ್ಸ ಕಂಪನಿಯವರು ನ್ಯಾಯಾಲಯದಿಂದ ಮನೆ ಜಪ್ತಿ ಆದೇಶವನ್ನು ಪಡೆದು ಪೋಲಿಸ ಸಹಾಯದಿಂದ ಕೇವಲ 1 ತಿಂಗಳು 10 ದಿನಗಳ ಹಿಂದೆ ಹೆರಿಗೆಯಾದ ಸೈದಪ್ಪ ಗದಾಡಿ ಅವರ ಮಗಳನ್ನು ಹಾಗೂ ಹಸುಗೂಸನ್ನು ಮನೆಯಿಂದ ಹೊರಹಾಕಿ ಬಾಗಿಲಿಗೆ ಬೀಗ ಹಾಕಿ ತಮ್ಮ ಕಂಪನಿಯ ನೋಟಿಸನ್ನು ಅಂಟಿಸಿದ್ದರು, ಸಾಲ ಮಾಡಿದ ಅಜ್ಜನ ಸಲುವಾಗಿ ಕಣ್ಣು ಬಿಡದ ಮೊಮ್ಮಗ ಕೊರೆಯುವ ಚಳಿಯಲ್ಲಿ ರಸ್ತೆಯಲ್ಲಿ ಮಲಗಬೇಕಾಯಿತು ಹೆರಿಗೆಗೆ ಬಂದ ಮಗಳು ತಂದೆಯ ಪರಿಸ್ಥಿಯ ಕಂಡು ಮರಗಬೇಕಾ ? ಹೆತ್ತ ಮಗುವಿನ ಅಳುವ ಆಂಕ್ರದನ ಕೇಳಬೇಕಾ ಎಂಬ ಗೊಂದಲದಲ್ಲಿ ಮಾಧ್ಯಮದ ಮುಂದೆ ಕಣ್ಣಿರು ಹಾಕುತ್ತಿರುವ ದೃಶ್ಯ ಎಲ್ಲರನ್ನು ಮೌನಿಯಾಗಿಸಿತು,

# ರೈತರಿಗೆ ಸಕಾಲಕ್ಕೆ ಮಳೆ ಬಂದು ಬೆಳೆಗೆ ಉತ್ತಮ ಬೆಲೆ ಸಿಗಲಿ: ಶಾಸಕ ವಿಶ್ವಾಸ ವೈದ್ಯ



ಯರಗಟ್ಟಿ : ಸಮೀಪದ ದಾಸನಾಳ ಗ್ರಾಮದಲ್ಲಿ ಶ್ರೀ ಗುರು ಚಕ್ರವರ್ತಿ ಸದಾಶಿವ ಮುತ್ಯಾರ ಮತ್ತು ಶ್ರೀ ಶಿವರುದ್ರಯ್ಯ ಹಾಗೂ ಶಿವಮ್ಮ ತಾಯಿ ಮತ್ತು ಸಂಪತ್ ದೇವರ ಜಾತ್ರಾ ಮಹೋತ್ಸವದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ವಿಶ್ವಾಸ ವೈದ್ಯ ಸದಾಶಿವ ಅಜ್ಜನವರ ಅಧ್ಬುತ ಪವಾಡಗಳು ಇವೆ.

ಇಲ್ಲಿನ ಜನರು ಅಜ್ಜನ ಜಾತ್ರೆ ಅದ್ದೂರಿಯಿಂದ ಮಾಡುತ್ತಿರುವುದು ತುಂಬಾ ಸಂತೋಷ. ಸದಾಶಿವ ಅಜ್ಜನವರು ರೈತರಿಗೆ ಸಕಾಲಕ್ಕೆ ಮಳೆ ಬಂದು ಬೆಳೆಗೆ ಉತ್ತಮ ಬೆಲೆ ಸಿಗಲಿ ಎಂದು ಸದಾಶಿವನಲ್ಲಿ ಪ್ರಾರ್ಥಿಸಿದರು.

ದಾಸನಾಳ ಗ್ರಾಮ ನಂಬಿಕೆಯ ಗ್ರಾಮ. ಇಲ್ಲಿ ದನಗಳ ಜಾತ್ರೆ ಸಹ ಅದ್ದೂರಿಯಾಗಿ ನಡೆಯುತ್ತದೆ ತುಂಬಾ ಸಂತೋಷ ಎಂದು ಮಾತನಾಡಿದರು.

ಈ ಸಂದರ್ಭದಲ್ಲಿ ದಾಸೋಹ ಚಕ್ರವರ್ತಿ ಸದಾಶಿವ ಅಜ್ಜನವರು, ಭಾಗೋಜಿಕೊಪ್ಪದ ಮ ಘ ಚ ಮುರುಘರಾಜೇಂದ್ರ ಸ್ವಾಮೀಜಿ, ದಾಸನಾಳದ ಶಿವರುದ್ರಯ್ಯ ಅಜ್ಜನವರು, ಎಪಿಎಂಸಿ ಅಧ್ಯಕ್ಷರಾದ ನೀಲಕಂಠ ಶಿದಬಸನ್ನವರ, ಕೆಎಂಎಫ್ ನಿರ್ದೇಶಕರಾದ ಶಂಕರ ಇಟ್ನಾಳ, ಪ್ರಕಾಶ ವಾಲಿ, ಬಂಗಾರೆಪ್ಪ ಹರಳಿ, ಬಸು ಸತ್ತೂರಿ, ಗ್ರಾ.ಪ. ಸದಸ್ಯ ಪಾಂಡಪ್ಪ ಬಿರಕನ್ನವರ, ಪಿಕೆಪಿಎಸ್ ಸದಸ್ಯ ಭೀಮಪ್ಪ ಕೌಜಲಗಿ ,ಉಮೇಶ ಹೊಸೂರ, ಅಡಿವೆಪ್ಪಗೌಡ ಪಾಟೀಲ, ವಿಠ್ಠಲ ಶಿಂತ್ರಿ, ಈರಪ್ಪ ಅಂಗಡಿ, ವಿಠ್ಠಲ ದಳವಾಯಿ, ಲಕ್ಷ್ಮಣ ದಳವಾಯಿ, ಗೋಪಾಲ ದಳವಾಯಿ, ಮುತ್ತು ಅಣ್ಣಿಗೇರಿ,ಬಸಪ್ಪ ಅರಭಾವಿ, ಅಣ್ಣೇಶಗೌಡ ಪಾಟೀಲ, ಹಣಮಂತ ಪೂಜೇರ, ಗಿಡ್ಡಪ್ಪ ಖಂಡ್ರಿ, ಪರಮೇಶ ಚತ್ರಕೋಟಿ, ವಿಕ್ರಮ ಇಂಗಳೆ ನಿರೂಪಿಸಿ ವಂದಿಸಿದರು.

*********

# ಪಿಡ್ಸ್‌ಪೋರ್ಡ್‌ದ ಕೌನ್ಸಿಲರ್ ನವೀನ ಹಾವಣ್ಣವರರಿಗೆ ಸನ್ಮಾನ



ಬಸವನಬಾಗೇವಾಡಿ : ತಾಲೂಕಿನ ಮನಗೂಳಿ ಪಟ್ಟಣದ ಹಿರೇಮಠಕ್ಕೆ ಮಂಗಳವಾರ ರಾತ್ರಿ ಭೇಟಿ ನೀಡಿದ ನ್ಯೂಯಾರ್ಕ್ ರಾಜ್ಯದ ರೋಚೆಸ್ಟ್ ಜಿಲ್ಲೆಯ ಪಿಡ್ಸ್‌ಪೋರ್ಡ್ ಕೌನ್ಸಿಲರ್‌ಯಾಗಿ ಆಯ್ಕೆಯಾದ ನವೀನ ಹಾವಣ್ಣವರ ಅವರನ್ನು ಶ್ರೀಮಠದ ಅಭಿನವ ಸಂಗನಬಸವ ಶಿವಾಚಾರ್ಯ ಸ್ವಾಮೀಜಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶ್ರೀಗಳು ನವೀನ ಹಾವಣ್ಣವರ ಮೂಲತಃ ಮನಗೂಳಿ ಪಟ್ಟಣದವರು. ರೈತ ಕುಟುಂಬದಲ್ಲಿ ಜನಿಸಿದ ಇವರು ತಮ್ಮ ಕ್ರಿಯಾಶೀಲತೆಯಿಂದಾಗಿ ಇಂದು ಅಮೇರಿಕಾದ ನ್ಯೂಯಾರ್ಕ್ ರಾಜ್ಯದ ರೋಚೆಸ್ಟ್ ಜಿಲ್ಲೆಯ ಪಿಡ್ಸ್‌ಪೋರ್ಡ್‌ಕ್ಕೆ 33 ಮತಗಳನ್ನು ಪಡೆದು ಕೌನ್ಸಿಲರ್‌ಯಾಗಿ ಆಯ್ಕೆಯಾಗಿರುವದು ಮನಗೂಳಿ ಪಟ್ಟಣಕ್ಕೆ ಹೆಮ್ಮೆಯ ಸಂಗತಿ. ಪ್ರತಿಯೊಬ್ಬ ರೈತನ ಮಕ್ಕಳು ಏನಾದರೂ ಸಾಧನೆ ಮಾಡಬೇಕೆಂಬುವದಕ್ಕೆ ಇವರು ಪ್ರೇರಣೆಯಾಗಿದ್ದಾರೆ ಎಂದರು. ಈ ಸಂದರ್ಭದಲ್ಲಿ ಶ್ರೀಶೈಲ ಮನಗೂಳಿ, ಶ್ರವಣ ಕೊಟ್ಯಾಳ, ರಮೇಶ ಹಾವಣ್ಣವರ, ಮಂಜು ಬನಸೋಡೆ, ಮಹಾಂತೇಶ ಮನಗೂಳಿ, ಭೀಮು ಬನ್ನೂರ ಇತರರು ಇದ್ದರು.

******

# ಹ್ಯೂಮನ್ ಮೆಟಾನ್ಯೂಮೋ ವೈರಸ್ (HMPV) ಸೋಂಕು: ಭಯ ಬೇಡ- ಜಾಗೃತಿ ಇರಲಿ

ಗದಗ : ಹ್ಯೂಮನ್ ಮೆಟಾನ್ಯೂಮೋ ವೈರಸ್ ಶ್ವಾಸಕೋಶದ ಸಮಸ್ಯೆಗೆ ಕಾರಣವಾಗುವ ವೈರಸ್. ಇದು ಎಲ್ಲ ವಯೋಮಾನದವರಲ್ಲೂ ಕಾಣಿಸಿಕೊಳ್ಳಬಹುದು. ವಿಶೇಷವಾಗಿ ಮಕ್ಕಳು, ವಯೋವೃದ್ಧರು ಹಾಗೂ ರೋಗ ನಿರೋಧಕ ಶಕ್ತಿ ಕೊರತೆ ಇರುವವರನ್ನು ಹೆಚ್ಚಿಗಿ ಬಾಧಿಸುವ ಸಂಭವವಿರುತ್ತದೆ.

ಈ ವೈರಾಣು ಹೊಸದಲ್ಲ. 2001ರಲ್ಲಿ ಮೊದಲ ಬಾರಿ ಈ ವೈರಸ್ ಕಾಣಿಸಿಕೊಂಡಿದ್ದು, ವಿಶ್ವದೆಲ್ಲೆಡೆ ಈ ವೈರಾಣು ಚಾಲ್ತಿಯಲ್ಲಿದೆ. ಹೀಗಾಗಿ ಹ್ಯೂಮನ್ ಮೆಟಾನ್ಯೂಮೋ ವೈರಸ್‌ಗೆ ಯಾರೂ ಭಯ ಪಡುವ ಅಗತ್ಯವಿಲ್ಲ ಬದಲಾಗಿ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಹಾಗೂ ಜಿಲ್ಲಾ ಸಮೀಕ್ಷಣಾ ಘಟಕದ ಜಿಲ್ಲಾ ಸಮೀಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹ್ಯೂಮನ್ ಮೆಟಾನ್ಯೂಮೋ ವೈರಸ್ ಲಕ್ಷಣಗಳು : ಕೆಮ್ಮು, ಜ್ವರ, ಗಂಟಲು ತೊಂದರೆ, ಮೂಗು ಸೋರುವಿಕೆ, ಉಸಿರಾಟದ ತೊಂದರೆ ಹಾಗೂ ದದ್ದುಗಳು ಕಾಣಿಸಿಕೊಳ್ಳಬಹುದು.

ಹ್ಯೂಮನ್ ಮೆಟಾನ್ಯೂಮೋ ವೈರಸ್ ಹರಡುವ ವಿಧಾನ : ಕೆಮ್ಮುವಾಗ ಅಥವಾ ಸೀನುವಾಗ ಹೊರಬರುವ ಕಣಗಳಿಂದ ಈ ಸೋಂಕು ಹರಡುತ್ತದೆ. ನೇರ ಸಂಪರ್ಕದಿಂದ ಅಥವಾ ವೈರಸ್‌ನಿಂದ ಕಲುಷಿತವಾದ ವಸ್ತುಗಳನ್ನು ಸ್ಪರ್ಶಿಸುವ ಮೂಲಕ ಹರಡುತ್ತದೆ.

ಹ್ಯೂಮನ್ ಮೆಟಾನ್ಯೂಮೋ ವೈರಸ್ ಮುಂಜಾಗ್ರತಾ ಕ್ರಮಗಳು

ಮಾಡಬೇಕಾದದ್ದು : ಕೆಮ್ಮುವಾಗ ಅಥ-ವಾ ಸೀನುವಾಗ ಕರವಸ್ತ್ರ ಅಥವಾ ಟಿಶ್ಯೂ ಪೇಪರ್ ಬಳಸಿ.ಪದೇ ಪದೇ ಕೈಯನ್ನು ಸೋಪಿನಿಂದ ಅಥ-ವಾ ಸ್ಯಾನಿಟೈಸರ್‌ನಿಂದ ತೊಳೆಯುವುದು. ಜನನಿಬಿಡ ಪ್ರದೇಶದಿಂದ ದೂರವಿರಿ.ಸಾಧ್ಯವಾದಷ್ಟು ನೀರು ಮತ್ತು ಪೋಷಕಾಂಶಯುಕ್ತ ಆಹಾರವನ್ನು ಸೇವಿಸಿ.

ಮಾಡಬಾರದ್ದು : ಒಮ್ಮೆ ಬಳಸಿದ ಕರವಸ್ತ್ರ ಮತ್ತು ಟಿಶ್ಯೂ ಮರುಬಳಕೆ ಬೇಡ. ಅನಾರೋಗ್ಯಕ್ಕೆ ಒಳಗಾದವರ ಟವೆಲ್ ಸೇರಿದಂತೆ ಇತರ ವಸ್ತುಗಳ ಬಳಕೆ ಬೇಡ. ಪದೇ-ಪದೇ ಕಣ್ಣು, ಮೂಗು, ಬಾಯಿ ಮುಟ್ಟಿಕೊಳ್ಳಬೇಡಿ. ಸಾರ್ವಜನಿಕ ಸ್ಥಳದಲ್ಲಿ ಉಗುಳಬೇಡಿ. ವೈದ್ಯರ ಸಂಪರ್ಕಕ್ಕೆ ಒಳಗಾಗದೇ ಸ್ವಯಂ ಚಿಕಿತ್ಸೆ ಬೇಡ.

******

# ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್ ಟ್ಯಾಪ್ ವಿತರಣೆ



ಗೋಕಾಕ: ವಿದ್ಯಾರ್ಥಿಗಳ ಶೈಕ್ಷಣಿಕ ಅನುಕೂಲಕ್ಕಾಗಿ ಲ್ಯಾಪ್ ಟ್ಯಾಪ್ಗಳನ್ನು ನೀಡಲಾಗುತ್ತಿದ್ದು, ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ವಿಧ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಇಲ್ಲಿಯ ಎನ್‌ಎಸ್‌ಎಫ್ ಕಾರ್ಯಾಲಯದಲ್ಲಿ ಅರಭಾವಿ ಪಟ್ಟಣ ಪಂಚಾಯತ್ ಸಮಿತಿಯಿಂದ ಉನ್ನತ ವ್ಯಾಸಂಗ ಮಾಡುತ್ತಿರುವ ಮೆಡಿಕಲ್ ಮತ್ತು ಇಂಜನಿಯರಿಂಗ್ ವಿಧ್ಯಾರ್ಥಿಗಳಿಗೆ ಲ್ಯಾಪ್ ಟ್ಯಾಪ್ ವಿತರಿಸಿ ಮಾತನಾಡಿದ ಅವರು, ಸರ್ಕಾರದ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಅವರು ತಿಳಿಸಿದರು.

ನಗರೋತ್ಥಾನ ಯೋಜನೆಯಡಿ 4ರ ಹಂತದಲ್ಲಿ ಈ ಪಟ್ಟಣ ಪಂಚಾಯತ್ ವ್ಯಾಪ್ತಿಯ 6 ವಿಧ್ಯಾರ್ಥಿಗಳಿಗೆ ಲ್ಯಾಪ್ ಟ್ಯಾಪ್ಗಳನ್ನು ವಿತರಿಸಲಾಗುತ್ತಿದೆ. ಉನ್ನತ ವ್ಯಾಸಂಗ ಮಾಡುತ್ತಿರುವ ಬಡ ಕುಟುಂಬಗಳ ವಿಧ್ಯಾರ್ಥಿಗಳಿಗೆ ಇದರಿಂದ ಅನುಕೂಲ ಆಗುತ್ತಿದೆ. ಇಂಜನಿಯ-ರಿಂಗ್ ಮತ್ತು ಮೆಡಿಕಲ್ ಕಲಿಯುತ್ತಿರುವ ಮಕ್ಕಳಿಗೆ ಅನುಕೂಲವಾಗಲಿದೆ. ಬಡ ಕುಟುಂಬಗಳನ್ನು ಉತ್ತೇಜಿಸಲು ಸರಕಾರವು ಇಂಥ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿದೆ ಎಂದು ಹೇಳಿದರು.

ಅರಭಾವಿ ಪಟ್ಟಣ ಪಂಚಾಯತ್ ವ್ಯಾಪ್ತಿಯ ಎಸ್‌ಸಿ/ಎಸ್ಟಿ ಕುಟುಂಬಗಳ ಫಲಾನುಭವಿಗಳಿಗೆ ಸೋಲಾರ್ ವಿತರಿಸುವ ಕಾರ್ಯವು ಸಹ ನಡೆಯುತ್ತಿದೆ. ಸುಮಾರು 21 ಲಕ್ಷ ರೂ. ವೆಚ್ಚದಲ್ಲಿ ಸೋಲಾರ್ ಅಳವಡಿಕೆ ಮಾಡುತ್ತಿದ್ದು, ಇದರಲ್ಲಿ 86 ಎಸ್ಸಿ ಮತ್ತು 22 ಎಸ್ಟಿ ಕುಟುಂಬಗಳನ್ನು ಆಯ್ಕೆ ಮಾಡಲಾಗಿದೆ. ಟೆಂಡರ್ ಪ್ರಕ್ರಿಯೆ ಮುಗಿದ ಬಳಿಕ ಫಲಾನುಭವಿಗಳಿಗೆ ಈ ಯೋಜನೆಯು ತಲುಪಲಿದೆ ಎಂದು ಅವರು ತಿಳಿಸಿದರು.

ಲ್ಯಾಪ್ ಟ್ಯಾಪ್ ವಿತರಣೆ: ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಇದೇ ಸಂದರ್ಭದಲ್ಲಿ ಉನ್ನತ ವ್ಯಾಸಂಗ ಮಾಡುತ್ತಿರುವ ಮೆಡಿಕಲ್ ಮತ್ತು ಇಂಜನಿಯರಿಂಗ್ ವಿಧ್ಯಾರ್ಥಿಗಳಿಗೆ ಲ್ಯಾಪ್ ಟ್ಯಾಪ್ ಗಳನ್ನು ವಿತರಿಸಿದರು.

ಅರುಣ್ ಸುರೇಶ ಗಾಡಿವಡ್ಡರ್, ಸೌಭಾಗ್ಯ ಲಕ್ಕಪ್ಪ ಮಾದರ, ಸೌಂದರ್ಯ ರಾಮಪ್ಪ ಪೂಜೇರಿ, ಕೆದಾರ್ಲಿಂಗ್ ಮಾರುತಿ ಮಾಳಿ, ವಿಶಾಲ್ ವಿಠ್ಠಲ್ ಸಮದವರ, ಮಹಾದೇವ ಕಡಲಗಿ ಅವರಿಗೆ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಪಟ್ಟಣ ಪಂಚಾಯತ್ ಸಮಿತಿಯಿಂದ ಲ್ಯಾಪ್ ಟ್ಯಾಪ್ ವಿತರಿಸಿದರು.

ಶಾಸಕ ಬಾಲಚಂದ್ರ ಜಾರಕಿಹೊಳಿ ಅವರನ್ನು ಪಟ್ಟಣ ಪಂಚಾಯತ್ ಸಮಿತಿಯಿಂದ ಸತ್ಕರಿಸಲಾಯಿತು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತ್ ಸದಸ್ಯರಾದ ನಿಂಗಪ್ಪ ಇಳಿಗೇರಿ, ಅಡಿವೆಪ್ಪ ಬಿಲಕುಂದಿ, ಸುರೇಶ್ ದೊಡ್ಡಲಿಂಗಣ್ಣವರ, ಬಾಳೇಶ್ ನಾನಪ್ಪಗೋಳ, ರಮೇಶ್ ಸಂಪಗಾವಿ, ಹಣಮಂತ ಕೇಂದಾರಿ, ಮುಖ್ಯಾಧಿಕಾರಿ ವಿನಾಯಕ ಬಬಲೇಶ್ವರ, ಕರೆಪ್ಪ ಗಡ್ಡಿ ಸೇ-ರಿದಂತೆ ಅನೇಕರು ಉಪ್ಥಿತರಿದ್ದರು.

# ರಾಷ್ಟ್ರೀಯ ಖೋ-ಖೋ ತಂಡಕ್ಕೆ ಆಯ್ಕೆ



ಮೂಡಲಗಿ : ಸ್ಥಳಿಯ ಶ್ರೀ ಶ್ರೀಪಾದಬೋಧ ಸ್ವಾಮೀಜಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಥಮ ವರ್ಷದ ಬಿ. ಎ. ವಿದ್ಯಾರ್ಥಿ ಚಂದ್ರಕಾಂತ ಯಡ್ರಾಮಿ ಅವರು ಗೋವಾದ ಮಾಪುಸಾದಲ್ಲಿ ನಡೆದ 3ನೆಯ ರಾಷ್ಟ್ರೀಯ ಯುವ ಕ್ರೀಡಾಕೂಟದ 21 ವರ್ಷದೊಳಗಿನ ಖೋ-ಖೋ ವಿಭಾಗದಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿ ಫೈನಲ್ ಪಂದ್ಯದಲ್ಲಿ ಮಹಾರಾಷ್ಟ್ರದ ವಿರುದ್ಧ ಗೆದ್ದು, ಚಿನ್ನದ ಪದಕದೊಂದಿಗೆ ಭಾರತ ರಾಷ್ಟ್ರೀಯ ಖೋ-ಖೋ ತಂಡದಲ್ಲಿ ಸ್ಥಾನವನ್ನು ಪಡೆದುಕೊಂಡಿರುತ್ತಾರೆ. ಈ ಸಾಧನೆಯ ಮೂಲಕ ಮಹಾವಿದ್ಯಾಲಯದ ಕೀರ್ತಿಯನ್ನು ಬೆಳಗಿದ ವಿದ್ಯಾರ್ಥಿಗೆ ಕಾಲೇಜು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ, ಪ್ರಾಂಶುಪಾಲ ಮಹೇಶ ಕಂಬಾರ, ಸರ್ವ ಸದಸ್ಯರು, ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ಖೇಲೋ ಇಂಡಿಯಾ ಸ್ಪರ್ಧೆಗೆ ಆಯ್ಕೆ



ಮೂಡಲಗಿ : ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥ-ಮ ದರ್ಜೆ ಕಾಲೇಜಿನ ವಿದ್ಯಾರ್ಥಿ ಸಂಜು ಘೋಡಗೇರ ಖೇಲೋ ಇಂಡಿಯಾ ಯೋಗ ಸ್ಪರ್ಧೆಗೆ ಆಯ್ಕೆಯಾಗಿದ್ದಾನೆ.

ಡಿಸೆಂಬರ್ 24 ರಿಂದ 28ರ ವರೆಗೆ ಓರಿಸ್ಸಾ ರಾಜ್ಯ ಭುವನೇಶ್ವರದ ಕಳಿಂಗ ವಿಶ್ವವಿದ್ಯಾಲಯದಲ್ಲಿ ಜರುಗಿದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಯೋಗಾಸನ ಚಾಂಪಿಯನಶಿಪ್- 2024 ಸ್ಪರ್ಧೆಯಲ್ಲಿ ಭಾರತ ದೇಶದ 235ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳ ಪುರುಷ ಹಾಗೂ ಮಹಿಳಾ ತಂಡಗಳು ಭಾಗವಹಿಸಿದ್ದವು. ಸ್ಪರ್ಧೆಯಲ್ಲಿ ಭಾಗಬಹಿಸಿದ್ದ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪುರುಷರ ಯೋಗ ತಂಡ ಖೇಲೋ ಇಂಡಿ-ಯಾ ಸ್ಪರ್ಧೆಗೆ ಅರ್ಹತೆ ಪಡೆದಿದೆ. ಸಂಜು ಘೋಡಗೇರ ತಂಡದ ನಾಯಕನಾಗಿ, ಖೇಲೋ ಇಂಡಿಯಾ ಸ್ಪರ್ಧೆಗೆ ಆಯ್ಕೆಯಾಗುವ ಮೂಲಕ ವಿಶ್ವವಿದ್ಯಾಲಯಕ್ಕೆ ಹಾಗೂ ಮಹಾವಿದ್ಯಾಲಯಕ್ಕೆ ಕೀರ್ತಿತಂದಿದ್ದಾನೆ. ಸಾಧನೆಗೈದ ಕ್ರೀಡಾಪಟುವನ್ನು ಸಂಸ್ಥೆಯ ಅಧ್ಯಕ್ಷ ಬಸಗೌಡ ಪಾಟೀಲ, ಆಡಳಿತ ಮಂಡಳಿ ಸದಸ್ಯರು, ಪ್ರಾಚಾರ್ಯ ಡಾ. ಸುರೇಶ ಹನಗಂಡಿ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

# ಜಾನಪದ ಕಲಾ ಸೌರಭ : ಸಂಭ್ರಮ



ಯರಗಟ್ಟಿ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಹಾಗೂ ಡಾ.ಬಿ.ಆರ್ ಅಂಬೇಡ್ಕರ ಜಾನಪದ ಕಲಾ ಪೋಷಕ ಸಂಘ, ತಾವಲಗೇರಿ ಇವರ ಸಂಯುಕ್ತ ಆಶ್ರಯದಲ್ಲಿ ಜಾನಪದ ಕಲಾ ಸೌರಭ ಕಾರ್ಯಕ್ರಮವನ್ನು ಸಮೀಪದ ತಾವಲಗೇರಿ ಗ್ರಾಮದ ಅಂಬೇಡ್ಕರ ಗಲ್ಲಿಯಲ್ಲಿ ನೇರವೇರಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಕೆ.ಡಿ.ಪಿ ಸಂಸ್ಥಾಪಕ ಹಾಗೂ ರಾಜ್ಯಾಧ್ಯಕ್ಷ ಡಾ. ರಮೇಶ ಹರಿ-ಜನ, ರೀಬನ್ ಕಟ್ ಮಾಡುವ ಮೂಲಕ ಚಾಲನೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಬಿಜೆಪಿ ಮುಖಂಡರು ಮಡಿವಾಳಪ್ಪ ಬೀದರಗಡ್ಡಿ, ಜನರ ಬಾಯಿ ಮಾತಿನ ಮೂಲಕ ಹರಡಿರುವ ಜಾನಪದ ಕಲೆಯನ್ನು ಉಳಿಸಿ ಬೆಳೆಸಬೇಕಾಗಿದ್ದು, ಇದು ಪ್ರತಿಯೊಬ್ಬರ ಕರ್ತವ್ಯ ಆಗಬೇಕು. ವಚನ ಚಳವಳಿ, ದಾಸ ಸಾಹಿತ್ಯ, ಸೂಫಿ ಪರಂಪರೆ ಜಾನಪದದ ಕೊಡುಗೆ ಆಗಿದೆ ಎಂದು ಹೇಳಿದರು.

ಯಾವುದೇ ಕಲೆ ಸಮಾಜದ ಒಳಿತಿಗೆ, ಮನುಷ್ಯನ ಬೆಳವಣಿಗೆಗೆ ಪೂರಕವಾಗಿ ಸ್ಪಂದಿಸಬೇಕು. ಆಗಲೇ ಕಲೆಗೆ ಒಂದು ಸಾರ್ಥಕತೆ ಮತ್ತು ಅರ್ಥ ಬರುತ್ತದೆ ಎಂದು ತಿಳಿಸಿದರು.

ಈ ವೇಳೆ ಶಿವಾನಂದ ಮಾದರ, ಪ್ರಕಾಶ ಹರಿಜನ, ಸಂತೋಷ ಅವಜಪ್ಪಗೋಳ, ದ್ಯಾಮಣ್ಣಾ ಬಂಡಿವಡ್ಡರ, ಲಖಪ್ಪ ಕುರಿ, ಮಹಾದೇವ ಗಡ್ಡಿ, ಗೌಡಪ್ಪ ತಳನಟ್ಟಿ ಇದ್ದರು.

ಜಾನಪದ ಗೀತೆ, ಜಾನಪದ ನೃತ್ಯ, ಕೋಲಾಟ, ಭಜನೆ, ಡೋಳ್ಳಿನ ಪದಗಳು, ಲಾವಣಿ ಪದಗಳು, ಸೋಬಾಣ ಪದಗಳು, ಸಂಪ್ರದಾಯ ಪದಗಳು, ಸಂಗ್ಯಾ-ಬಾಳ್ಯಾ ಸಣ್ಣಾಟಗಳು ಜರುಗಿದವು. ಕಾರ್ಯಕ್ರಮ ನಿರೂಪಣೆ ಬಸವರಾಜ ಹರಿಜನ, ವಂದನಾರ್ಪಣೆ ಯಮನವ್ವ ಜೋಕಾನಟ್ಟಿ ಮಾಡಿದರು.

# ತಾಲೂಕ ಮಟ್ಟದ ಕ್ರೀಡಾಕೂಟ ಉದ್ಘಾಟನೆ




ಬಾಗಲಕೋಟೆ : ಮನುಷ್ಯನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುವ ಕ್ರೀಡಾ ಕ್ಷೇತ್ರದಲ್ಲಿ ಪ್ರತಿಯೊಬ್ಬರೂ ತೊಡಗಿಕೊಳ್ಳುವುದು ಮುಖ್ಯವಾಗಿದೆ ಎಂದು ನೆಹರು ಯುವ ಕೇಂದ್ರದ ಬಾಗಲಕೋಟೆ ಜಿಲ್ಲಾ ಯುವ ಅಧಿಕಾ-ರಿಗಳಾದ ಸುಷ್ಮಾ ಗವಳಿ ಹೇಳಿದರು.

ಬಾಗಲಕೋಟೆ ಜಿಲ್ಲೆಯ ಕೆಲೂರು ಗ್ರಾಮದ ಶ್ರೀ ಗುರು ಮಂಟೇಶ್ವರ ಪ್ರೌಢಶಾಲಾ ಮೈದಾನದಲ್ಲಿ ನೆಹರು ಯುವ ಕೇಂದ್ರ ಬಾಗಲಕೋಟೆ, ಬೆಳಕು ಪ್ರತಿಷ್ಠಾನ(ರಿ) ಕಮತಗಿ ಇವರ ಸಹಯೋಗದಲ್ಲಿ ಬುಧವಾರ ಹಮ್ಮಿಕೊಂಡಿದ್ದ ತಾಲೂಕ ಮಟ್ಟದ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕ್ರೀಡೆಯಲ್ಲಿ ತೊಡಗಿಕೊಳ್ಳುವುದ-ರಿಂದ ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಬೆಳವಣಿಗೆಯಾಗಲು ಸಾಧ್ಯವಿದೆ. ಕ್ರೀಡೆ ಮತ್ತು ಯೋಗ ಮನುಷ್ಯನ ಅವಿಭಾಜ್ಯ ಅಂಗಗಳಾಗಿ ಇದ್ದರೆ ಆರೋಗ್ಯವು ಸ್ಥಿರವಾಗಿ ಇರುತ್ತದೆ. ಹಾಗಾಗಿ ಪ್ರತಿಯೊಬ್ಬರೂ ಒಂದಿಲ್ಲೊಂದು ಕ್ರೀಡೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವ ಮೂಲಕ ಆರೋಗ್ಯವನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಶ್ರೀ ಗುರು ಮಂಟೇಶ್ವರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಎಸ್. ಬಿ. ಹೆಳವರ ಮಾತನಾಡಿ, ವಿದ್ಯಾರ್ಥಿ ದೆಸೆಯಿಂದಲೇ ಕ್ರೀಡಾಕೂಟಗಳಲ್ಲಿ ಭಾಗಿಯಾಗಬೇಕು. ಕ್ರೀಡೆ ನಮ್ಮ ಮಾನಸಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗ್ರಾಮ ಪಂಚಾಯತ ಅಧ್ಯಕ್ಷ ಎಂ. ಕೆ. ನಾಡಗೌಡರ ಮಾತನಾಡಿದರು.

ಬಾಗಲಕೋಟೆ ಆರೋಗ್ಯ ಇಲಾಖೆ ಸಹಾಯಕ ಸಾಂಖ್ಯಿಕ ಅಧಿಕಾರಿ ಎಚ್. ಸಿ. ಧೂಪದ, ಬೆಳಕು ಪ್ರತಿಷ್ಠಾನ ಅಧ್ಯಕ್ಷ ಪ್ರಕಾಶ ಗುಳೇದಗುಡ್ಡ, ಶಿಕ್ಷಕರಾದ ಎಂ ಜೆ ರುದ್ರಾಕ್ಷಿ, ಎಸ್ ಬಿ ಯಾವಗಲ್ಲಮಠ, ಎಂ ಎಸ್ ಗ್ವಾಗೇರಿ, ಬಿ ಎಸ್ ಕಮತರ, ಬಿ ಎಚ್ ನಾಲತವಾಡ, ಕೆ ಎಸ್ ಬೀಳಗಿ , ಎ ಎಂ ಕಂಬಳಿ ಸೇರಿದಂತೆ ಅನೇಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

******

# ಚಪ್ಪಾಳೆ ತಟ್ಟುವ ಮೂಲಕ ಆಸರೆ ಮನೆಗಳ ಫಲಾನುಭವಿಗಳ ಆಯ್ಕೆ




ಮುದ್ದೇಬಿಹಾಳ: ಬಸವ ವಸತಿ ಯೋಜನೆಯ ಹೆಚ್ಚುವರಿ 119 ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಸವ ಆವಾಸ್ ಯೋಜನೆಯ 41 ಆಸರೆ ಮನೆಗಳನ್ನು ತಾಲ್ಲೂಕಿನ ನಾಗಬೇನಾಳ ಗ್ರಾ.ಪಂ ವ್ಯಾಪ್ತಿಯ ಗ್ರಾಮ ಸಭೆಯಲ್ಲಿ ಫಲಾನುಭವಿಗಳ ಆಯ್ಕೆ ಪಟ್ಟಿಗೆ ಚಪ್ಪಾಳೆ ತಟ್ಟುವ ಮೂಲಕ ವಾದ ವಿವಾದಗಳ ಮಧ್ಯೆಯೂ ಒಮ್ಮತದಿಂದ ಫಲಾನುಭವಿಗಳ ಆಯ್ಕೆಯನ್ನು ಮಾಡಲಾಯಿತು.

ಕಳೆದ 2021-22ನೇ ಸಾಲಿನಲ್ಲಿ 119 ಆಯ್ಕೆಯಾಗಿದ್ದರೂ ಗ್ರಾ.ಪಂ ಯವರು ಫಲಾನುಭವಿಗಳ ಪೂರಕ ದಾಖಲೆಗಳನ್ನು ತಾ.ಪಂ ಗೆ ಸಲ್ಲಿಸದ ಪರಿಣಾಮ ಅನುಮೋದನೆಯಲ್ಲಿ ವಿಳಂಬಗೊಂಡಿತ್ತು, ಇದರೊಟ್ಟಿಗೆ ಮತ್ತೆ ಮಂಜೂರಾದ 41 ಆಸರೆ ಮನೆಗಳನ್ನು ಸ್ಥಳದಲ್ಲೇ ಸಾರ್ವಜನೀಕರ ಸಮ್ಮುಖದಲ್ಲೇ ಫಲಾನುಭವಿಗಳನ್ನು ಆಯ್ಕೆ ಮಾಡಲಾಯಿತು. ನಂತರ ಮಾತನಾಡಿದ ವಸತಿ ಯೋಜನೆಯ ನಾಗರಾಳಮಠ, ತಾ.ಪಂ ಎಡಿ ಪಿ.ಎಸ್. ಕಸನಕ್ಕಿ ಹಾಗೂ ಪಿಡಿಓ ಮುರಿಗೆಮ್ಮ ಪೀರಾಪೂರ ಮಾತನಾಡಿ ಯಾವದೇ ಯೋಜನೆಗಳ ಸೌಕರ್ಯಗಳಲ್ಲಿ ಸ್ಥಳಿಯ ಸಾರ್ವಜನೀಕರ ಸಹಕಾರ ಬಹು ಮುಖ್ಯ ಪಾತ್ರ ವಹಿಸುತ್ತದೆ, ತಮ್ಮೂರಿಗೆ ಮಂಜೂರಾದ ಸುಮಾರು 160 ಆಸರೆ ಮನೆಗಳನ್ನು ತಮ್ಮ ಅಭಿಪ್ರಾಯ ಸಂಗ್ರಹಿಸಿ ಫಲಾನುಭವಿಗಳ ಪಟ್ಟಿ ಅಂತಿಮಗೊಳಿಸಿದ್ದೇವೆ ಇದಕ್ಕೆ ಸಾಕ್ಷಿಯಾಗಿ ತಾವು ಚಪ್ಪಾಳೆ ಮೂಲಕ ಎಲ್ಲಾ ಓಕೆ ಎಂದಿರುವ ವಿಡಿಯೋ ದಾಖಲೆಗಳನ್ನು ಮಾಡಿಕೊಂಡಿದ್ದೇವೆ, ಇಷ್ಟಾದರೂ ಮತ್ತೆ ಯಾವದೇ ತಂಟೆ ತಕರಾರು ಮಾಡಿದ್ದಲ್ಲಿ ಎಲ್ಲಾ ಫಲಾನುಭವಿಗಳ ಆಯ್ಕೆಯನ್ನು ರದ್ದುಗೊಳಿಸುವ ಹಕ್ಕು ನಾವು ಹೊಂದಿದ್ದು ಯಾವದೇ ಕಾರಣಕ್ಕೂ ಅಭಿವೃದ್ದಿಗೆ ಅಡ್ಡಾಗಬಾರದು ಎಂದು ಮನವಿ ಮಾಡಿಕೊಂಡರು.

ತರಾಟೆಗೆ: ಸಮೀಪದ ಮುರುಡೇಶ್ವರ ವಿದ್ಯುತ್ ಉತ್ಪಾದನಾ ಘಟಕದವರು ನಾಗಬೇನಾಳದ ಗ್ರಾ.ಪಂ.ಗೆ ಕರ ತುಂಬುವಲ್ಲಿ ಬಾರೀ ಗೋಲ್‌ಮಾಲ್ ತಂತ್ರದ ಹೊಂದಾಣಿಕೆ ಮಾಡಿಕೊಂಡಿದ್ದಾರೆ ಎನ್ನುವ ದೂರಿಗೆ ಹೋರಾಟ ನಡೆಸಿದ್ದಕ್ಕೆ ಯುವ ಜನ ಸೇನೆಯ ನಾಲತವಾಡದ ಶಿವಾನಂದ ವಾಲಿಯವರ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು 110 ಮೇಗಾವೇಟ್ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯದ ಮುರುಡೇಶ್ವರ ವಿದ್ಯುತ್ ಘಟಕದಿಂದ ನಮ್ಮೂರ ಗ್ರಾ.ಪಂ ವಸೂಲಾಗಬೇಕಾದ ವಾರ್ಷಿಕ ಲಕ್ಷಗಟ್ಟಲೇ ಕರ ತುಂಬಬೇಕಿದೆ 2015 ನೇ ಸಾಲಿನಿಂದ ಈವರೆಗೆ ಎಷ್ಟು ಕರ ಕಟ್ಟಿದ್ದಾರೆ ಹೇಳಿ ಎಂದ ಅವರು ಕೋಟಿಗಟ್ಟಲೇ ಕರ ಗ್ರಾ.ಪಂ ಗೆ ಮುರುಡೇಶ್ವರ ವಿದ್ಯುತ್ ಕಂಪನಿಯವರು ಕಟ್ಟಬೇಕಿದ್ದು ಶೀಘ್ರವೇ ತಾವು ಮಾಹಿತಿ ನೀಡಿ ಇಲ್ಲವೇ ಹೋರಾಟ ಮಾಡುತ್ತೇವೆ ಎಂದು ಅಧಿಕಾರಿಗಳಿಗೆ ಎಚ್ಚರಿಸಿದರು. ಸ್ಪಂದಿಸಿದ ಪಿಡಿಓ ಅವರು ಈಗಾಗಲೇ ಕಂಪನಿಗೆ ಭೇಟಿ ನೀಡಿದ್ದು ಒಂದು ಮೇಗಾವ್ಯಾಟ್‌ಗೆ ತುಂಬಬೇಕಾದ ಕರದ ವಿವರ ಕೇಳಿ ನೋಟಿಸ್ ಕೊಡುತ್ತೇವೆ ಎಂದರು.

ಈ ವೇಳೆ ಗ್ರಾಮದ ಶಿವರುದ್ರಯ್ಯ ಹಿರೇಮಠ, ಸಂಗಣ್ಣ ಡಂಬಳ, ತಾಪಂ ಎಡಿ ಪಿ.ಎಸ್.ಕಸನಕ್ಕಿ, ವಸತಿ ನಿಗಮದ ನಾಗರಾಳಮಠ,ಪಿಡಿಓ ಮುರುಗೆಮ್ಮ ಪೀರಾಪೂರ, ಗ್ರಾ.ಪಂ ಅಧ್ಯಕ್ಷೆ ಶಕುಂತಲಾ ಕಾಜಗಾರ, ಉಪಾಧ್ಯಕ್ಷರು ಹೇಮಾ ವಾಲಿಕಾರ ಭೀಮಣ್ಣ ರಕ್ಕಸಗಿ, ಗದ್ದೆಪ್ಪ ಗೌಂಡಿ, ಬಸಮ್ಮ ಗೌಂಡಿ, ಗ್ರಾಪಂ ಸದಸ್ಯರು, ಸಿಬ್ಬಂದಿಗಳು ಸೇರಿದಂತೆ ಉಪಸ್ಥಿತ-ರಿದ್ದರು.

# ಮಳೆಗಾಲದಲ್ಲಿ ಕಾಡುವ ಕಣ್ಣಿನ ಸೋಂಕಿನಿಂದ ಪಾರಾಗುವುದು ಹೇಗೆ?



ಕಣ್ಣಿನ ಸೋಂಕಿನಿಂದಾಗಿ ಕಣ್ಣಿನಲ್ಲಿ ತುರಿಕೆ, ಕಣ್ಣು ಕೆಂಪಾಗಲಾರಂಭಿಸುತ್ತದೆ. ಇದು ಮಳೆಗಾಲದಲ್ಲಿ ಹೆಚ್ಚಾಗಿ ಕಾಡುವ ಸೋಂಕಾಗಿದೆ. ಇದರಿಂದ ಪಾರಾಗಲು ಇಲ್ಲಿದೆ ಕೆಲವೊಂದು ಟಿಪ್ಸ್.

ಮಳೆಗಾಲದಲ್ಲಿ ಕಾಡುವ ಕಣ್ಣಿನ ಸೋಂಕಿನಿಂದ ಪಾರಾಗುವುದು ಹೇಗೆ?

ಮಳೆಗಾಲದಲ್ಲಿ ಚರ್ಮಕ್ಕೆ ಸಂಬಂಧಿಸಿದ ಸೋಂಕಿನ ಅಪಾಯ ಹೇಗೆ ಹೆಚ್ಚಾಗುತ್ತದೆಯೋ ಹಾಗೆಯೇ ಕಣ್ಣಿನ ಸೋಂಕಿನ ಅಪಾಯವೂ ಹೆಚ್ಚಾಗುತ್ತದೆ. ಕಾಂಜಂಕ್ಟಿವಿಟಿಸ್,



ಫಂಗಲ್, ವೈರಲ್, ಬ್ಯಾಕ್ಟೀ-ರಿಯಾದ ಸೋಂಕುಗಳು ಮತ್ತು ಅಲರ್ಜಿಯಂತಹ ಸಮಸ್ಯೆಗಳು ಹೆಚ್ಚಾಗುತ್ತವೆ. ಹಾಗಾಗಿ ನೀವು ಗಮನಿಸಿರಬಹುದು ಮಳೆಗಾಲದಲ್ಲಿ ಹೆಚ್ಚಿನವರ ಕಣ್ಣು ಕೆಂಪಗಾಗುತ್ತದೆ. ಮಕ್ಕಳಲ್ಲೂ ಈ ಸಮಸ್ಯೆ ಕಾಡುತ್ತದೆ.

?ಮಳೆಗಾಲದಲ್ಲಿ ಕಾಡುವ ಕಣ್ಣಿನ ಸಮಸ್ಯೆಗಳು?

ಕಣ್ಣುಗಳಲ್ಲಿ ಅಲರ್ಜಿ

ಕಾಂಜಂಕ್ಟಿವಿಟಿಸ್

ವೈರಾಣು ಸೋಂಕು

ಬ್ಯಾಕ್ಟೀರಿಯಾದ ಸೋಂಕು

?ಕಣ್ಣಿನ ಸೋಂಕಿನ ಲಕ್ಷಣಗಳು?

ಕಣ್ಣುಗಳಲ್ಲಿ ಕೆಂಪು

ಶುಷ್ಕತೆ

ತುರಿಕೆ ಮತ್ತು ನೋವು ಕೂಡ ಇರಬಹುದು.

ಕೆಲವೊಮ್ಮೆ ಇದು ತಲೆನೋವು ಮತ್ತು ಮೈಗ್ರೇನ್ ಅನ್ನು ಪ್ರಚೋದಿಸಬಹುದು.

?ಕಾಂಜಂಕ್ಟಿವಿಟಿಸ್ ಎಂದರೇನು??


ಕಾಂಜಂಕ್ಟಿವಿಟಿಸ್ ಒಂದು ರೀತಿಯ ಕಣ್ಣಿನ ಸೋಂಕು. ಇದರಲ್ಲಿ ಕಣ್ಣುಗಳು ಕೆಂಪಗಾಗುವುದು ಮತ್ತು ಊದಿಕೊಳ್ಳುತ್ತವೆ. ಕಾಂಜಂಕ್ಟಿವಾ ಕಣ್ಣಿನ ಬಿಳಿ ಭಾಗದಿಂದ ಕಣ್ಣುರೆಪ್ಪೆಗಳ ನಡುವಿನ ಪದರದವರೆಗೆ ವಿಸ್ತ-ರಿಸುತ್ತದೆ. ಕಾಂಜಂಕ್ಟಿವಾದ ಸಣ್ಣ ರಕ್ತನಾಳಗಳು ಊದಿಕೊಂಡಾಗ, ಕಣ್ಣುಗಳ ಬಿಳಿ ಭಾಗವು ಕೆಂಪು ಅಥವಾ ಗುಲಾಬಿ ಬಣ್ಣಕ್ಕೆ ತಿರುಗಲು ಪ್ರಾರಂಭಿಸುತ್ತದೆ. ಇದನ್ನು ಪಿಂಕ್ ಐ ಅಥವಾ ಐ ಫ್ಲೂ ಎಂದೂ ಕರೆಯುತ್ತಾರೆ.

?ಕಾಂಜಂಕ್ಟಿವಿಟಿಸ್ ಇದ್ದರೆ ಏನನ್ನೆಲ್ಲಾ ಮಾಡಬಾರದು??

ಜನಸಂದಣಿ ಇರುವ ಸ್ಥಳಗಳಿಗೆ ಹೋಗಬೇಡಿ.

ಕಣ್ಣುಗಳನ್ನು ಉಜ್ಜುವುದನ್ನು ಸಾಧ್ಯವಾದಷ್ಟು ತಪ್ಪಿಸಿ.

ಎಲ್ಲಾ ಕುಟುಂಬ ಸದಸ್ಯರಿಗೆ ಒಂದೇ



ಡ್ರಾಪರ್‌ನಿಂದ ಕಣ್ಣಿನ ಹನಿಗಳನ್ನು ಹಾಕಬೇಡಿ.

ಟವೆಲ್, ಕರವಸ್ತ್ರ, ದಿಂಬು, ಕನ್ನಡಕ ಮುಂತಾದ ಸೋಂಕಿತ ವಸ್ತುಗಳನ್ನು ಬಳಸಬೇಡಿ.

ನಿಮ್ಮ ಕಣ್ಣುಗಳಿಗೆ ಯಾವುದೇ ರೀತಿಯ ಬ್ಯಾಂಡೇಜ್ ಅನ್ನು ಕಟ್ಟಬೇಡಿ.

?ಕಾಂಜಂಕ್ಟಿವಿಟಿಸ್‌ನಲ್ಲಿ



ಯಾವ ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು?

?ಸೋಂಕಿನ ಸಂದರ್ಭದಲ್ಲಿ ಮೂರ್ನಾಲ್ಕು ದಿನ ಮನೆಯಲ್ಲಿ ವಿಶ್ರಾಂತಿ ಪಡೆಯಬೇಕು.

ಕಾಂಜಂಕ್ಟಿವಿಟಿಸ್ ನಿಂದ ಬಳಲುತ್ತಿರುವ ವ್ಯಕ್ತಿಯನ್ನು ಕಂಡರೆ ಸೋಂಕು ಇತರರಿಗೆ ಹರಡುವುದಿಲ್ಲ.

ಮಕ್ಕಳು, ಅಲರ್ಜಿ ರೋಗಿಗಳು, ವೃದ್ಧರು ಮತ್ತು ದುರ್ಬಲ ರೋಗನಿರೋಧಕ ಶಕ್ತಿ ಹೊಂದಿರುವವರು ಹೆಚ್ಚು ಜಾಗರೂಕರಾಗಿರಬೇಕು.

ರೋಗಿಯು ಧರಿಸಿರುವ ಬಟ್ಟೆಗಳನ್ನು ಬಿಸಿ ನೀರಿನಿಂದ ತೊಳೆದು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ.

ನಿಮ್ಮ ಕಣ್ಣುಗಳನ್ನು ಸ್ವಚ್ಛಗೊಳಿಸುತ್ತಿರಿ. ವೈದ್ಯರ ಸಲಹೆಯಂತೆ ಔಷಧಿಗಳನ್ನು ತೆಗೆದುಕೊಳ್ಳುವುದನ್ನು ಮುಂದುವರಿಸಿ.

ಕಣ್ಣುಗಳಲ್ಲಿ ಕೆಂಪು ಬಣ್ಣವು 3 ದಿನಗಳಿಗಿಂತ ಹೆಚ್ಚು ಕಾಲ ಮುಂದುವರಿದರೆ, ತಕ್ಷಣ ವೈದ್ಯರನ್ನು ಸಂಪರ್ಕಿಸಿ.

******

# ಮಲ್ಲಿಗೆ ಹೂವಿನ ಹಾಗೆ ಇಡ್ಲಿ ಮಾಡೋದು ಕಷ್ಟನೇ ಅಲ್ಲ ಈ ಟಿಪ್ಸ್ ಗೊತ್ತಾದ್ರೆ, ಇವತ್ತೇ ಮಾಡ್ತೀರ!



ನಾವು ಪ್ರತಿ ಬಾರಿ ಹೋಟೆಲ್ ಹೋದಾಗ, ಅಲ್ಲಿ ಯಾವುದೇ ತಿಂಡಿ ತಿಂದರೂ, ಮನೆಯಲ್ಲಿ ನಾವು ಇದನ್ನೇಕೆ ಒಮ್ಮೆ ಟ್ರೈ ಮಾಡಬಾರದು ಎಂದುಕೊಳ್ಳುತ್ತೇವೆ. ಆದರೆ ಅಪ್ಪಿ ತಪ್ಪಿ ಟ್ರೈ ಮಾಡಲು ಹೋದರೆ, ಹೋಟೆಲ್ ರುಚಿ ಮನೆಯಲ್ಲಿ ಬರುವುದಿಲ್ಲ. ಇಡ್ಲಿ ವಿಚಾರದಲ್ಲೂ ಕೂಡ ಇದೇ ರೀತಿ ಆಗುತ್ತದೆ. ಹೋಟೆಲ್ ನಲ್ಲಿ ನಾವು ತಿಂದಿ ರುವ ಇಡ್ಲಿ ತುಂಬಾ ಮೃದುವಾಗಿರುತ್ತದೆ ಮತ್ತು ಅಷ್ಟೇ ರುಚಿಂ-ಯಾಗಿರುತ್ತದೆ ಕೂಡ.

ಹೀಗಾಗಿ ಮತ್ತೊಮ್ಮೆ ದುಡ್ಡು ಕೊಟ್ಟು ತಿನ್ನೋಣ ಅನಿಸುತ್ತದೆ. ಆದರೆ ಹೋಟೆಲ್ ನಲ್ಲಿ ನಾವು ಕೊಟ್ಟ ದುಡ್ಡಿಗೆ ಹೊಟ್ಟೆ ತುಂಬುವಷ್ಟು ಇಡ್ಲಿ ಕೊಡುವುದಿಲ್ಲ. ಹೀಗಾಗಿ ಪ್ರತಿ ಬಾರಿ ಇಡ್ಲಿ ಬೇಕು ಅಂದಾಗ ಹೋಟೆಲ್ ಗೆ ಹೋಗಲು ಸಾಧ್ಯವಿಲ್ಲ. ಮನೆಯಲ್ಲಿ ಹೋಟೆಲ್ ತರಹ ಮೃದುವಾದ ಇಡ್ಲಿ ಮಾಡುವ ಸಂದರ್ಭದಲ್ಲಿ ಯಾವ ತಪ್ಪುಗಳನ್ನು ಮಾಡಬಾರದು ಎಂಬುದನ್ನು ಇಲ್ಲಿ ನೋಡೋಣ.

ಸರಿಯಾದ ಅಕ್ಕಿ ಬಳಸದೇ ಇರುವುದು

ಇಡ್ಲಿ ಚೆನ್ನಾಗಿ ಬರಬೇಕು ಎಂದರೆ, ಇಡ್ಲಿ ತಯಾರು ಮಾಡುವ ಅಕ್ಕಿ ಚೆನ್ನಾಗಿರಬೇಕು. ಏಕೆಂದರೆ ಇಡ್ಲಿಗೆ ಅಕ್ಕಿಯೇ ಬಹಳ ಮುಖ್ಯವಾದ ಪದಾರ್ಥ. ಸರಿಯಾದ ಅಕ್ಕಿ ಬಳಕೆ ಮಾಡಿದರೆ, ಇಡ್ಲಿ ಕೂಡ ಚೆನ್ನಾಗಿ ಆಗುತ್ತದೆ.

ಕುಸುವಲಕ್ಕಿ ಸಾಮಾನ್ಯವಾಗಿ ಇಡ್ಲಿ ಮಾಡುವಾಗ ಬಳಕೆಯಾ ಗುತ್ತದೆ. ಒಂದು ವೇಳೆ ನಿಮಗೆ ಇದು ಸಿಗದೇ ಇದ್ದರೆ, ಸೊಸೈಟಿ ಅಕ್ಕಿ ಕೂಡ ಬಳಸಬಹುದು. ಆದರೆ ಯಾವುದೇ ಕಾರಣಕ್ಕೂ ಉದ್ದ ಇರುವ ಅಕ್ಕಿಯನ್ನು ಬಳಸಬೇಡಿ. ಈ ಅಕ್ಕಿ ಇಡ್ಲಿ ಮಾಡಲು ತರವಲ್ಲ ಎಂದು ಹೇಳುತ್ತಾರೆ.?

ನೆನೆಸುವ ವಿಧಾನ ತಪ್ಪಿರಬಹುದು

ಇಡ್ಲಿ ತಯಾರು ಮಾಡಲು ಅಕ್ಕಿ, ಉದ್ದಿನಬೇಳೆ ನೆನೆ ಹಾಕಬೇಕು. ಒಂದೊಂದಕ್ಕೂ ಇಂತಿಷ್ಟೇ ಸಮಯ ಎಂದಿರುತ್ತದೆ. ಒಂದು ವೇಳೆ ನೀವು ಒಟ್ಟಿಗೆ ಇವುಗಳನ್ನು ನೆನೆ ಹಾಕುವುದಾದರೆ ಅಂತಹ ಅಭ್ಯಾಸವನ್ನು ಈಗಲೇ ಬಿಟ್ಟುಬಿಡಿ.

ಏಕೆಂದರೆ ಎರಡನ್ನು ಬೇರೆ ಬೇರೆಯಾಗಿ ನೆನೆ ಹಾಕಿದರೆ ಮಾತ್ರ ಮಲ್ಲಿಗೆ ಇಡ್ಲಿ ಮಾಡಲು ಸಾಧ್ಯ! ಇಡ್ಲಿಗೆ ಮತ್ತು ಉದ್ದಿನಬೇಳೆಗೆ ಬೇರೆ ಬೇರೆ ಪ್ರಮಾಣದಲ್ಲಿ ನೀರು ಅವಶ್ಯಕತೆ ಇರುತ್ತದೆ. ಹಾಗಾಗಿ ಎರಡನ್ನು ಬೇರೆ ಬೇರೆ ನೆನೆ ಹಾಕಿ.

ಫರ್ಮೆಂಟೇಶನ್ ಪ್ರಕ್ರಿಯೆ ಬಹಳ ಮುಖ್ಯ

ನೆನೆ ಹಾಕಿದ ಅಕ್ಕಿ ಮತ್ತು ಉದ್ದಿನ ಬೇಳೆಯನ್ನು ರುಬ್ಬಿ ಇಡ್ಲಿ ಹಿಟ್ಟು ತಯಾರು ಮಾಡುತ್ತೇವೆ ನಿಜ. ಆದರೆ ಇಡ್ಲಿ ಹಿಟ್ಟು ತಯಾರಾದ ತಕ್ಷಣ ಅದನ್ನು ಇಡ್ಲಿ ಪಾತ್ರೆಯಲ್ಲಿ ಹಾಕಿ ಇಡ್ಲಿ ಮಾಡಲು ಹೋದರೆ ಖಂಡಿತ ಇಡ್ಲಿ ಚೆನ್ನಾಗಿ ಬರುವುದಿಲ್ಲ.

ಹಾಗಾಗಿ ಇಡ್ಲಿ ಹಿಟ್ಟನ್ನು ಹಾಗೆ ಇರಲು ಮತ್ತು ಸೆಟ್ ಆಗಲು ಬಿಡಬೇಕು. ಇದು ಫರ್ಮೆಂಟೇಶನ್ ಆಗುತ್ತದೆ. ಹಾಗಾಗಿ ಇದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ.

ಕನಿಷ್ಠ ನಾಲ್ಕು ಗಂಟೆಗಳಾದರೂ ನೀವು ಇದನ್ನು ಹಾಗೆ ಇರಲು ಬಿಡಬೇಕು. ಇದರಿಂದ ತಯಾರಾದ ಇಡ್ಲಿ ಹಗುರಾಗಿ ಮಲ್ಲಿಗೆ ಹೂವಿನ ತರಹ ಮೆತ್ತಗೆ ತಯಾರಾಗುತ್ತದೆ.?

ಇಡ್ಲಿ ಹಿಟ್ಟನ್ನು ಅತಿ ಹೆಚ್ಚು ಮಿಕ್ಸ್ ಮಾಡುವುದು

ಯಾವಾಗ ಇಡ್ಲಿ ಹಿಟ್ಟು ತಯಾರಾಗುತ್ತದೆ ಆಗ ಅದನ್ನು ಒಮ್ಮೆ ಮಿಕ್ಸ್ ಮಾಡಬೇಕು ಅಷ್ಟೇ! ಆದರೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಮಿಕ್ಸ್ ಮಾಡಲು ಹೋದರೆ, ಆಗಲೂ ಕೂಡ ಇಡ್ಲಿ ಹಿಟ್ಟು ಹಾಳಾಗುತ್ತದೆ ಎಂದು ಹೇಳು ತ್ತಾರೆ. ಇದರಿಂದಲೂ ಕೂಡ ಇಡ್ಲಿ ಸರಿಯಾಗಿ ಬರುವುದಿಲ್ಲ ಎನ್ನುವ ಮಾತಿದೆ. ಹಾಗಾಗಿ ಸಿಂಪಲ್ ಮಿಕ್ಸ್ ಕೊಡಿ ಸಾಕು.

ಮೌಲ್ಡ್ ಗಳಿಗೆ ಹೆಚ್ಚಿನ ಹಿಟ್ಟು ಸುರಿಯುವುದು

ತುಂಬಾ ಜನರು ಈ ತಪ್ಪು ಮಾಡುತ್ತಾರೆ. ಏನೆಂದರೆ ಮನೆಯಲ್ಲಿ ರುವ ಇಡ್ಲಿ ಮೌಲ್ಡ್ ಗಳಿಗೆ ಅವುಗಳ ತುಂಬಾ ಹೆಚ್ಚಿನ ಪ್ರಮಾಣದಲ್ಲಿ ಇಡ್ಲಿ ಹಿಟ್ಟನ್ನು ಸುರಿಯುತ್ತಾರೆ. ಮನಸ್ಸಿನಲ್ಲಿ ಇಡ್ಲಿ ದಪ್ಪ ಆಗಲಿ ಎನ್ನುವ ಕಾರಣ ಇಟ್ಟುಕೊಂಡು ಈ ರೀತಿ ಮಾಡಬಹುದು.

ಆದರೆ ಮುಕ್ಕಾಲು ಪ್ರಮಾಣದಲ್ಲಿ ಮೌಲ್ಡ್ ಗೆ ಇಡ್ಲಿ ಹಿಟ್ಟು ಬಿಟ್ಟರೆ ಒಳ್ಳೆಯದು ಎಂದು ತಿಳಿದವರು ಹೇಳುತ್ತಾರೆ. ಇದು ಇಡ್ಲಿ ಬೇಯುವ ಸಂದರ್ಭದಲ್ಲಿ ದಪ್ಪ ಆಗಲು ಮತ್ತು ಅರಳಲು ಅನುಕೂಲವಾಗುತ್ತದೆ.

ಜೊತೆಗೆ ಮೌಲ್ಡ್ ಅಕ್ಕಪಕ್ಕ ಇಡ್ಲಿ ಹಿಟ್ಟು ಮೆತ್ತಿಕೊಳ್ಳುವುದು ತಪ್ಪುತ್ತದೆ. ಇಡ್ಲಿ ಹಿಟ್ಟು ಸುರಿಯುವ ಮುಂಚೆ ಮೌಲ್ಡ್ ಗೆ ಸ್ವಲ್ಪ ಎಣ್ಣೆ ಹಚ್ಚಿ ಆನಂತರ ಸುರಿಯುವುದು ಒಳ್ಳೆಯದು.

ಗಮನಿಸಿ ಒಂದು ವೇಳೆ ನೀವು ಮೊದಲ ಬಾರಿಗೆ ಮನೆಯಲ್ಲಿ ಇಡ್ಲಿ ಟ್ರೈ ಮಾಡುತ್ತಿದ್ದರೆ, ತಪ್ಪಾಗಬಹುದು ಅಥವಾ ಇಡ್ಲಿ ಸರಿಯಾಗಿ ಬರದೆ ಹೋಗಬಹುದು.

ಆದರೆ ಇದಕ್ಕೆ ಬೇಸರ ಮಾಡಿಕೊಳ್ಳದೆ ಮತ್ತೊಮ್ಮೆ ಟ್ರೈ ಮಾಡಿ. ಆಗ ನೀವು ಕೂಡ ಅತ್ಯಂತ ಸುಲಭವಾಗಿ ಹೋಟೆಲ್ ಶೈಲಿಯಲ್ಲಿ ಮೃದುವಾದ ಹಾಗೂ ರುಚಿಕರವಾದ ಇಡ್ಲಿ ತಯಾರಿಸಿ ಮನೆ ಮಂದಿ ಜೊತೆ ಕುಳಿತು ಸವಿಯಬಹುದು.?

# ಮಹಿಳೆಯರು ಬೀಟ್‌ರೂಟ್ ಜ್ಯೂಸ್ ಯಾಕೆ ಸೇವಿಸಬೇಕು?



ತರಕಾರಿ ಹಾಗೂ ಹಣ್ಣುಗಳಲ್ಲಿ ಹಲವಾರು ಬಗೆಯ ಪೋಷಕಾಂಶಗಳು ಇವೆ ಎನ್ನುವುದು ನಮಗೆ ತಿಳಿದೇ ಇದೆ. ಅದರಲ್ಲೂ ಬೀಟ್‌ರೂಟ್ ದೇಹಕ್ಕೆ ಬೇಕಾಗಿರುವ ಪೋಷಕಾಂಶಗಳನ್ನು ಒದಗಿಸುವಲ್ಲಿ ಸಹಕಾರಿ ಆಗಿದೆ. ಗೆಡ್ಡೆ ಜಾತಿಗೆ ಸೇರಿರುವ ಈ ತರಕಾರಿಯಲ್ಲಿ ಹಲವಾರು ಬಗೆಯ ವಿಟಮಿನ್, ಖನಿಜಾಂಶಗಳು ಇವೆ. ಇದನ್ನು ಹಲವಾರು ರೀತಿಯಿಂದ ಬಳಕೆ ಮಾಡಿಕೊಳ್ಳಬಹುದು.

ಇದು ಮಹಿಳೆಯರಿಗೆ ಒಂದು ಅದ್ಭುತವಾಗಿರುವ ಆಹಾರವೆಂದರೆ ಅದನ್ನು ನಂಬಲೇಬೇಕು. ಬೀಟ್‌ರೂಟ್ ನಲ್ಲಿ ಆ?ಯಂಟಿಆಕ್ಸಿಡೆಂಟ್ ಮತ್ತು ಪೋಷಕಾಂಶಗಳು ಇದ್ದು, ಇದು ಮಹಿಳೆಯರ ಆರೋಗ್ಯಕ್ಕೆ ಶಕ್ತಿ ನೀಡುವುದು.

ಬೀಟ್‌ರೂಟ್ ಜ್ಯೂಸ್ ಕುಡಿದರೆ ಆಗ ಇದರಿಂದ ಮಹಿಳೆಯರ ದೇಹಕ್ಕೆ ಹಲವಾರು ಬಗೆಯ ಆರೋಗ್ಯ ಲಾಭಗಳು ಸಿಗುವುದು.

?ವಿಟಮಿನ್ ಮತ್ತು ಖನಿಜಾಂಶಗಳು ಲಭ್ಯವಾಗುವುದು?

ಕೆಂಪು ಬಣ್ಣದ ತರಕಾ-ರಿಯಾಗಿರುವ ಬೀಟ್‌ರೂಟ್‌ಎನ್ನುವುದು ಪೋಷಕಾಂಶಗಳ ಖನಿಜವಾಗಿದೆ. ಒಂದು ಕಪ್ ಬೀಟ್‌ರೂಟ್‌ಜ್ಯೂಸ್ ಕುಡಿದರೆ ಆಗ ಇದರಿಂದ ಮಹಿಳೆಯರ ಆರೋಗ್ಯಕ್ಕೆ ಬೇಕಾಗಿರುವ ಪ್ರಮುಖ ಪೋಷಕಾಂಶಗಳು ಲಭ್ಯವಾಗಲಿದೆ. ಬೀಟ್‌ರೂಟ್‌ನಲ್ಲಿ ವಿಟಮಿನ್ ಸಿ, ಇದ್ದು, ಇದು ಪ್ರತಿರೋಧಕ ಶಕ್ತಿ ವೃದ್ಧಿ ಮಾಡುವುದು ಮತ್ತು ಚರ್ಮದ ಆರೋಗ್ಯಕ್ಕೆ ಬೇಕಾಗಿರುವ ಕಾಲಜನ್ ಸಂಶ್ಲೇಷಣೆ ಮಾಡುವುದು. ಇದರ ಜತೆಗೆ ಫಾಲಟೆಯು ಸಂತಾನೋತ್ಪತ್ತಿ ಆರೋಗ್ಯಕ್ಕೆ ಅಗತ್ಯವಾಗಿರುವುದು ಮತ್ತು ಗರ್ಭಧಾರಣೆ ವೇಳೆ ಕೂಡ ಇದು ಬೇಕು. ಖನಿಜಾಂಶಗಳಾಗಿರುವ ಪೊಟಾಶಿಯಂ ಮತ್ತು ಮೆಗ್ನಿಶಿಯಂ ಹೃದಯದ ಆರೋಗ್ಯ ಮತ್ತು ಮೂಳೆಗಳನ್ನು ಬಲಪಡಿಸಲು ಸಹಕಾರಿ.

ಬೀಟ್‌ರೂಟ್‌ನಲ್ಲಿ ಬೆಟಾಲೈನ್ ಗಳು ಮತ್ತು ಪಾಲಿಫಿನಾಲ್ ಎನ್ನುವ ಆ?ಯಂಟಿಆಕ್ಸಿಡೆಂಟ್ ಗಳು ಇವೆ. ಇದು ಆಕ್ಸಿಡೇಟಿವ್ ಒತ್ತಡ ಮತ್ತು ಉರಿಯೂತವನ್ನು ತಗ್ಗಿಸುವುದು. ಈ ಆ?ಯಂಟಿಆಕ್ಸಿಡೆಂಟ್ ಗಳು ಸಂಪೂರ್ಣ ಕೋಶಗಳ ಆರೋಗ್ಯವನ್ನು ನಿರ್ವಹಣೆ ಮಾಡಲು ಅಗತ್ಯ ಮತ್ತು ದೀರ್ಘಕಾಲಿಕ ಕಾಯಿಲೆ ಅಪಾಯವನ್ನು ಕಡಿಮೆ ಮಾಡುವುದು.

?ಹೃದಯದ ಆರೋಗ್ಯ ಕಾಪಾಡಲು?

ಮಹಿಳೆಯರಲ್ಲಿ ಕೂಡ ಹೃದಯದ ಕಾಯಿಲೆ ಅಪಾಯವು ಇರುವುದು ಮತ್ತು ಬೀಟ್‌ರೂಟ್‌ಜ್ಯೂಸ್ ಕುಡಿದರೆ ಆಗ ಇದರಿಂದ ಹೃದಯರಕ್ತನಾಳದ ಆರೋಗ್ಯವನ್ನು ಕಾಪಾಡಬಹುದು. ಬೀಟ್‌ರೂಟ್ ನಲ್ಲಿ ಇರುವಂತಹ ನೈಟ್ರೇಟ್ ಅಂಶವು ರಕ್ತನಾಳಗಳನ್ನು ಹಿಗ್ಗಿಸಿ ರಕ್ತದೊತ್ತಡ ಕಡಿಮೆ ಮಾಡುವುದು ಮತ್ತು ರಕ್ತ ಸಂಚಾರವು ಸರಿಯಾಗಿ ಆಗುವಂತೆ ಮಾಡುವ ಕಾರಣ ಹೃದಯ ಆರೋಗ್ಯವು ಉತ್ತಮವಾಗಿರುವುದು.

ಅಧಿಕ ರಕ್ತದೊತ್ತಡ ಇರುವ ಮತ್ತು ಅದರ ಅಪಾಯದಲ್ಲಿ ಇರುವ ಮಹಿಳೆಯರಿಗೆ ಇದು ತುಂಬಾ ಲಾಭಕಾರಿ ಆಗಿ ಪರಿಣಮಿಸಲಿದೆ. ನಿಯಮಿತವಾಗಿ ಬೀಟ್‌ರೂಟ್‌ಜ್ಯೂಸ್ ಸೇವನೆ ಮಾಡಿದರೆ ಆಗ ಇದು ಕೊಲೆಸ್ಟ್ರಾಲ್ ಸುಧಾರಣೆ ಮಾಡುವುದು. ಒಳ್ಳೆಯ ಕೊಲೆಸ್ಟ್ರಾಲ್(ಎಚ್ ಡಿಎಲ್) ಹೆಚ್ಚಿಸಿ, ಕೆಟ್ಟ ಕೊಲೆಸ್ಟ್ರಾಲ್(ಎಲ್ ಡಿಎಲ್) ಕಡಿಮೆ ಮಾಡುವುದು. ದೇಹದಲ್ಲಿ ಕೊಲೆಸ್ಟ್ರಾಲ್ ಮಟ್ಟವು ಆರೋಗ್ಯಕಾ-ರಿಯಾಗಿದ್ದರೆ ಆಗ ಇದು ಹೃದಯದ ಆರೋಗ್ಯಕ್ಕೆ ಒಳ್ಳೆಯದು ಮತ್ತು ಇದು ಹೃದಯರಕ್ತನಾಳದ ಕಾಯಿಲೆಗಳ ಅಪಾಯವನ್ನು ತಗ್ಗಿಸುವುದು.



?ಬೀಟ್‌ರೂಟ್‌ಜ್ಯೂಸ್ ನಿಂದ ತ್ರಾಣ ಮತ್ತು ಶಕ್ತಿ ಹೆಚ್ಚುವುದು?

ಬೀಟ್‌ರೂಟ್‌ಜ್ಯೂಸ್ ಕುಡಿದರೆ ಆಗ ದೈಹಿಕ ಶಕ್ತಿ ಮತ್ತು ತ್ರಾಣ ಹೆಚ್ಚಾಗುವುದು. ಬೀಟ್‌ರೂಟ್‌ನಲ್ಲಿ ಇರುವ ನೈಟ್ರೇಟ್ ಅಂಶವು ವ್ಯಾಯಾಮದ ವೇಳೆ ಆಮ್ಲಜನಕವನ್ನು ಸರಿಯಾಗಿ ಉಪಯೋಗಿಸುವಂತೆ ಮಾಡುವುದು ಮತ್ತು ಸ್ನಾಯುಗಳ ಕಾರ್ಯವನ್ನು ವೃದ್ಧಿಸುವುದು. ಇದರಿಂದ ದೀರ್ಘ ಸಮಯ ವ್ಯಾಯಾಮ ಮಾಡಬಹುದು ಮತ್ತು ಬಳಲಿಕೆ ಕಡಿಮೆ ಮಾಡುವುದು.

ಓಡುವುದು, ಸೈಕ್ಲಿಂಗ್ ಮತ್ತು ಏರೋಬಿಕ್ ವ್ಯಾಯಾಮಕ್ಕೆ ಇದು ಸಹಕಾರಿ. ಬೀಟ್‌ರೂಟ್‌ಜ್ಯೂಸ್ ರಕ್ತ ಸಂಚಾರವನ್ನು ಸುಧಾರಣೆ ಮಾಡುವುದು ಮತ್ತು ಸ್ನಾಯುಗಳಿಗೆ ಸರಿಯಾಗಿ ಆಮ್ಲಜನಕವನ್ನು ಒದಗಿಸುವ ಮೂಲಕ ವ್ಯಾಯಾಮದ ಬಳಿಕ ಸ್ನಾಯುಗಳು ಬೇಗ ಚೇತರಿಸಿಕೊಳ್ಳಲು ನೆರವಾಗುವುದು.

?ಕೂದಲು ಮತ್ತು ತ್ವಚೆಯ ಆರೋಗ್ಯಕ್ಕೆ?

ಬೀಟ್‌ರೂಟ್‌ಜ್ಯೂಸ್ ನ್ನು ಮಹಿಳೆಯರು ಇತ್ಯವೂ ಕುಡಿದರೆ ಆಗ ಇದರಿಂದ ದೇಹದ ಒಳಗಿನ ಆರೋಗ್ಯ ಮಾತ್ರವಲ್ಲದೆ,

ತ್ವಚೆ ಹಾಗೂ ಕೂದಲಿನ ಆರೋಗ್ಯಕ್ಕೆ ಒಳ್ಳೆಯದು.

ಬೀಟ್‌ರೂಟ್‌ನಲ್ಲಿ ಇರುವ ವಿಟಮಿನ್ ಸಿ ಅಂಶವು ಕಾಲಜನ್ ಉತ್ಪತ್ತಿ ಹೆಚ್ಚಿಸುವುದು ಮತ್ತು ಇದ-ರಿಂದ ಚರ್ಮದ ಸ್ಥಿತಿಸ್ಥಾಪಕತ್ವಕ್ಕೆ ಒಳ್ಳೆಯದು ಮತ್ತು ಇದು ತ್ವಚೆಯಲ್ಲಿ ಗೆರೆ ಮತ್ತು ನೆರಿಗೆಯ ಅಪಾಯ ಕಡಿಮೆ ಮಾಡುವುದು.

ಇದರಲ್ಲಿನ ಆ?ಯಂಟಿಆ-ಕ್ಸಿಡೆಂಟ್ ಅಂಶವು ಯುವಿ ಕಿರಣಗಳು ಮತ್ತು ಕಲುಷಿತ ವಾತಾವರಣದಿಂದ ಆಗುವಂತಹ ಹಾನಿಯನ್ನು ತಪ್ಪಿಸುವುದು. ಕಬ್ಬಿಣಾಂಶ, ಫಾಲಟೆ ಮತ್ತು ಆ?ಯಂಟಿಆಕ್ಸಿಡೆಂಟ್ ಬೀಟ್‌ರೂಟ್‌ಜ್ಯೂಸ್ ನಲ್ಲಿದ್ದು, ಇದು ಕೂದಲಿನ ಆರೋಗ್ಯವನ್ನು ವೃದ್ಧಿಸುವುದು ಮತ್ತು ಕೂದಲಿನ ಕಿರುಚೀಲಗಳನ್ನು ಬಲಪಡಿಸುವುದು. ಇದರಿಂದ ಕೂದಲು ಉದುರುವುದು ತಪ್ಪುವುದು ಮತ್ತು ಸಂಪೂರ್ಣ ಕೂದಲಿನ ಆರೋಗ್ಯವು ಉತ್ತಮವಾಗುವುದು.

?ಬೀಟ್‌ರೂಟ್‌ಜ್ಯೂಸ್ ಅರಿವಿನ ಕಾರ್ಯ ವೃದ್ಧಿಸುವುದು?

ಬೀಟ್‌ರೂಟ್‌ಜ್ಯೂಸ್ ನಲ್ಲಿ ಇರುವಂತಹ ನೈಟ್ರೇಟ್ ನಿಂದ ರಕ್ತ ಸಂಚಾರವು ಸರಿಯಾಗಿ ಆಗುವುದು. ಇದರ ಪರಿಣಾಮವಾಗಿ ಅರಿವಿನ ಕಾರ್ಯವು,

ನೆನಪಿನ ಶಕ್ತಿ ಮತ್ತು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವು ಹೆಚ್ಚಾಗುವುದು. ಬೀಟ್‌ರೂಟ್‌ನಲ್ಲಿ ಇರುವ ಬೆಟಾಲೈನ್ ಗಳು ಮತ್ತು ಫಿನೋಲಿಕ್ ಆಯಂಟಿಆಕ್ಸಿಎಂಟ್ ಗಳು ಉರಿಯೂತ ಶಮನಕಾ-ರಿಯಾಗಿದ್ದು, ಇದು ಆಕ್ಸಿಡೇಟಿವ್ ಒತ್ತಡ ಮತ್ತು ಉರಿಯೂತದಿಂದ ಮೆದುಳಿನ ಅಂಗಾಂಶಗಳನ್ನು ರಕ್ಷಿಸುವುದು.

?ಬೀಟ್‌ರೂಟ್‌ಜ್ಯೂಸ್ ನ್ನು ಆಹಾರ ಕ್ರಮದಲ್ಲಿ ಸೇರಿಸುವುದು ಹೇಗೆ??

ಬೀಟ್‌ರೂಟ್‌ಜ್ಯೂಸ್ ನ್ನು ಆಹಾರ ಕ್ರಮದಲ್ಲಿ ಸೇರ್ಪಡೆ ಮಾಡುವುದು ತುಂಬಾ ಸರಳ.

ತಾಜಾ ಬೀಟ್‌ರೂಟ್‌ನ್ನು ತೆಗೆದುಕೊಂಡು ಅದರಿಂದ ಜ್ಯೂಸ್ ತಯಾರಿಸಿಕೊಳ್ಳಿ. ಇದು ಹೆಚ್ಚಿನ ಪೋಷಕಾಂಶಗಳನ್ನು ನೀಡುವುದು. ಬೇರೆ ಹಣ್ಣುಗಳು ಅಥವಾ ತರಕಾರಿಗಳ ಜತೆಗೆ ಇದನ್ನು ರುಬ್ಬಿಕೊಂಡು ಜ್ಯೂಸ್ ಮಾಡಬಹುದು.

ತಾಜಾ ಜ್ಯೂಸ್ ನಿಮಗೆ ಆಗದೆ ಇದ್ದರೆ ಆಗ ನೀವು ಕೋಲ್ಡ್ ಪ್ರೆಸ್ಡ್ ಅಥವಾ ಕನಿಷ್ಠ ಸಂಸ್ಕರಿಸಿದ ಬೀಟ್‌ರೂಟ್‌ಜ್ಯೂಸ್ ಸೇವನೆ ಮಾಡಿದರೆ ಆಗ ಇದು ಆರೋಗ್ಯಕ್ಕೆ ಒಳ್ಳೆಯದು.

ಇಂತಹ ಜ್ಯೂಸ್ ಗಳು ಸೂಪರ್ ಮಾರ್ಕೆಟ್ ಗಳಲ್ಲಿ ಲಭ್ಯವಿದೆ. ಇದರಲ್ಲಿ ಸಕ್ಕರೆ ಅಥವಾ ಸಂರಕ್ಷಕಗಳು ಇರಬಾರದು.

ಬೀಟ್‌ರೂಟ್‌ಜ್ಯೂಸ್ ನ್ನು ಸ್ಮೂಥಿ ಅಥವಾ ಇದನ್ನು ಸಲಾಡ್ ರೂಪದಲ್ಲಿ ಕೂಡ ಬಳಕೆ ಮಾಡಬಹುದು.



# ಯಶಸ್ವಿ ಅಧ್ಯಯನಕ್ಕೆ ನಿರಂತರ ಪ್ರಯತ್ನ ಮುಖ್ಯ



ಬಸವನಬಾಗೇವಾಡಿ, : ಯಶಸ್ವಿ ಅಧ್ಯಯನಕ್ಕೆ ಯೋಜನೆ, ಶಿಸ್ತು, ನಿರಂತರ ಪ್ರಯತ್ನ ಮತ್ತು ಸರಿಯಾದ ಮಾರ್ಗದರ್ಶನ ಅತ್ಯಂತ ಅವಶ್ಯಕ. ಇದರೊಂದಿಗೆ ಮಾನಸಿಕ ಮತ್ತು ದ?ಹಿಕ ಆರೋಗ್ಯದ ಕಾಳಜಿ ವಹಿಸುವುದು ಕೂಡ ಮುಖ್ಯ ಎಂದು ಮುದ್ದೇಬಿಹಾಳ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ಸಾವಳಗಿ ಹೇಳಿದರು.

ತಾಲೂಕಿನ ಹುಣಶ್ಯಾಳ ಪಿಬಿ ಗ್ರಾಮದ ಸಮೀಪವಿರುವ ಆದರ್ಶ ವಿದ್ಯಾಲಯದಲ್ಲಿ ವಿಜಯಪುರ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಮತ್ತು ಬಸವನಬಾಗೇವಾಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಇವರ ಸಹಯೋಗದಲ್ಲಿ ಬಸವನಬಾಗೇವಾಡಿ, ಮುದ್ದೇಬಿಹಾಳ ವಲಯದ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳಿಗೆ, ಸಮೂಹ ಸಂಪನ್ಮೂಲ ವ್ಯಕ್ತಿಗಳಿಗೆ ಮಂಗಳವಾರ ಹಮ್ಮಿಕೊಂಡಿದ್ದ ಇಂದು ದಿನದ ಬೆಸ್ಟ್ ಪ್ರಾಕ್ಟೀಸ್ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಕಾರ್ಯಾಗಾರಗಳು ನಿಜವಾದ ಸಾಮರ್ಥ್ಯಗಳ್ನು ಹೊಂದಿರುತ್ತವೆ.

ಇವು ಶಿಕ್ಷಕರನ್ನು ಹೊಸ ಮಾಜಹಿತಿ ಮತ್ತು ಹೊಸ ಸಹೋದ್ಯೋಗಿಗಳಿಗೆ ಒಡ್ಡಲು ಉತ್ತಮ ಸ್ವರೂಪಗಳಾಗಿವೆ.

ಶೈಕ್ಷಣಿಕವಾಗಿ ಪ್ರಗತಿ ಹೊಂದಲು ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕು. ಮಕ್ಕಳ ಅಭಿವೃದ್ದಿಗೆ ಎಲ್ಲರೂ ಭಾಗವಹಿಸಕೆಂದರು.

ಕಾರ್ಯಾಗಾರದ ಕುರಿತು ಡಯಟ್ ಉಪನ್ಯಾಸಕಿ ಎಸ್ ಬಿ ಮಲ್ಲಾರಿ ಮಾತನಾಡಿದರು.

ಅಧ್ಯಕ್ಷತೆಯನ್ನು ಬಸವನಬಾಗೇವಾಡಿ ಕ್ಷೇತ್ರ ಸಮನ್ವಯಾಧಿಕಾರಿ ಸುನೀಲ ನಾಯಕ ವಹಿಸಿದ್ದರು. ನಾಗೇಂದ್ರ ಸಿನ್ನೂರ, ಎ.ವಾಯ್. ನಾಯ್ಕೋಡಿ ಇದ್ದರು. ಬಿಆರ್ಪಿ ಬಿ.ಎಸ್. ಅವಟಿ ಸ್ವಾಗತಿಸಿದರು. ಬಿಆರ್ಪಿ ಎಸ್. ಬಿ. ಬಾಗೇವಾಡಿ ನಿರೂಪಿಸಿದರು. ಬಿಆರ್ಪಿ ಎಮ್. ವ್ಹಿ .ಗಬ್ಬೂರ ವಂದಿಸಿದರು.



ಬೈಲಹೊಂಗಲ: ಪಟ್ಟಣದ ಕಲ್ಪವೃಕ್ಷ ಮಾದರಿ ಶಾಲೆಯ 7ನೇ ತರಗತಿ ವಿದ್ಯಾರ್ಥಿನಿ ಭಾಗ್ಯ ಶೇಖರಯ್ಯ ವಿಭೂತಿ ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಏರ್ಪಡಿಸಿದ ರಾಜ್ಯ ಮಟ್ಟದ ವಾದ್ಯ ಸಂಗೀತ ಸ್ಪರ್ಧೆಯ ಕೊಳಲು ನುಡಿಸುವ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾಳೆ. ಕೊಳಲು ನುಡಿಸುವಲ್ಲಿ ಸಾಧನೆಗೈದಿರುವ ಭಾಗ್ಯ ಅವರಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 2024ನೇ ಸಾಲಿನ ಕಲಾಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಿದ್ಯಾರ್ಥಿನಿಯ ಸಾಧನೆಗೆ ಸಂಸ್ಥೆಯ ಅಧ್ಯಕ್ಷೆ ಮಂಗಳಾ ಥಮ್ಮಣಗಿ, ಪ್ರಾಚಾರ್ಯ ಡಾ.ಹನುಮೇಶ ದುಡ್ಯಾಳ, ಆಡಳಿತಾಧಿಕಾರಿ ರಾಜಶೇಖರ ಕೋತಂಬ್ರಿ, ಶಿಕ್ಷಕ, ಸಿಬ್ಬಂದಿ ಬಳಗದವರು ಅಭಿನಂದಿಸಿದ್ದಾರೆ.

# ಹೊಸ ಬಸ್ ನಿಲ್ದಾಣದಲ್ಲಿ ನೂತನ ಪೊಲೀಸ್ ಹೊರಠಾಣೆಯ ಉದ್ಘಾಟನೆ



ಗದಗ : ನಗರದ ಹೊಸ ಬಸ್‌ನಿಲ್ದಾಣದಲ್ಲಿ ನೂತನವಾಗಿ ಪೊಲೀಸ್ ಹೊರಠಾಣೆಯನ್ನು ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ಅವರು ಉದ್ಘಾಟಿಸಿದರು.

ಮಹಿಳೆಯರು, ಮಕ್ಕಳು ಸೇರಿದಂತೆ ಪ್ರಯಾಣಿಕರ ಸುರಕ್ಷತೆಗಾಗಿ ಹೊಸ ಬಸ್ ನಿಲ್ದಾಣದಲ್ಲಿ ನೂತನ ಪೊಲೀಸ್ ಹೊರಠಾಣೆಯನ್ನು ಸ್ಥಾಪಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಂ.ಬಿ.ಸಂಕದ, ಡಿವೈಎಸ್ ಪಿ ಇನಾಮದಾರ, ಕೆ.ಎಸ್.ಆರ್.ಟಿ.ಸಿ. ವಿಭಾಗೀಯ ನಿಯಂತ್ರಣಾಧಿಕಾರಿ ಡಿ.ಎಂ.ದೇವರಾಜ, ಪೊಲೀಸ ಇಲಾಖೆಯ ಧೀರಜ ಶಿಂಧೆ, ಸಿದ್ದರಾಮೇಶ್ವರ ಗಡೇದ, ಡಿ ಬಿ ಪಾಟೀಲ, ಪಿಎಸ್‌ಐ ಮಾರುತಿ ಜೋಗದಂಡಕರ್, ವಿಜಯಕುಮಾರ ಕಮಟಳ್ಳಿ ಸೇ–ರಿದಂತೆ ಬೆಟಗೇರಿ ಬಡಾವಣೆಯ ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಹಾಜರಿದ್ದರು.

******

# ಸ್ವಾಮಿ ವಿವೇಕಾನಂದ ಜಯಂತಿ ಮತ್ತು ವಿವೇಕಾನಂದ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ ವಿತರಣಾ ಸಮಾರಂಭ



ಮುದ್ದೇಬಿಹಾಳ: ಫೆ.1 ರಂದು ಮುದ್ದೇಬಿಹಾಳ ಪಟ್ಟಣದಲ್ಲಿ ಸ್ವಾಮಿ ವಿವೇಕಾನಂದ ಜಯಂತಿ ಮತ್ತು ವಿವೇಕಾನಂದ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ ವಿತರಣಾ ಸಮಾರಂಭ ಏರ್ಪಡಿಸಲಾಗಿದೆ. ಈ ಬಾರಿ ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿ ನೀಡಲು ಯೋಜನೆ ರೂಪಿಸಲಾಗಿದ್ದು ಇದಕ್ಕಾಗಿ ಅರ್ಹ ಸಾಧಕರನ್ನು ಆಯ್ಕೆ ಮಾಡಲಾಗುತ್ತಿದೆ ಎಂದು ಕನ್ನಡ ಜಾನಪದ ಪರಿಷತ್, ಕರ್ನಾಟಕ ಯುವ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಡಾ। ಎಸ್.ಬಾಲಾಜಿ ತಿಳಿಸಿದರು.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಸೋಮವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಹಿಂದಿನ ವರ್ಷಗಳಲ್ಲಿ ಕರ್ನಾಟಕದ 31 ಜಿಲ್ಲೆಯ ಸಾಧಕರಿಗೆ, 2 ಯುವಕ, ಯುವತಿ ಮಂಡಳಿಯವರಿಗೆ ರಾಜ್ಯಮಟ್ಟದ ಪ್ರಶಸ್ತಿ ನೀಡಲಾಗುತ್ತಿತ್ತು. ಈ ಬಾರಿ ಮಹಾರಾಷ್ಟ್ರ, ಮಧ್ಯಪ್ರದೇಶ, ತಮೀಳನಾಡು, ಕೇರಳ, ರಾಜಸ್ಥಾನ ರಾಜ್ಯಗಳ ಸಾಧಕರನ್ನೂ ಪ್ರಶಸ್ತಿಗೆ ಆಯ್ಕೆ ಮಾಡಿರುವುದರಿಂದ ರಾಷ್ಟ್ರಮಟ್ಟದ ಗೌರವ ಕೊಡುವ ಉದ್ದೇಶ ಹೊಂದಲಾಗಿದೆ. ಇದ–ರಿಂದ ವಿವೇಕಾನಂದರ ಕೀರ್ತಿ ಮತ್ತು ನಮ್ಮ ಸಂಘಟನೆಗಳ ಪರಿಶ್ರಮ ರಾಷ್ಟ್ರಮಟ್ಟದಲ್ಲಿ ಹರಡುವ ಪರಿಕಲ್ಪನೆಗೆ ರೂಪ ಸಿಗಲಿದೆ ಎಂದರು.

ಯುವಜನಸೇವೆ ಮತ್ತು ಕ್ರೀಡಾ ಇಲಾಖೆ, ನೆಹರು ಯುವ ಕೇಂದ್ರ, ಕನ್ನಡ ಜಾನಪದ ಪರಿಷತ್ತು, ಯುವ ಸಂಘಟನೆಗಳ ಒಕ್ಕೂಟದ ಸಹಯೋಗದಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶಿವರಾಜ ತಂಗಡಗಿ ಉದ್ಘಾಟಿಸಲಿದ್ದು ಹಲವು ಗಣ್ಯರು ಭಾಗವಹಿಸುವರು. ಕಾರ್ಯಕ್ರಮದಲ್ಲಿ ಹಲವು ಸಾಧಕರನ್ನು ಗೌರವಿಸುವುದರ ಜೊತೆಗೆ ವಿವಿಧ ಕಲೆಗಳ ಪ್ರಸಾರಕ್ಕೂ ಆದ್ಯತೆ ನೀಡಲಾಗುತ್ತಿದೆ. ಈ ಬಾರಿ ಈ ಕಾರ್ಯಕ್ರಮವನ್ನು ಬಾಗಲಕೋಟೆ ಜಿಲ್ಲೆಯವರು ನಡೆಸಿಕೊಡಲು ಮುಂದೆ ಬಂದಿದ್ದರು. ಆದರೆ ಮುದ್ದೇಬಿಹಾಳದಲ್ಲಿ ಸಂಘಟನೆಯ ಅಚ್ಚುಕಟ್ಟುತನ, ಈಗಾಗಲೇ ರಾಜ್ಯಮಟ್ಟದಲ್ಲಿ ಈ ಊರು ಹೆಸರು ಮಾಡಿರುವುದರಿಂದ ಇಲ್ಲಿಯೇ ರಾಷ್ಟ್ರಮಟ್ಟದ ಕಾರ್ಯಕ್ರಮ ಹಮ್ಮಿಕೊಳ್ಳಲು ತೀರ್ಮಾನಿಸಬೇಕಾಯಿತು ಎಂದರು.

ಒಕ್ಕೂಟದ ಜಿಲ್ಲಾಧ್ಯಕ್ಷ ಪುಂಡಲೀಕ ಮುರಾಳ ಮಾತನಾಡಿ ಕಳೆದ ಹಲವು ವರ್ಷಗಳಿಂದ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ.

ಈ ಊರಿನವರ ಸಹಕಾರ ಇದರಲ್ಲಿ ಮಹತ್ವದ್ದಾಗಿದೆ. ನಮ್ಮ ತಂಡ ಕ್ರಿಯಾಶೀಲವಾಗಿ ಯಶಸ್ವಿ ಕಾರ್ಯಕ್ರಮ ಸಂಘಟಿಸುವ ವಿಶ್ವಾಸ ಇದೆ ಎಂದರು.

ಪ್ರಮುಖರಾದ ದಾನಯ್ಯಸ್ವಾಮಿ ಹಿರೇಮಠ, ಸಾಬಣ್ಣ ಚಳ್ಳಗಿ ವಕೀಲರು, ಸಂಗಣ್ಣ ಕಂಚ್ಯಾಣಿ, ಅಲ್ಲಾಭಕ್ಷ ನಿಡಗುಂದಿ, ಮಹಾಂತೇಶ ಬಿರಾದಾರ ವಕೀಲರು, ಚಂದ್ರು ಕಲಾಲ, ರಾಜು ವಾಲಿಕಾರ, ವಿವಿಧ ಘಟಕಗಳ ಪದಾಧಿಕಾರಿಗಳು, ಸದಸ್ಯರು ಪಾಲ್ಗೊಂಡಿದ್ದರು. ಇದೇ ಸಂದರ್ಭ ಡಾ.ಬಾಲಾಜಿ ಅವರನ್ನು ರಾಜುಗೌಡ ಅವರು ಸ್ನೇಹಿತರೊಡಗೂಡಿ ಸನ್ಮಾನಿಸಿದರು. ನೂತನ ಪದಾಧಿಕಾ–ರಿಗಳನ್ನು ಅಭಿನಂದಿಸಲಾಯಿತು.

ರಾಜ್ಯದಲ್ಲಿ ಯುವ ನೀತಿ ಜಾ–ರಿಯಾಗಬೇಕು ಎಂದು ಹಲವು ವರ್ಷಗಳಿಂದ ಬೇಡಿಕೆ ಈಡುತ್ತಿದ್ದೇವೆ. ಈಗ ನಮ್ಮವರೇ ಸಚಿವರಾಗಿದ್ದು ಈ ಬಾರಿ ನಮ್ಮ ಬೇಡಿಕೆ ಈಡೇರುವ ನಿರೀಕ್ಷೆ ಇದೆ.

**–ಡಾ.ಎಸ್.ಬಾಲಾಜಿ,**
**ರಾಜ್ಯಾಧ್ಯಕ್ಷರು, ಯುವ ಸಂಘಟನೆಗಳ ಒಕ್ಕೂಟ, ಕರ್ನಾಟಕ.**

## ಘಟಕ–ಪದಾಧಿಕಾರಿಗಳ ಆಯ್ಕೆ

ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ಮುದ್ದೇಬಿಹಾಳ ತಾಲೂಕು ಘಟಕಕ್ಕೆ ಗೌರವಾಧ್ಯಕ್ಷರಾಗಿ ಚಂದ್ರು ಕರೇಕಲ್, ಅಧ್ಯಕ್ಷರಾಗಿ ವೀರೇಶ ಗುರುಮಠ, ಉಪಾಧ್ಯಕ್ಷರಾಗಿ ಅಪ್ಪುಗೌಡ ಪಾಟೀಲ, ಪ್ರಧಾನ ಕಾರ್ಯದರ್ಶಿಯಾಗಿ ರಾಜುಗೌಡ ತುಂಬಗಿ, ಖಜಾಂಚಿಯಾಗಿ ಶ್ರೀಕಾಂತ ಹಿರೇಮಠ, ಸಂಘಟನಾ ಕಾರ್ಯದರ್ಶಿಯಾಗಿ ಪ್ರಶಾಂತ ಕಾಳೆ, ಮಾಧ್ಯಮ ಪ್ರತಿನಿಧಿಯಾಗಿ ರಫೀಕ ಶಿರೋಳ, ಸದಸ್ಯರಾದ ರುದ್ರೇಶ ಮುರಾಳ, ಮೈಬೂಬ ಮುಲ್ಲಾ, ಸಿದ್ದಯ್ಯ ಮಠ, ಮಹಾಂತೇಶ ಬಿಜ್ಜೂರ, ಮಲ್ಲು ಹುಡೇದ, ಬಸ್ಸು ಗಂಜಿಹಾಳ, ಮಾಂತು ಕನ್ನೂರ, ಕಿರಣಗೌಡ ಪಾಟೀಲ, ಮಹಾಂತಗೌಡ ಬಿರಾದಾರ ವಕೀಲರು, ರಾಜು ವಾಲಿಕಾರ, ಜಾನಪದ ಯುವ ಬ್ರಿಗೇಡ್ ಸಮಿತಿಗೆ ಸಂಚಾಲಕರಾಗಿ ಮುತ್ತು ಚಲವಾದಿ, ಗ್ರಾಮೀಣ ಸಹ ಸಂಚಾಲಕರಾಗಿ ಬಸವರಾಜ ಹೊಕ್ರಾಣಿ, ನಗರ ಸಹ ಸಂಚಾಲಕರಾಗಿ ಕೃಷ್ಣಾ ಕುಂಬಾರ, ಸದಸ್ಯರಾದ ರಾಹುಲ್ ಪಿರಂಗಿ, ವಿಜಯ್ ಬಡಿಗೇರ, ಸಂಗಮೇಶ ತಳವಾರ, ಧೀರಜ್ ಹಳ್ಳೂರ, ಬಸವರಾಜ ಮಹಾಲಿಂಗಪೂರ, ಸೂರಜ್ ಹಳ್ಳೂರ, ವೀರೇಶ ಹಾದಿಮನಿ, ಅನೀಲ ರಾಠೋಡ, ಮಹೇಶ ಹರಿ–ಜನ, ಕನ್ನಡ ಜಾನಪದ ಪರಿಷತ್ ಮಹಿಳಾ ಘಟಕಕ್ಕೆ ಅಧ್ಯಕ್ಷರಾಗಿ ದೀಪ ರತ್ನಶ್ರೀ, ಪ್ರಧಾನ ಕಾರ್ಯದರ್ಶಿಯಾಗಿ ಎಂ.ಎಸ್.ಹಿರೇಮಠ, ಸದಸ್ಯರಾದ ಸುಮಿತ್ರಾ, ಶಾಂತಾ, ನಿರ್ಮಲಾ, ಎಂ.ಎಸ್.ಹಿರೇಮಠ, ಈರಮ್ಮ, ನದಾಫ, ಶೈಲಾ, ನಾಗಮ್ಮ, ನಿಕಿತಾ, ಶಾರದಾ ಬಿದರಕುಂದಿ, ನೇತ್ರಾ ವಡವಡಗಿ ಅವರನ್ನು ಆಯ್ಕೆ ಮಾಡಲಾಯಿತು.

## ನೂತನ ಪದಾಧಿಕಾರಿಗಳ ಸೇವಾದೀಕ್ಷಾ ಸಮಾರಂಭ

ಗದಗ:– ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ನೂತನ ಪದಾಧಿಕಾರಿಗಳ ಸೇವಾದೀಕ್ಷಾ ಸಮಾರಂಭ ಇಂದು ಬೆಳಿಗ್ಗೆ 10 ಘಂಟೆಗೆ ನಗರದ ಪೂಜ್ಯ ಶ್ರೀಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರ ಅನುಭವ ಮಂಟಪದಲ್ಲಿ ಜರುಗಲಿದ್ದು, ಕಾರ್ಯಕ್ರಮದಲ್ಲಿ ಡಂಬಳ ಗದಗ ತೋಂಟದಾರ್ಯ ಸಂಸ್ಥಾನಮಠದ ಪೂಜ್ಯ ಶ್ರೀಮನ್ನಿರಂಜನ ಜಗದ್ಗುರು ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಸಾನಿಧ್ಯ ವಹಿಸುವರು, ಉದ್ಘಾಟನೆಯನ್ನು ಮಾಜಿ ಶಾಸಕ ಡಿ.ಆರ್.ಪಾಟೀಲ ನೆರವೇರಿಸಲಿದ್ದು, ಅಧ್ಯಕ್ಷತೆಯನ್ನು ಮಾಜಿ ಸಚಿವ ಎಸ್.ಎಸ್.ಪಾಟೀಲ್ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಕೆ.ಎಸ್.ಚಟ್ಟಿ, ಗೌರವ ಉಪಸ್ಥಿತಿ ಶಸಾಪ ಮಾಜಿ ಜಿಲ್ಲಾಧ್ಯಕ್ಷ ಅ. ಓಂ.ಪಾಟೀಲ, ಚನ್ನಬಸಪ್ಪ ಕಂಠಿ ವಹಿಸಲಿದ್ದು, ವಚನ ಗಾಯನವನ್ನು ನೀಲಮ್ಮ ಕುಳಗೇರಿ ಹಾಗೂ ರೇಣುಕಾ ಲಕ್ಕುಂಡಿ ಪ್ರಸ್ತುತ ಪಡಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಯು.ಪಿ.ಎಸ್.ಸಿ ಯಲ್ಲಿ 343 ನೇ ರ್ಯಾಂಕ್ ಪಡೆದ ಯಲ್ಲಪ್ಪ ಮಾರುತಿ ಗೋಶ್ಯಲ್ಲನವರ ಹಾಗೂ ಜಿಲ್ಲೆಯ 10 ನೂತನ ದತ್ತಿ ದಾನಿಗಳಿಗೆ ಸನ್ಮಾನಿಸಿ ಗೌರವಿಸಲಾಗುವದು ಎಂದು ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಎ.ಬಳಿಗೇರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೀರು ಪೂರೈಕೆಯಲ್ಲಿ ವ್ಯತ್ಯಯ

ಗದಗ : ಗದಗ ಬೆಟಗೇರಿ ಅವಳಿ ನಗರಕ್ಕೆ ಸಗಟು ನೀರು ಸರಬರಾಜು ಮಾಡುವ ಹಮ್ಮಿಗಿ ಜ್ಯಾಕ್‌ವೆಲ್‌ದಿಂದ ಡಂಬಳ ಮಧ್ಯಂತರ ಪಂಪಿಂಗ್ ಸ್ಟೇಷನ್‌ಗೆ ಬರುವ ಸಿಂಗಟಾಲೂರ ಹಿಂಭಾಗದಲ್ಲಿ ಮುಖ್ಯ ಕೊಳವೆ ಮಾರ್ಗಗಳ ದುರಸ್ತಿ ಕಾರ್ಯವನ್ನು ಯುದ್ಧೋಪಾದಿಯಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ದುರಸ್ತಿ ಕಾರ್ಯ ಪೂರ್ಣಗೊಳ್ಳುವವರೆಗೂ ನೀರು ಪೂರೈಕೆಯಲ್ಲಿ ವ್ಯತ್ಯಯಉಂಟಾಗುವುದರಿಂದ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕ–ರಿಸಬೇಕು

ಗದಗ–ಬೆಟಗೇರಿ ಅವಳಿನಗರದ ಸಾರ್ವಜನಿಕರು ತಮ್ಮ ನೀರಿನ ಕರವನ್ನು ತುಂಬಬೇಕು. ಒಂದು ವೇಳೆ ಬಾಕಿ ಉಳಿದ ನೀರಿನ ಬಿಲ್‌ತುಂಬದೇ ಹೋದರೆ, ನಳಗಳನ್ನು ಬಂದ ಮಾಡಲಾಗುತ್ತದೆ. ನೀರಿನ ಕರವನ್ನು ತುಂಬಲು ಗದಗ–ಬೆಟಗೇರಿ ನಗರಸಭೆಯ ಪ್ರಕಟಣೆ ತಿಳಿಸಿದೆ.

*******

# ಹಾನಗಲ್ –ಶಿಗ್ಗಾಂವಿಯ ವಿವಿಧ ತಂಬಾಕು ಉತ್ಪನ್ನ ಮಾರಾಟದ ಅಂಗಡಿಗಳ ಮೇಲೆ ದಾಳಿ



ಹಾವೇರಿ: ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದ ಅಂಗವಾಗಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶದಿಂದ ಗುರುವಾರ ಹಾನಗಲ್ ಹಾಗೂ ಶಿಗ್ಗಾಂವ ಪಟ್ಟಣದ ವಿವಿಧ ಧೂಮಪಾನ ಅಡ್ಡಾಗಳು ಹಾಗೂ ಪಾನ್‌ಶಾಪ್‌ಗಳ ಮೇಲೆ ದಾಳಿ ನಡೆಸಿ ದಂಡ ವಸೂಲಿ ಮಾಡಿದೆ.

ಪರವಾನಿಗೆ ಪಡೆಯದೇ ತಂಬಾಕು ಮಾರಾಟ ಮಾಡುತ್ತಿದ್ದ ಅಂಗಡಿ ಮಾಲೀಕರಿಗೆ ಹಾಗೂ ಕಾಯ್ದೆ ವಿರುದ್ಧವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವ, ನೇರ–ಪರೋಕ್ಷವಾಗಿ ತಂಬಾಕು ಜಾಹೀರಾತು ಪ್ರದರ್ಶನ, ಶಾಲಾ–ಕಾಲೇಜು ಆವರಣದ 100 ಮೀಟರ್ ಅಂತರದೊಳಗೆ ತಂಬಾಕು ಉತ್ಪನ್ನಗಳನ್ನು ಮಾರಾಟಮಾಡುತ್ತಿರುವ ಅಂಗಡಿ, ಬೇಕರಿ, ಹೋಟೆಲ್ ಮಾಲೀಕ–ರಿಗೆ ನೋಟೀಸ್ ಜಾರಿ ಮಾಡಿ, ತಂಬಾಕು ನಿಯಂತ್ರಣ ಕಾಯ್ದೆ–2003ರ ಕಲಂ–6ಬಿ ಅಡಿಯಲ್ಲಿ 4 ಪ್ರಕರಣಗಳಿಂದ ರೂ.350/– ಹಾಗೂ ಕಲಂ–4ರಡಿಯಲ್ಲಿ 19 ಪ್ರಕರಣಗಳಿಂದ ರೂ.2150 ಸೇರಿ ಒಟು ರೂ.2,500/–ದಂಡ ವಸೂಲಿ ಮಾಡಲಾಗಿದೆ. ಪರೋಕ್ಷವಾಗಿ ತಂಬಾಕು ಜಾಹೀರಾತು ಮಾಡುವ ಐದು ಫಲಕಗಳನ್ನು ತೆರವುಗೊಳಿಸಲಾಗಿದೆ.

ಈ ತನಿಖಾ ದಾಳಿ ತಂಡದಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಲಹೆಗಾರ ಡಾ.ಸಂತೋಷ ದಡ್ಡಿ, ಸಮಾಜ ಕಾರ್ಯಕರ್ತ ದಾದಾಪೀರ ಹುಲಿಕಟ್ಟಿ, ಆಹಾರ ಸುರಕ್ಷತಾ ಅಧಿಕಾರಿ ಜಿ.ವಿ.ಕುಂದಗೋಳ, ಆರೋಗ್ಯ ನಿರೀಕ್ಷಕರಾದ ವಿರೇಂದ್ರ ಮತ್ತು ಪ್ರಕಾಶ ಕಿತ್ತೂರ ಹಾಗೂ ಮಹೇಶ ಕುಮ್ಮೂರ ಉಪಸ್ಥಿತರಿದ್ದರು.

*****

# 16ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ರಾಯಭಾರಿಯಾಗಿ ನಟ ಕಿಶೋರ್ ನೇಮಕ



ಗದಗ : ದಕ್ಷಿಣ ಭಾರತ ಹಾಗೂ ಕನ್ನಡದ ಹೆಸರಾಂತ ಚಲನಚಿತ್ರ ನಟ ಕಿಶೋರ್ ಕುಮಾರ್. ಜಿ ಅವರು 16ನೇ ಬೆಂಗಳೂರು ಅಂತಾರಾಷ್ಟ್ರೀ0ಯ ಚಲನಚಿತ್ರೋತ್ಸವದ ರಾ0ಯಭಾರಿ0ಯಾಗಿ ನೇಮಕಗೊಂಡಿದ್ದಾರೆ.

ಈ ಕುರಿತು ಕರ್ನಾಟಕ ಸರ್ಕಾರ ಆದೇಶ ಹೊರಡಿಸಿದ್ದು, 2024–2025ನೇ ಸಾಲಿನಲ್ಲಿ 16ನೇ ಬೆಂಗಳೂರು ಅಂತಾರಾಷ್ಟ್ರೀ0ಯ ಚಲನಚಿತ್ರೋತ್ಸವವನ್ನು 2025ರ ಮಾರ್ಚ್ 1 ರಿಂದ 8ರ ವರೆಗೆ ಬೆಂಗಳೂರಿನಲ್ಲಿ ಆ0ಯೋಜಿಸಿದ್ದು, ಚಿತ್ರೋತ್ಸವದ ಕುರಿತು ಹೆಚ್ಚಿನ ಪ್ರಚಾರ ಸಲುವಾಗಿ ಹಿಂದಿ ಹಾಗೂ ದಕ್ಷಿಣ ಭಾರತದ ಎಲ್ಲಾ ಭಾಷೆಗಳಲ್ಲಿ ನಟಿಸಿ ಜನ ಮನ್ನಣೆ ಪಡೆದಿರುವ ಕನ್ನಡದ ಖ್ಯಾತ ನಟ ಕಿಶೋರ್ ಕುಮಾರ್. ಜಿ ಇವರನ್ನು ಚಿತ್ರೋತ್ಸವದ 16ನೇ ಆವೃತ್ತಿಗೆ ರಾ0ಯಭಾರಿ0ಯಾಗಿ ನೇಮಿಸಿರುವುದಾಗಿ ಆದೇಶದಲ್ಲಿ ತಿಳಿಸಿದೆ.

ಬೆಂಗಳೂರು ಅಂತಾರಾಷ್ಟ್ರೀ0ಯ ಚಲನಚಿತ್ರೋತ್ಸವ ಬೆಳ್ಳಿ0ಯಂ ನ ಈಖ–ಂಕಈ ಅಂತಾರಾಷ್ಟ್ರೀ0ಯ ಮನ್ನಣೆ ಪಡೆದಿರುವ ಚಿತ್ರೋತ್ಸವವಾಗಿದ್ದು, ಸುಮಾರು 8 ದಿನಗಳ ಕಾಲ ಬೆಂಗಳೂ–ರಿನ 13 ಚಿತ್ರಮಂದಿರಗಳಲ್ಲಿ ದೇಶ–ವಿದೇಶಗಳ ಅತ್ಯುನ್ನತ ಚಿತ್ರಗಳ ಪ್ರದರ್ಶನ ಹಾಗೂ ಚಲನಚಿತ್ರಗಳಿಗೆ ಸಂಬಂಧಿಸಿದಂತೆ ಕಾ0ರ್ಯಾಗಾರಗಳು, ವಿಚಾರ ಸಂಕಿರಣ ಇನ್ನಿತರ ಚಿತ್ರರಂಗಕ್ಕೆ ಪೂರಕ ಕಾ0ರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

16ನೇ ಬೆಂಗಳೂರು ಅಂತಾರಾಷ್ಟ್ರೀ0ಯ ಚಲನಚಿತ್ರೋತ್ಸವದ ಸಂಘಟನಾ ಸಮಿತಿ0ಯ ಅಧ್ಯಕ್ಷರೂ ಆಗಿರುವ ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮ0ಯ್ಯ ಅವರು ಇತ್ತೀಚೆಗಷ್ಟೆ ಸಭೆ ನಡೆಸಿ, ಚಿತ್ರೋತ್ಸವದ ದಿನಾಂಕ ಘೋಷಿಸಿದ ಬಳಿಕ ಸುದ್ದಿಗೋಷ್ಠಿ0ಯಲ್ಲಿ, 16ನೇ ಬೆಂಗಳೂರು ಅಂತಾರಾಷ್ಟ್ರೀ0ಯ ಚಲನಚಿತ್ರೋತ್ಸವ ?ಸರ್ವ ಜನಾಂಗದ ಶಾಂತಿ0ಯ ತೋಟ? ಶೀರ್ಷಿಕೆ0ಯಡಿ ಪ್ರಸಕ್ತ ಸಾಲಿನಲ್ಲಿ ನಡೆ0ಯುತ್ತಿದ್ದು, ಚಿತ್ರೋತ್ಸವಕ್ಕೆ ದೇಶ–ವಿದೇಶಗಳಿಂದ ಅತ್ಯುನ್ನತ ಚಿತ್ರಗಳನ್ನು ತರುವ ಕು–ರಿತು ಹಾಗೂ ದೇಶ–ವಿದೇಶಗಳ ಸಿನಿಮಾ ರಂಗದ ಗಣ್ಯಾತಿಗಣ್ಯರನ್ನು ಚಿತ್ರೋತ್ಸವದಲ್ಲಿ ಭಾಗವಹಿಸಲು ಕ್ರಮ ಕೈಗೊಂಡಿರುವುದಾಗಿ ತಿಳಿಸಿದ್ದರು.

*******

# ಮಕ್ಕಳಲ್ಲಿಯ ಸಂಸ್ಕಾರ–ಪ್ರತಿಭೆ ಗುರುತಿಸುವ ಕಾರ್ಯ ನಿರಂತರವಾಗಿರಲಿ –ಜುನಗೊಂಡ




ಸಿಂದಗಿ,8– ನಮ್ಮ ಮಕ್ಕಳಲ್ಲಿ ಉತ್ತಮ ಸಂಸ್ಕಾರವನ್ನು ಬೆಳೆಸಿ ಪ್ರತಿಭೆಯನ್ನು ಪ್ರೋತ್ಸಾಹಿಸುವ ಮೂಲಕ ದೇಶ ಕಟ್ಟುವ ಕಾರ್ಯ ಆಗಬೇಕು ಆ ಕಾರ್ಯ ಶ್ರೀ ಗುರುಕೃಪಾ ಶಿಕ್ಷಣ ಸಂಸ್ಥೆಯಲ್ಲಿ ನಡೆದು ಭವ್ಯ ಭಾರತದ ನಿರ್ಮಾಣಕ್ಕೆ ಇಲ್ಲಿಯ ವಿದ್ಯಾರ್ಥಿಗಳು ಬರುವಂತೆ ಕಾರ್ಯ ನಡೆಯುತ್ತದೆ ಎಂದು ವಿಜಯಪುರ ರಾಣಿ ಚೆನ್ನಮ್ಮಾ ವಿಶ್ವವಿದ್ಯಾಲಯದ ಬಿ.ಇ.ಓ ಸದಸ್ಯ ಮಂಜುನಾಥ ಜುನಗೊಂಡ ಅವರು ಹೇಳಿದರು.

ಶ್ರೀ ಗುರುಕೃಪಾ ಇಂಗ್ಲೀಷ ಮಾಧ್ಯಮ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನದ ಮುಖ್ಯ ಅತಿಥಿಯಾಗಿ ಮಾತನಾಡುತ್ತ ಇಂದು ವಿಶ್ವ ಶಾಂತಿ ಅವಶ್ಯವಿದ್ದು ಅದರ ಆಧಾರದ ಮೇಲೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವ ಮೂಲಕ ಜಾತಿ, ಮತ, ಭೇದ ಹೋಗಬೇಕು ಮಾನವೀಯತೆಯನ್ನು ಬೆಳೆಸುವ ಪ್ರೀತಿ ಪ್ರೇಮ ಇಟ್ಟು ದೇಶ ಕಟ್ಟು ಕೆಲಸ ಆಗಬೇಕಿದೆ ಎಂದರು.

ವಚನ, ಭಗವದ್ಗೀತೆ ಹೇಳುವ ಶಾಲೆಯು ದೇಶದ ಸಂಸ್ಕೃತಿ ಬಿತ್ತರಿಸುವದರ ಜೊತೆಗೆ ಜೀವನ ಹೇಗೆ ಎಂಬುದು ತಿಳಿಸಿ ಸಂಸ್ಕೃತಿ ಉಳಿಸಿ ಬೆಳೆಸುವದಾಗಿದೆ ಇಂತಹ ಮಹತ್ವದ ಕಾರ್ಯ ಎಚ್.ಟಿ.ಕುಲಕರ್ಣಿ ಅವರಂತಹ ಮಹಾನ್ ವ್ಯಕ್ತಿಗಳಿಂದ ಈ ಶಿಕ್ಷಣ ಸಂಸ್ಥೆ ಪಾಲಿಸಿಕೊಂಡು ಬರುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ ಎಂದರು. ಹೆಸರು ಬೇಕು ಆದರ್ಶ ಬೇಡ ಎನ್ನುವ ಸ್ಥಿತಿ ಈಗ ಇದೆ, ಗ್ರಂಥಾಲಯಗಳಲ್ಲಿ ಬುಕ್ಸ್ ಇವೆ, ಮಸ್ತಕ ತುಂಬಿಸುವ ಕಾರ್ಯ ನಡೆಯಬೇಕಿದೆ ಅದಕ್ಕಾಗಿ ಎಚ್‌ಟಿ ಅಂತಹವರ ಮಾರ್ಗದರ್ಶನದಲ್ಲಿ ನಡೆದರೆ ದಾರಿ ಸುಗಮವಾಗಲಿದೆ ಎಂದರು.

ನಿಮ್ಮ ಮಕ್ಕಳ ಪ್ರತಿಭೆ ತೋರಿಸಲು ಈ ಶಿಕ್ಷಣ ಸಂಸ್ಥೆ ಮುಂದೆ ಇದೆ ಪಾಲಕರು ಎಲ್ಲ ಮಕ್ಕಳ ಪ್ರತಿಭೆ ನೋಡಿ ಪುರಸ್ಕ–ರಿಸುವದರ ಜೊತೆಗೆ ಉತ್ತಮ ಸಂಸ್ಕಾರ, ಸಂಸ್ಕೃತಿ ನೀಡುದರೊಂದಿಗೆ ಮಕ್ಕಳನ್ನು ಸುಂದರ ಸಮಾಜದಲ್ಲಿ ಬದುಕುವ ಕಲೆಯನ್ನು ಈ ಶಿಕ್ಷಣ ಸಂಸ್ಥೆ ಮಾಡುತ್ತಿದೆ ಅದಕ್ಕೆ ಪಾಲಕರ ಸಹಕಾರ ಅವಶ್ಯ ಎಂದು ಬಸವ ಸಮಿತಿ ಅಧ್ಯಕ್ಷರಾದ ಎನ್.ಎಸ್. ಪಾಟೀಲ ಹೇಳಿದರು.

ಮಕ್ಕಳ ಬಗ್ಗೆ ಆತ್ಮೀಯ ಗೌರವ ಇಟ್ಟುಕೊಂಡೆ ಹೋಗಬೇಕು, ವಿದ್ಯಾರ್ಜನೆಗೆ ಬೆಲೆ ಕೊಟ್ಟು ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಬೇಕು ಎಂದು ಅಥರ್ಗಾದ ಜ್ಞಾನ ಭಾರತಿ ಶಾಲೆಯ ಆಡಳಿತಾಧಿಕಾರಿ ಆರ್.ಬಿ.ಪುರೋಹಿತ ಅವರು ಹೇಳಿದರು.

ಮಕ್ಕಳ ಕಡೆ ಕಾಳಜಿ ವಹಿಸಲು ಪಾಲಕರಲ್ಲಿ ಮನವಿ ಮಾಡಿದ ಅವರು ಈ ಶಿಕ್ಷಣ ಸಂಸ್ಥೆಯಲ್ಲಿಯ ಶಿಕ್ಷಕರು ವಿದ್ಯಾರ್ಥಿಗಳನ್ನು ತಮ್ಮವರೇ ಎನ್ನುವ ರೀತಿಯಲ್ಲಿ ಜ್ಞಾನಾರ್ಜನೆ ಮಾಡಿಸುತ್ತಿರುವುದು ಒಂದು ಹೆಮ್ಮೆಯ ವಿಷಯ ಎಂದರು.

ಪಾಲಕರ ಪ್ರತಿನಿಧಿಯಾಗಿ ಆಗಮಿಸಿದ ಸಿಂದಗಿಯ ಪದ್ಮರಾಜ ಮಹಿಳಾ ಕಾಲೇಜಿನ ಉಪನ್ಯಾಸಕರಾದ ಹಾಗೂ ಪತ್ರಕರ್ತ ಮಹಾಂತೇಶ ನೂಲನವರ ಮಾತನಾಡಿ ಶಿಕ್ಷಣದ ಜೊತೆಗೆ ಸಂಸ್ಕೃತಿ, ಸಂಸ್ಕಾರ ಬೆಳೆಸುವದರ ಜೊತೆಗೆ ಪ್ರತಿಭೆಯನ್ನು ಗುರುತಿಸುವ ಕಾರ್ಯ ಈ ಸಂಸ್ಥೆ ಮಾಡುತ್ತಿದೆ, ಪಾಲಕರಾದ ನಾವು ಅದಕ್ಕೆ ಬೆಂಬಲ ನೀಡಬೇಕಾದದ್ದು ಅಷ್ಟೆ ಕರ್ತವ್ಯ ಎಂದರು

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಸಂಸ್ಥೆಯ ಅಧ್ಯಕ್ಷ ಎಚ್.ಟಿ. ಕುಲಕರ್ಣಿ ಅವರು ಮಾತನಾಡಿ ಜುನಗೊಂಡ ಅವರ ಮಾತುಗಳು ಮಕ್ಕಳಲ್ಲಿ ಮತ್ತು ಪಾಲಕರಲ್ಲಿ ಪ್ರಸನ್ನತೆ ಬರುವಂತೆ ಆಡಿದ ಮಾತುಗಳು ಅಪರೂಪವಾದುದು, ಮಕ್ಕಳಲ್ಲಿ ಸಂಸ್ಕಾರ ಇರುವ ಈ ಶಾಲೆಯ ಪ್ರಸನ್ನತೆಯು ಒಂದು ಅಪರೂಪ, ಶಿಕ್ಷಕರು ಉತ್ತಮ ಸಂಸ್ಕಾರ ನೀಡಿ ಸಂಸ್ಥೇಯ ಕೀರ್ತಿ ಎತ್ತರಕ್ಕೆ ಒಯ್ಯುತ್ತಿರುವದು ಅಷ್ಟೇ ಅಪರೂಪ ಇನ್ನೂ ವಿದ್ಯಾರ್ಥಿಗಳುಸಾಧನೆ ಮಾಡಿದ್ದು ನೋಡಿದರೇ ಒಂದು ಅಪರೂಪದ ಕಾರ್ಯ, ಪಾಲಕರು ಅಷ್ಟೇ ಹುರುದುಂಬಿಸುತ್ತಿರುವದು ಅಪರೂಪ ಎಂಬ ನುಡಿಯ ಮೇಲೆ ಅಪರೂಪ ನಿಂತಿದೆ ಎಂದು ಮಾರ್ಮಿಕವಾಗಿ ಅಧ್ಯಕ್ಷೀಯ ಮಾತುಗಳನ್ನಾಡಿದರು.

ಸಂಸ್ಥೆಯ ವಾರ್ಷಿಕ ವರದಿಯನ್ನು ಮುಖ್ಯ ಗುರುಮಾತೆ ಶ್ರೀಮತಿ ಹೇಮಾ ಪೊದ್ದಾರ ಮಂಡಿಸಿದರು. ಪ್ರಾರಂಭದಲ್ಲಿ ವಿದ್ಯಾರ್ಥಿನಿ ವಾಸವಿ ಕುಲಕರ್ಣಿ ಸ್ವಾಗತ ಗೀತೆನಡೆಸಿಕೊಟ್ಟಳು.

ಶೃತಿ ಕುಲಕರ್ಣಿ ಅವರಿಂದ ಸ್ವಾಗತ, ಹರೀಷ ಪೊದ್ದಾರ ಅವ–ರಿಂದ ವಂದನಾರ್ಪಣೆ ಜರುಗಿತು. ಶಿಕ್ಷಕಿ ಶೃತಿ ಕುಲಕರ್ಣಿ ಅವರಿಗೆ ಉತ್ತಮ ಶಿಕ್ಷಕಿ ಪ್ರಶಸ್ಥಿ ನೀಡಲಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ವಿದ್ಯಾರ್ಥಿಗಳಾದ ಚೆನ್ನವೀರ ಆಕಸ್ತಿ ಹಾಗೂ ಶೀರಿನ ಸಿತನೂರ ಅವರು ನಡೆಸಿಕೊಟ್ಟದ್ದು ಒಂದು ವಿಶೇಷವಾಗಿತ್ತು. ವೇದಿಕೆಯ ಮೇಲೆ ಶ್ರೀ ಗುರು ಕೃಪಾ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಎಚ್. ಜಿ. ಪೊದ್ದಾರ, ಶಾಲೆಯ ವಿದ್ಯಾರ್ಥಿಗಳ ಪ್ರಧಾನ ಕಾರ್ಯದರ್ಶಿ ಕುಮಾರಿ ಅಪೂರ್ವ ಹೊಸಮನಿ ಉಪಸ್ಥಿತರಿದ್ದರು.

ಸುಮಾರು ರಾತ್ರಿ 12 ಗಂಟೆಯವರೆಗೆ ವಿಶ್ವಶಾಂತಿ ವಿಷಯದ ಮೇಲೆ ಮನರಂಜನಾ ಕಾರ್ಯಕ್ರಮಗಳು ನಡೆದವು

## ಕೊಡಗಾನೂರ ಗ್ರಾಪಂ ಉಪಾಧ್ಯಕ್ಷರ ಚುನಾವಣೆ

# ಉಪಾಧ್ಯಕ್ಷರಾಗಿ ವಿರೇಶಗೌಡ ಪಾಟೀಲ ಅವಿರೋಧ ಆಯ್ಕೆ



ತಾಳಿಕೋಟೆ, ತಾಲೂಕಿನ ಕೊಡಗಾನೂರ ಗ್ರಾಮ ಪಂಚಾಯ್ತಿಯ ರಾಜೀನಾಮೆಯಿಂದ ತೆರವಾಗಿದ್ದು ಉಪಾಧ್ಯಕ್ಷ ಸ್ಥಾನಕ್ಕೆ ಇಂದು ಬುಧವಾರರಂದು ನಡೆದ ಚುನಾವಣೆಯಲ್ಲಿ ವೀರೇಶಗೌಡ ಶ್ರೀಮಂತಗೌಡ ಪಾಟೀಲ(ಕಾರಗನೂರ) ಅವರು ಅವಿರೋಧವಾಗಿ ಆಯ್ಕೆಯಾದರು.

ಉಪಾಧ್ಯಕ್ಷ ಸ್ಥಾನ ಆಯ್ಕೆ ಕುರಿತು ನಡೆದ ಚುನಾವಣೆಯಲ್ಲಿ ಸದಸ್ಯ ವೀರೇಶಗೌಡ ಪಾಟೀಲ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರು. ಚುನಾವಣೆ ಪ್ರಕ್ರೀಯೇದಂತೆ ನಾಮಪತ್ರ ಸಲ್ಲಿಕೆ, ಪರಿಶೀಲನೆ ಬಳಿಕ ಆಯ್ಕೆ ಪ್ರಕ್ರೀಯೇಯಲ್ಲಿ ಕೊಡಗಾನೂರ ಗ್ರಾಂಪಂದ ಉಪಾಧ್ಯಕ್ಷರಾಗಿ ವೀರೇಶಗೌಡ ಪಾಟೀಲ ಅವರು ಅವಿರೋಧವಾಗಿ ಆಯ್ಕೆಗೊಂಡಿದ್ದಾರೆಂದು ಚುನಾವಣಾಧಿಕಾರಿ ತಾಪಂ ಇಒ ನಿಂಗಪ್ಪ ಮಸಳಿ ಅವರು ಘೋಷಿಸಿದರು.

ಒಟ್ಟು 21 ಜನ ಸದಸ್ಯ ಬಲ ಹೊಂದಿರುವ ಕೊಡಗಾನೂರ ಗ್ರಾಪಂ ನ ಉಪಾಧ್ಯಕ್ಷರ ಈ ಚುನಾವಣೆಯಲ್ಲಿ 13 ಜನ ಸದಸ್ಯರು ಹಾಜರಿದ್ದರು. ತಾಪಂ ನ ಬಸನಗೌಡ ಚೌದ್ರಿ, ಮಹಾಂತಗೌಡ ದೊರಗೋಳ, ಪಿಡಿಒ ಅನೀಲಕುಮಾರ್ ಕಿರಣಗಿ ಕಾರ್ಯದರ್ಶಿ ಎಚ್.ಜಿ. ಚೌದ್ರಿ ಚುನಾವಣಾ ಸಹಾಯಕರಾಗಿ ಕಾರ್ಯ ನಿರ್ವಹಿಸಿದರು.

ವಿಜಯೋತ್ಸವ: ಜೆಡಿಎಸ್ ತಾಲೂಕಾ ಅಧ್ಯಕ್ಷ ಮಡು ಸಾಹುಕಾರ ಬಿರಾದಾರ, ಜೆಡಿಎಸ್ ಮುಖಂಡರಾದ ಜಿಪಂ ಮಾಜಿ ಸದಸ್ಯ ಬಸನಗೌಡ ವಣಿಕ್ಯಾಳ, ಇವರ ನೇತೃತ್ವದಲ್ಲಿ ವಿಜಯೋತ್ಸವ ಆಚ–ರಿಸಲಾಯಿತು.

ಈ ಸಮಯದಲ್ಲಿ ಗ್ರಾಪಂ ಅಧ್ಯಕ್ಷರಾದ ಶಾಂತಮ್ಮ ಎಂ. ಪಾಟೀಲ, ಮುಖಂಡರಾದ ಶಾಂತಗೌಡ ಇಬ್ರಾಹಿಂಪೂರ, ಪ್ರಭುಗೌಡ ಪಾಟೀಲ(ಲಕ್ಕುಂಡಿ), ಮಲ್ಲನಗೌಡ ಪಾಟೀಲ(ನಾವದಗಿ), ಸಿದ್ದನಗೌಡ ಪಾಟೀಲ(ಲಕ್ಕುಂಡಿ), ಹಣಮಂತರಾಯಗೌಡ ವಣಿಕ್ಯಾಳ, ಮಾಜಿ ಅಧ್ಯಕ್ಷ ಬಸನಗೌಡ ಕಿರಸಾಲ ಪಾಟೀಲ, ಮಾಜಿ ಉಪಾಧ್ಯಕ್ಷ ಬಾಬುಗೌಡ ಪಾಟೀಲ, ಹರಿಷಗೌಡ ವಣಕ್ಯಾಳ, ರಾಜು ಕಟ್ಟಿಮನಿ, ಮೊದಲಾದವರು ಪಾಲ್ಗೊಂಡಿದ್ದರು.

## ಅಥಣಿ ಮುರಘೇಂದ್ರ ಶಿವಯೋಗಿಗಳ ಕೊಡುಗೆ ನಾಡಿಗೆ ಅಪಾರ; ಶರಣಬಸವ ದೇವರು



ರಬಕವಿ–ಬನಹಟ್ಟಿ, : ಬೆಳಗಾವಿ ಜಿಲ್ಲೆಯ ಅಥಣಿ ನಗರದ ಗಚ್ಚಿನ ಮಠ ಅನೇಕ ಶ್ರೇಷ್ಠ ಸಾಧಕರನ್ನು ನಾಡಿಗೆ ನೀಡದ ಮಹಾನ್ ಮಠ. ಇದಕ್ಕೆಲ್ಲ ಕಾರಣ ಶ್ರೀ ಮುರುಘೇಂದ್ರ ಶಿವಯೋಗಿಗಳು ಈ ಮಠದ ಕೊಡುಗೆ ನಾಡಿಗೆ ಅಪಾರವಾದುದು ಎಂದು ಬೆಳವಿ ಚರಂತೇಶ್ವರ ವಿರಕ್ತಮಠದ ಶ್ರೀ ಶರಣಬಸವ ದೇವರು ಹೇಳಿದರು.

ರಬಕವಿ ಗುರುದೇವ ಬ್ರಹ್ಮಾನಂದ ಆಶ್ರಮದಲ್ಲಿ ನಡೆಯುತ್ತಿರುವ ಬ್ರಹ್ಮಾನಂದ ಉತ್ಸವ ಸಮಾರಂಭದಲ್ಲಿ ಶ್ರೀ ಮಠದ ಶ್ರೀ ಗುರುಸಿದ್ಧೇಶ್ವರ ಶ್ರೀಗಳು ರಚಿಸಿದ "ಅನುಭಾವ ನವೇದನೆ" ಎಂಬ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಅಥ–ಣಿ ಮುರುಘೇಂದ್ರ ಶಿವಯೋಗಿಗಳ ಸ್ಮರಣೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿರು. ಸಾಮಾಜಿಕ ಸಮಾನತೆಯ ದಷ್ಟಿಯಲ್ಲಿ ಹರ್ಡೇಕರ ಮಂಜಪ್ಪನವರಿಗೆ ಲಿಂಗ ದೀಕ್ಷೆ ನೀಡಿದ ಇವರು, ಅಷ್ಟೇ ಅಲ್ಲ ಸ್ವತಂತ್ರ್ಯ ಹೋರಾಟಗಾರ ಬಾಲಗಂಗಾಂಧರ ತಿಲಕ, ಮಾಜಿ ಉಪರಾಷ್ಟಪತಿ ಬಿ.ಡಿ.ಜತ್ತಿ, ಕೆ.ಎಲ್.ಇ ಸಂಸ್ಥಾಪಕರಲ್ಲೊಬ್ಬ ಮತ್ತು ದಾನಿ ಶಿರಸಂಗಿ ಲಿಂಗರಾಜರಿಗೆ ಮಾರ್ಗದರ್ಶನ ನೀಡಿದ ಕೀರ್ತಿ ಅಥಣಿ ಮುರುಘೇಂದ್ರ ಶಿವಯೋಗಿಗಳಿಗೆ ಸಲ್ಲುತ್ತದೆ ಎಂದರು.

ಮೆಳ್ಳಿಗೇರಿ ಅಮ್ಮಲಝುರಿ ಶ್ರೀ ಜ್ಞಾನಮಯಾನಂದ ಸ್ವಾಮಿಗಳು ಮಾತನಾಡಿ, ಮುರುಘೇಂದ್ರ ಶಿವಯೋಗಿಗಳು ಶಿವಶರಣ–ರ ವಚನ ಸಾಹಿತ್ಯವನ್ನು ತಲೆ ಮೇಲೆ ಹೊತ್ತು ಜನರಲ್ಲಿ ಜಾಗತಿ ಮೂಡಿಸಿದರು. ವಚನ ಸಾಹಿತ್ಯ ಬಿಟ್ಟು ಬೇರೆ ಇನ್ನಾವುದೇ ಸಾಹಿತ್ಯವನ್ನು ಶಿವಯೋಗಿಗಳು ಓದಲೇ ಇಲ್ಲ, ಅದಕ್ಕಾಗಿಯೇ ಅವರು ಬಸವಣ್ಣನವರನ್ನು ಅಪ್ಪ ಎಂದು ಸಂಬೋಧಿಸುತ್ತಿದ್ದರು ಎಂದ ಅವರು ಇಂತಹ ಮಹಾನ್ ಸಾಧಕ ಮುರುಘೇಂದ್ರ ಶಿವಯೋಗಿಗಳ ಜೀವನ ದರ್ಶನ ನಮಗೆಲ್ಲ ಮಾದರಿ ಎಂದರು.

"ಅನುಭಾವ ನಿವೇದನೆ" ಗ್ರಂಥ–ದ ಸಂಪಾದನೆ ಮಾಡಿದ ಕಾಲತಿಪ್ಪಿ ಶಿವಾನಂದ ಮರೇಗುದ್ದಿ, ಹಾಗೂ ಜಮಖಂಡಿ ಬಸವಜ್ಯೋತಿ ವಿದ್ಯಾಸಂಸ್ಥೆಯ ಆಢಳಿತಾಧಿಕಾರಿ ಡಾ.ಬಸವರಾಜ ಕಡ್ಡಿ ಗ್ರಂಥ ಪರಿಚಯ ಮಾಡಿ ಮಾತನಾಡಿ, ಬ್ರಹ್ಮಾನಂದ ಆಶ್ರಮದ ಶ್ರೀ ಗುರುಸಿದ್ಧೇಶ್ವರ ಶ್ರೀಗಳು ತಮ್ಮ ಪೀಠಾರೋಹಣ ನಂತರ ಶ್ರೀ ಮಠದಲ್ಲಿ ಪ್ರತಿ ಅಮವಾಸ್ಯೆಯಂದು ಜರುಗಿದ ಅನುಭಾವದಂಗಳ ಆಧ್ಯಾತ್ಮಿಕ ಪ್ರವಚನದ ಸಾರ ಇದಾಗಿದೆ. ಪ್ರವಚನ ನೀಡಿದ ನಾಡಿನ ಹರಗುರು ಚರಮೂರ್ತಿಗಳಿಂದ ಭಕ್ತರಿಗೆ ಉಣಬಡಿಸಿದ ಆಧ್ಯಾತ್ಮಿಕ ಅನುಭವ ಅಮೃತ ಈ ಗ್ರಂಥದಲ್ಲಿದೆ. ಗ್ರಂಥ ಇಂದಿನ ಹಾಗೂ ಮುಂದಿನ ಪಿಳಿಗೆಗೆ ತುಂಬಾ ಉಪಯುಕ್ತ ಮಾಹಿತಿ ಹಾಗೂ ಸಂಪೂರ್ಣ ಭಾರತಿಯ ಸಂಪ್ರದಾಯ ನೀಡುವ ಗ್ರಂಥ ಇದಾಗಿದೆ ಎಂದು ವಿವರಿಸಿದರು.

ಸಮಾರಂಭದಲ್ಲಿ ಶ್ರೀ ಮಠದ ಶ್ರೀ ಗುರುಸಿದ್ಧೇಶ್ವರ ಶ್ರೀಗಳು ಪ್ರಾಸ್ಥಾವಿಕವಾಗಿ ಮಾತನಾಡಿದರು.ಕಿತ್ತಲಿ ಸಿದ್ರಾಮೇಶ್ವರಮಠದ ಶ್ರೀ ಮಂಜುನಾಥ ದೇವರು ನೇತೃತ್ವ ವಹಸಿದ್ದರು. ಜಮಖಂಡಿ ತಾಲೂಕಿನ ಧರ್ಮಸ್ಥಳ ಗ್ರಾಮಾಭೀವೃದ್ಧಿ ಯೋಜನೆಯ ಯೋಜನಾಧಿಕಾರಿ ಜಿ. ನಿಂಗಪ್ಪ , ಗಿರೀಶ ಮುತ್ತೂರ, ವಿರುಪಾಕ್ಷಯ್ಯ ಹಿರೇಮಠ, ಡಾ. ವಿನೋದ ಮೇತ್ರಿ, ಶಿರೂರ ಗ್ರಾಮದ ಅಮಸ್ತ ಗುರುಹಿರಿಯರು ಇದ್ದರು. ರಬಕವಿ ಲಿಟಲ್ ಹಾರ್ಟ ಪ್ರೌಢಶಾಲೆಯ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು.

ನಂತರ ಶ್ರೀ ಮಠಕ್ಕೆ ತನುಮನಧನದಿಂದ ಸಹಾಯ ಮಾಡಿದವರನ್ನು ಮತ್ತು ಅನೇಕ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

# ಗೋಮಾಳ ಜಮೀನಿನಲ್ಲಿ ನಾಲತವಾಡ ಪಟ್ಟಣ ಪಂಚಾಯಿತಿಯ ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸಲು ತೀರ್ಮಾನಿಸಿರುವುದನ್ನು ಕೂಡಲೇ ಕೈಬಿಡುವಂತೆ ಆಗ್ರಹಿಸಿ ಮನವಿ

ಮುದ್ದೇಬಿಹಾಳ: ತಾಲೂಕಿನ ಕೃಷ್ಣಾ ನದಿ ಮುಳುಗಡೆ ಪ್ರದೇಶ ಒಳಗೊಂಡಿರುವ ನಾಗಬೇನಾಳ ಗ್ರಾಪಂ ವ್ಯಾಪ್ತಿಉ ರಿಸ ನಂಬರ್ 92ರಲ್ಲಿರುವ 24.12 ಎಕರೆ ಜಮೀನು ಪೈಕಿ 3.17 ಎಕರೆ ಜಮೀನು ಮುಫತ್ ಗಾಯರಾಣ (ಗೋಮಾಳ) ಜಮೀನಿನಲ್ಲಿ ನಾಲತವಾಡ ಪಟ್ಟಣ ಪಂಚಾಯಿತಿಯ ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸಲು ತೀರ್ಮಾನಿಸಿರುವುದನ್ನು ಕೂಡಲೇ ಕೈಬಿಡುವಂತೆ ಆಗ್ರಹಿಸಿ ನಾಗಬೇನಾಳ, ವೀರೇಶನಗರದ ರೈತರು, ಗ್ರಾಮಸ್ಥರು ಈಚೆಗೆ ಮುದ್ದೇಬಿಹಾಳ ತಹಶೀಲ್ದಾರ್, ವಿಜಯಪುರ ಜಿಲ್ಲಾಧಿಕಾರಿ ಸೇರಿ ಹಲವರಿಗೆ ಮನವಿ ಸಲ್ಲಿಸಿದ್ದಾರೆ.

ಸರ್ಕಾರದ ದಾಖಲೆಗಳಲ್ಲಿ 24.12 ಎಕರೆ ಜಮೀನು ಪೂರ್ತಿಯಾಗಿ ಗೋಮಾಳ ಎಂದೇ ಉಲ್ಲೇಖಿತವಾಗಿದೆ. ಈ ಜಮೀನಿನಲ್ಲಿ ನಾರಾಯಣಪುರ ಡ್ಯಾಮ್‌ನ ಹಿನ್ನೀರಿನಲ್ಲಿ ಮುಳುಗಡೆ ಆಗಿರುವ ಸಿದ್ದಾಪುರ (ವಿರೇಶನಗರ) ಗ್ರಾಮದ ರೈತರು, ನಾಗಬೇನಾಳ ಗ್ರಾಮದ ರೈತರು, ಕುರಿಗಾರರು ತಮ್ಮ ದನ ಕರು, ಕುರಿ ಮೇಲೆ ಇನ್ನಿತರ ಜಾನುವಾರುಗಳನ್ನು ಮೇಯಿಸಲು ಬಳಸುತ್ತಿದ್ದಾರೆ. ಆ ಭಾಗದಲ್ಲಿ ಗೋಮಾಳ ಎಂದು ಇರುವುದು ಇದೊಂದೇ ಸರ್ಕಾರದ ಜಾಗವಾಗಿದೆ. ಮುಳುಗಡೆ ಸಂತ್ರಸ್ತರು ತಮ್ಮ ಜಾನುವಾರು ಮೇಯಿಸಲು ಬಳಸುವುದಕ್ಕಾಗಿ ಸರ್ಕಾರವೇ ಕೊಟ್ಟಿರುವ ಜಮೀನಿನಲ್ಲಿ ಗ್ರಾಮಕ್ಕೆ ಸಂಬಂಧ ಪಡದ ದೂರದಲ್ಲಿರುವ ನಾಲತವಾಡ ಪಟ್ಟಣ ಪಂಚಾಯಿತಿಯ ಘನತ್ಯಾಜ್ಯ ನಿರ್ವಹಣೆ ಘಟಕ ಮಾಡಲು ಹೊರಟಿರುವುದು ಸಂತ್ರಸ್ತ ರೈತರು ಒಪ್ಪುವಂಥದ್ದಲ್ಲ ಎಂದು ಮನವಿಯಲ್ಲಿ ತಿಳಿಸಲಾಗಿದೆ.



ಗ್ರಾಮಸ್ಥರ ಅಭಿಪ್ರಾಯ ಪಡೆಯದೆ, ಬಹಿರಂಗ ಸಾರ್ವಜನಿಕ ಸಭೆ ನಡೆಸದೆ ಗೋಮಾಳ ಎಂದು ಕಾಯ್ದಿರಿಸಿದ ಈ ಜಮೀನಿನ ಉತಾರೆಯಲ್ಲಿ ಜಿಲ್ಲಾಧಿಕಾ–ರಿಯವರು 15–9–2022ರಂದೇ ಒಟ್ಟು ಕ್ಷೇತ್ರದಲ್ಲಿ 3.17 ಎಕರೆ ಜಮೀನು ವಶಪಡಿಸಿಕೊಂಡು ನಾಲತವಾಡ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾ–ರಿಗಳಿಗೆ ಘನತ್ಯಾಜ್ಯ ನಿರ್ವಹಣಾ ಘಟಕ ನಿರ್ಮಿಸಲು ಮಂಜೂರು ಮಾಡಿರುವುದು ತಡವಾಗಿ ರೈತರ, ಗ್ರಾಮಸ್ಥರ ಗಮನಕ್ಕೆ ಬಂದಿದೆ. ರೈತರ ಗಮನಕ್ಕೆ ತರದೇ ಏಕಾಏಕಿ ಗೋಮಾಳ ಜಮೀನನ್ನು ಕಸ ಸಂಗ್ರಹಕ್ಕಾಗಿ ನೀಡಿರುವುದು ಆಘಾತಕ್ಕೆ ಕಾರಣವಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಉದ್ದೇಶಿತ ಸ್ಥಳದಲ್ಲಿ ಕಸ ವಿಲೇವಾರಿ ಘಟಕ ಸ್ಥಾಪಿಸುವುದರಿಂದ ಪರಿಸರ ಹಾಳಾಗುತ್ತದೆ. ಸಾಂಕ್ರಾಮಿಕ ರೋಗಗಳು ಹರಡುತ್ತವೆ. ಜಾನುವಾರುಗಳ ಆಹಾರಕ್ಕಾಗಿ ಮೀಸಲಿಟ್ಟಿರುವ ಜಾಗವನ್ನು ಕಸಿದುಕೊಂಡು ಜಾನುವಾರುಗಳಿಗೆ ನಿಲ್ಲಲೂ ಜಾಗ ಇಲ್ಲದ ಹಾಗೆ ಮಾಡಿದಂತಾಗುತ್ತದೆ. ಇದಲ್ಲದೆ ರೈತರ ಹಕ್ಕನ್ನೂ ಕಸಿದುಕೊಂಡಂತಾಗುತ್ತದೆ. ಜಿಲ್ಲಾಧಿಕಾರಿ ಮತ್ತು ನಾಲತವಾಡ ಪಟ್ಟಣ ಪಂಚಾಯಿತಿಯವರ ನಿರ್ಧಾರವನ್ನು ಎಲ್ಲರೂ ವಿರೋಧಿಸುತ್ತೇವೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಒಂದು ವೇಳೆ ಉದ್ದೇಶಿತ ಸ್ಥಳದಲ್ಲಿ ಕಸ ವಿಲೇವಾರಿ ಘಟಕ ನಿರ್ಮಿಸಲು ಮುಂದಾದಲ್ಲಿ ರೈತರೆಲ್ಲರೂ ಸೇರಿ ಇದರ ವಿರುದ್ಧ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ. ನಮ್ಮ ಹಕ್ಕಿಗೋಸ್ಕರ ಧರಣಿ, ಪ್ರತಿಭಟನೆ, ಸತ್ಯಾಗ್ರಹ ನಡೆಸಲೂ ಹಿಂಜರಿಯುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ರೈತರು, ಕು–ರಿಗಾಯಿಗಳಿಗೆ ಮೀಸಲಿರುವ ಜಾಗದಲ್ಲಿ ಕಸ ವಿಲೇವಾರಿ ಘಟಕ ನಿರ್ಮಿಸಲು ಅವಕಾಶ ಮಾಡಿಕೊಡಬಾರದು ಎಂದು ಮನವಿಯಲ್ಲಿ ಕೋರಲಾಗಿದೆ.

**ಬಲವಂತದ ಸಮೀಕ್ಷೆಗೆ ತಕರಾರು:** ಮನವಿ ಸಲ್ಲಿಸಿದ ನಂತರವೂ ತಹಶೀಲ್ದಾರ್, ಕಂದಾಯ ನಿರೀಕ್ಷಕರು ಬಲವಂತವಾಗಿ, ಪೊಲೀಸ್ ಬಲ ಬಳಸಿ ಗೋಮಾಳ ಜಾಗ ಸರ್ವೆ ನಡೆಸಿ ಕಸ ವಿಲೇವಾಗಿ ಘಟಕಕ್ಕೆ ಹಸ್ತಾಂತ–ರಿಸಲು ಮುಂದಾಗಿರುವುದನ್ನು ಸುತ್ತಲಿನ ರೈತರು, ಗ್ರಾಮಸ್ಥರು ವಿರೋಧಿಸಿದ್ದರು. ಇದನ್ನು ಲೆಕ್ಕಿಸದೆ ತಹಶೀಲ್ದಾರ್, ಕಂದಾಯ ನಿರೀಕ್ಷಕರು ಹೆಚ್ಚಿನ ಪೊಲೀಸ್ ಬಂದೋಬಸ್ತ್‌ನೊಂದಿಗೆ ಸ್ಥಳಕ್ಕೆ ತೆರಳಿ 2–3 ದಿನಗಳ ಹಿಂದೆ ಸರ್ವೆ ನಡೆಸಿ ಕಲ್ಲನ್ನು ಹಾಕಿರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ. ಈ ವೇಳೆ ವಾಹನಗಳನ್ನು ಓಡಾಡಿಸಿದ ಪರಿಣಾಮ ಬೆಳೆ ಹಾನಿಯೂ ಆಗಿದೆ ಎಂದು ಆರೋಪಿಸಿದ್ದು ಅಧಿಕಾ–ರಿಗಳ ದೌರ್ಜನ್ಯ ವಿರೋಧಿಸಿ ಹೋರಾಟ ಹಮ್ಮಿಕೊಳ್ಳಲು, ಕಾನೂನಿನ ಮೊರೆ ಹೋಗಲು ತೀರ್ಮಾನಿಸಿದ್ದಾರೆ ಎಂದು ಗ್ರಾಮದ ಯುವಕ ಪ್ರಭು ಪತ್ತೇಪೂರ ಇನ್ನಿತರರು ತಿಳಿಸಿದ್ದಾರೆ.

ಪ್ರಭು ಪತ್ತೇಪೂರ, ಎಸ್.ಐ.ಪತ್ತೇಪೂರ, ಈರಪ್ಪ ಪತ್ತೇಪೂರ, ಅಂಬ್ರಪ್ಪ ಹಾಳಗೌಂಡಿ, ಗಂಗಾಧರ ಹವಾಲ್ದಾರ, ಗದ್ದೆಪ್ಪ ಮೇಟಿ, ಪರಸಪ್ಪ ಸುಲ್ತಾನಪುರ, ಎಸ್.ಎಚ್.ಗೌಡರ, ಶಿವು ಅಂಗಡಿ, ಎಸ್.ಎಂ.ಹವಾಲ್ದಾರ್, ಯಮನಪ್ಪ ಕರಭಾವಿ, ಸಿ.ಐ.ಗುರಿಕಾರ, ಬಿ.ಜೆ.ಕುಸಿಬಿ, ಸಂಗಣ್ಣ ಕೋಟಿ, ಸೋಮಪ್ಪ ಗಾಂಜಿ, ದುರಗಪ್ಪ ಮಾದರ, ಮಲ್ಲಪ್ಪ ಪತ್ತೇಪೂರ, ಈರಪ್ಪ ಕೋಟಿ, ದುರಗಪ್ಪ ಗಾಂಜಿ, ಈರಪ್ಪ ಕರಿಬಾಯಿ, ಮಳೆಪ್ಪ ಬೆನಕನಹಳ್ಳಿ, ಮಳೆಪ್ಪ ಗಾಂಜಿ, ಆಸೀಪ್ ನದಾಫ, ಶರಣಪ್ಪ ಪೂಜಾರಿ ಸೇರಿ ಹಲವರು ಮನವಿ ಪತ್ರಕ್ಕೆ ಸಹಿ ಮಾಡಿದ್ದಾರೆ.

## ಶಿವಯೋಗಿ ಸಿದ್ಧರಾಮೇಶ್ವರ, ಮಹಾಯೋಗಿ ವೇಮನ ಅಂಬಿಗರ ಚೌಡಯ್ಯ ಜಯಂತಿ ಅರ್ಥಪೂರ್ಣ ಆಚರಣೆಗೆ ನಿರ್ಧಾರ




ವಿಜಯಪುರ, : ಜಿಲ್ಲಾಡಳಿತ ವತಿಯಿಂದ ಇದೇ ಜನವರಿ 14ರಂದು ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ, ಜ.19ರಂದು ಮಹಾಯೋಗಿ ವೇಮನ ಜಯಂತಿ ಹಾಗೂ ಜ.21ರಂದು ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮಗಳನ್ನು ಅತ್ಯಂತ ಅಥ–ರ್ಪೂರ್ಣ ಹಾಗೂ ವ್ಯವಸ್ಥಿತವಾಗಿ ಆಚರಿಸಲು ನಿರ್ಧರಿಸಲಾಯಿತು.

ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ, ಜನವರಿ 14ರಂದು ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಹಾಗೂ ಜ.19ರಂದು ಜಯಂತಿ ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮಗಳನ್ನು ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಮಹನೀಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರೊಂದಿಗೆ ಕಾರ್ಯಕ್ರಮವನ್ನು ನಗರದ ರಂಗಮಂದಿರ ದಲ್ಲಿ ಆಯೋಜಿಸಲಾಗಿದೆ.

ಬೆಳಿಗ್ಗೆ 10 ಘಂಟೆಗೆ ಸಿದ್ದೇಶ್ವರ ದೇವಸ್ಥಾನದಿಂದ ರಂಗಮಂದಿರದವರೆಗೆ ಮೆರವಣಿಗೆ ಆಯೋಜನೆ ಮಾಡಲಾಗಿದೆ.

ನಂತರ ವೇದಿಕೆ ಕಾರ್ಯಕ್ರಮ ಮಾಡುವ ಮೂಲಕ ಅವರ ವಿಚಾರಧಾರೆಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಉಪನ್ಯಾಸ ಸಂಗೀತ ಕಾರ್ಯಕ್ರಮ ಏರ್ಪಡಿಸಲು ನಿರ್ಧರಿಸಲಾಯಿತು.

ಜಿಲ್ಲಾಡಳಿತದಿಂದ ಆಚ–ರಿಸಲಾಗುವ ಈ ಎಲ್ಲ ಮಹನಿಯರ ಜಯಂತಿ ದಿನಗಳಂದು, ಜಯಂತಿ ಕಾರ್ಯಕ್ರಮ ಹಾಗೂ ಮೆರವಣಿಗೆ ಕಾರ್ಯಕ್ರಮ ನಡೆಯುವ ಸ್ಥಳಗಳಲ್ಲಿ ಸ್ವಚ್ಛತೆ, ಸಮರ್ಪಕ ವಿದ್ಯುತ್ ವ್ಯವಸ್ಥೆ, ವೇದಿಕೆ ಕಾರ್ಯಕ್ರಮದಲ್ಲಿ ಆಸನಗಳ ವ್ಯವಸ್ಥೆ, ಆಹ್ವಾನ ಪತ್ರಿಕೆ ಮುದ್ರಣ, ಶಿಷ್ಠಾಚಾರದಂತೆ ಜಯಂತಿಗಳಿಗೆ ಆಹ್ವಾನ ಸೇರಿದಂತೆ ಎಲ್ಲ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಯಿತು.

ಜ.21ರಂದು ಅಂಬಿಗರ ಚೌಡಯ್ಯ ಜಯಂತಿ ಅಂಗವಾಗಿ ಅಂದು ಬೆಳಿಗ್ಗೆ ಬೆಳಿಗ್ಗೆ 10.00ಕ್ಕೆ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರ ಮೂಲಕ ಅತ್ಯಂತ ಸರಳ ಹಾಗೂ ಅಚ್ಚುಕಟ್ಟಾಗಿ ಕಾರ್ಯಕ್ರಮ ಆಯೋಜಿಸಲು ನಿರ್ಧರಿಸಲಾಯಿತು.

ಸಭೆಯಲ್ಲಿ ಜಿ.ಪಂ ಸಹಾಯಕ ಕಾರ್ಯದರ್ಶಿ ಅನುಸೂಯಾ ಚಲವಾದಿ, ಡಿ.ವೈ.ಎಸ್.ಪಿ ಬಸವರಾಜ ಎಲಿಗಾಗರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಸಮಾಜದ ಮುಖಂಡರಾದ ವಿ.ಸಿ.ನಾಗಠಾಣ, ರಾಮು ಹೊಸಪೇಟೆ, ಕೆ.ವಾಯ್. ಆಲಕುಂಟೆ, ಅಡಿವೆಪ್ಪ ಸಾಲಗಲ್ಲ, ಮಾರುತಿ ಚವ್ಹಾಣ, ಬಸವರಾಜ ನೇಗಿನಾಳ, ಸುರೇಶ ಶಿಂಗೆ, ಎಚ್. ಆರ್. ಮಾಚಪ್ಪನವರ, ಕೆ.ಬಿ. ಪಾಟೀಲ್ ಸೋಮನಗೌಡ ಕಲ್ಲೂರ, ವಿದ್ಯಾವತಿ ಅಂಕಲಗಿ, ರಾಮು ಹೊಸಪೇಟೆ, ಎಚ್. ಆರ್. ಮಚಪ್ಪನವರ, ಕೆ.ಬಿ. ಪಾಟೀಲ, ಎಸ್.ಎಲ್.ಜೀರಗಾಳ, ಎ.ಎಚ್ ಮಲಘಾಣ,ಎಸ್.ಬಿ. ಹರನಾಳ, ಬಾಬುಗೌಡ ಬಿರಾದಾರ, ಭರತ ಕೋಳಿ, ದೇವೇಂದ್ರ ಮೇರೇಕರ್, ಭೀಮರಾಯ ಜಿಗಜಿಣಗಿ, ಗಿರೀಶ್ ಕುಲಕರ್ಣಿ, ಸಾಹೇಬಗೌಡ ಬಿರಾದಾರ, ಶಿವಾನಂದ ಅಂಬಿಗೇರ,ಪರಶುರಾಮ ಅಳಗುಂಡಗಿ, ಅಶೋಕ ಅಂಬಿಗೇರ, ಹನಮಂತ ನಾಯ್ಕೋಡಿ, ಗುರುನಾಥ ವಾಲಿಕಾರ, ಪ್ರವೀಣ ಗಣಿ, ಸಂತೋಷ ತಟಗಾರ, ಮಹಾದೇವ ಗದ್ಯಾಳ, ಇತರರು ಉಪಸ್ಥಿತರಿದ್ದರು.

******

## ಚಿರಂಜೀವಿ ರೋಡಕರಗೆ ಶಿಕ್ಷಣ ಸೇವಾ ರತ್ನ ಪ್ರಶಸ್ತಿ



ರಬಕವಿ–ಬನಹಟ್ಟಿ,ಜ9: ಬನಹಟ್ಟಿ ಸದಾಶಿವ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ಚಿರಂಜೀವಿ ರೋಡಕರಗೆ ಕರ್ನಾಟಕ ರಾಜ್ಯ ಶಿಕ್ಷಕರ ಸಂಘಗಳ ಪರಿಷತ್ ಧಾರವಾಡ ಮತ್ತು ಕಲ್ಯಾಣ ಕರ್ನಾಟಕ ಪ್ರೌಢಶಾಲಾ ಶಿಕ್ಷಕರ ಸಂಘ, ಬೀದರ ಸಂಘಗಳು ಇವರ ಸಂಯುಕ್ತಾಶ್ರಯದಲ್ಲಿ ಅಕ್ಷರದವ್ವ ಸಾವಿತ್ರಿಬಾಯಿ ಪುಲೆ, ಶೇಕ್ ಫಾತಿಮಾ ಮತ್ತು ರಮಾಬಾಯಿ ಅಂಬೇಡ್ಕರ್ ಜಯಂತಿ ಅಂಗವಾಗಿ ನೀಡುವ ರಾಜ್ಯ ಮಟ್ಟದ ಸಾವಿತ್ರಿಬಾಯಿ ಪುಲೆ ಶಿಕ್ಷಣ ರತ್ನ ಪ್ರಶಸ್ತಿ ನೀಡಲಾಗಿದೆ ಎಂದು ಅಧ್ಯಕ್ಷ ಪಾಂಡುರಂಗ ಬೆಲ್ದಾರ, ಸಂಗಮೇಶ ಖನ್ನಿ ನಾಯ್ಕರ್ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಜ.18ರಂದು ಬೀದರನ ಪೂಜ್ಯ ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ನೀಡಲಾಗುತ್ತದೆ.

## ಇಂದು ನಮ್ಮ ನಡೆ ಸಾವಯವ ಮತ್ತು ಸಿರಿಧಾನ್ಯಗಳ ಕಡೆ

ವಿಜಯಪುರ : ಕೃಷಿ ಇಲಾಖೆ ಹಾಗೂ ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯ ವತಿಯಿಂದ "ನಮ್ಮ ನಡೆ ಸಾವಯವ ಮತ್ತು ಸಿರಿಧಾನ್ಯಗಳ ಕಡೆಗೆ" ಕಾರ್ಯಕ್ರಮವನ್ನು ಜ.10 ರಂದು ಬೆಳಗ್ಗೆ 7 ರಿಂದ 10ರವರೆಗೆ ಆಯೋಜಿಸಲಾಗಿದೆ. ಸದರಿ ಕಾರ್ಯಕ್ರಮ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಆರಂಭಗೊಂಡು ಮಹಾತ್ಮಗಾಂಧಿ ವೃತ್ತ, ಶ್ರೀ ಬಸವೇಶ್ವರ ವೃತ್ತ, ಡಾ. ಬಿ.ಆರ್.ಅಂಬೇಡ್ಕರ್ ವೃತ್ತದ ಮೂಲಕ ಸಾಗಿ ಗಗನಮಹಲನಲ್ಲಿ ಮುಕ್ತಾಯಗೊಳುವುದು. ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಕಷ್ಟದಲ್ಲಿರುವ ಮಕ್ಕಳಿಗೆ ಸಂರಕ್ಷಣೆ ಮಾಡಿ – ಶಶಿಧರ ಕೋಸಂಬೆ

ವಿಜಯಪುರ: ಬಡತನ ಸೇರಿದಂತೆ ವಿವಿಧ ಕಾರಣಗಳಿಂದ ಸಂಕಷ್ಟದಲ್ಲಿರುವ ಮಕ್ಕಳನ್ನು ಗುರುತಿಸಿ ಸಂರಕ್ಷಣೆ ಮಾಡಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶಶಿಧರ ಕೋಸಂಬೆ ಅವರು ತಿಳಿಸಿದರು.

ನಗರದ ಗಾಂಧಿ ಭವನ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕಾರ್ಮಿಕ ಇಲಾಖೆ, ಪೊಲೀಸ್ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಶಾಲೆಯಲ್ಲಿದೆ ಶಿಕ್ಷಣ ಜೊತೆಗೆ ರಕ್ಷಣೆ ಎಂಬ ಶಿರ್ಷಿಕೆ ಅಡಿಯಲ್ಲಿ ಮಕ್ಕಳೊಂದಿಗೆ ಸಂವಾದ ಮತ್ತು ಅಹವಾಲು ಸ್ವೀಕಾರ ಕಾರ್ಯಕ್ರಮ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳ ಸಂರಕ್ಷಣೆಗಾಗಿ ಇರುವ 12 ಕಾಯ್ದೆಗಳು ಹಾಗೂ 2 ನೀತಿಗಳು



ಸಂಬಂಧಪಟ್ಟ ಅಧಿಕಾರಿಗಳು ಕಾರ್ಯರೂಪಕ್ಕೆ ತರುವ ಮೂಲಕ ಮಕ್ಕಳ ಹಕ್ಕುಗಳ ರಕ್ಷಣೆ ಮಾಡುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ತಿಳಿಸಿದರು.

ಮಕ್ಕಳ ಮೇಲಾಗುತ್ತಿರುವ ಬಹಳಷ್ಟು ಬೆಳಕಿಗೆ ಬರುತ್ತಿಲ್ಲ. ಹೀಗಾಗಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೀದರ್ ದಿಂದ ಚಾಮರಾಜನಗರದ ವರೆಗೆ ಶಾಲೆಯಲ್ಲಿದೆ ಶಿಕ್ಷಣ ಜೊತೆಗೆ ರಕ್ಷಣೆ ಎಂಬ ಶಿರ್ಷಿಕೆ ಅಡಿಯಲ್ಲಿ ಮಕ್ಕಳೊಂದಿಗೆ ಮುಕ್ತ ಸಂವಾದ ಹಾಗೂ ಅಹವಾಲು ಸ್ವೀಕಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಮಾಹಿತಿ ಕಲೆಹಾಕಲಾಗುತ್ತಿದೆ ಇದರಿಂದ ಮಕ್ಕಳು ನಿಜವಾಗಿಯೂ ಅನುಭವಿಸುತ್ತಿರುವ ಸಮಸ್ಯೆಗಳಲ್ಲಿ ಸ್ಥಳೀಯ ಅಧಿಕಾರಿಗಳಿಗೆ ಸೂಚಿಸಿ ಹಲವಾರು ಸಮಸ್ಯೆಗಳಿಗೆ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುವ ಆಯೋಗವು ಜಟಿಲವಾದ ಸಮಸ್ಯೆಗಳಿಗೆ ಬಹಳ ಗಂಭೀರವಾಗಿ ಪರಿಗಣಿಸುತ್ತಿದೆ ನಿಯಮಿತ ಕಾಲದಲ್ಲಿ ಬಗೆಹರಿಸಲು ಅಧಿಕಾರಿಗಳ ಸ್ವಯಂ ಪ್ರೇರಿತ ಪ್ರಕರಣ ದಾಖಲು ಮಾಡಿಕೊಳ್ಳಲು ನಿರ್ಧ–ರಿಸಲಾಗಿದೆ ಎಂದು ಹೇಳಿದರು.

ಮಕ್ಕಳಿಗಾಗಿ ಹಮ್ಮಿಕೊಂಡಿದ್ದ ಮಕ್ಕಳೊಂದಿಗೆ ಮುಕ್ತ ಸಂವಾದ ಮತ್ತು ಅಹವಾಲು ಕಾರ್ಯಕ್ರಮಕ್ಕೆ ಜಿಲ್ಲೆಯ ಭಾಗದ ಮಕ್ಕಳಿಗೆ ಕರೆತರುವಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ಉಪನಿರ್ದೇಶಕರು ವಿಫಲರಾಗಿದ್ದಾರೆ. ಹೀಗಾಗಿ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ಜಿಲ್ಲಾಧಿಕಾ–ರಿಗಳಿಗೆ ತಿಳಿಸಲು ವೇದಿಕೆ ಮೇಲಿದ್ದ ಸಹಾಯಕ ಆಯುಕ್ತರಾದ ಗುರುನಾಥ್ ದಡ್ಡಿ ತಿಳಿಸಿದರು.

ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅರವಿಂದ ಎಸ್ ಹಾಗರಗಿ ಮಾತನಾಡಿ, ಬಾಲ್ಯ ವಿವಾಹ ತಡೆ ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆಗೆ ಸದ್ಯ ಜಾರಿಯಲ್ಲಿರುವ ಮಕ್ಕಳ ವಿಶೇಷ ಪೊಲೀಸ್ ಘಟಕದ ಅಧಿಕಾರಿಗಳಿಗೆ ಸಮಸ್ಯೆಯಾಗುತ್ತಿದ್ದು, ಮಕ್ಕಳ ಹಕ್ಕುಗಳ ರಕ್ಷಣಾ ಕಾರ್ಯಕ್ಕೆ ಪ್ರತ್ಯೇಕವಾದ ಪೊಲೀಸ್ ಸೆಲ್ ರಚನೆಗಾಗಿ ರಾಜ್ಯ ಸರ್ಕಾರಕ್ಕೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಶಿಫಾರಸ್ಸು ಮಾಡಬೇಕು ಎಂದು ತಿಳಿಸಿದರು.

ಜಿಲ್ಲಾಡಳಿತದ ಪರವಾಗಿ ಆಗಮಿಸಿದ ಸಹಾಯಕ ಆಯುಕ್ತ ಗುರುನಾಥ್ ದಡ್ಡಿ ಮಾತನಾಡಿ, ಮಕ್ಕಳು ತಮಗೆ ಆಗುತ್ತಿರುವ ಸಮಸ್ಯೆಗಳ ಕುರಿತು ನಡೆಸಿದ ಸಂವಾದದ ಪ್ರತಿಯೊಂದು ವಿಷಯದ ಕುರಿತು ಮಾನ್ಯ ಜಿಲ್ಲಾಧಿಕಾ–ರಿಗಳಿಗೆ ಹಾಗೂ ಜಿಪಂ ಸಿಇಒ ಅವರ ಗಮನಕ್ಕೆ ತರುತ್ತೇನೆ ಎಂದು ತಿಳಿಸಿದರು.

ವಿಜಯಪುರ ನಗರ ಪ್ರದೇಶದ ಕೆಬಿಎಸ್ ಶಾಲೆಯ ನಂ. 36,26,10 ಗಳ ತರಗತಿಯ ವಿದ್ಯಾರ್ಥಿಗಳಿಗೆ ಸಮರ್ಪಕವಾದ ಶೌಚಾಲಯ ವ್ಯವಸ್ಥೆ ಇಲ್ಲ, ಆಟದ ಮೈದಾನ ಇಲ್ಲ ಜೊತೆಗೆ ಊಟ ಮಾಡಲು ತಟ್ಟೆಯಲ್ಲಿದ ಕಾರಣ ಒಂದು ತಟ್ಟೆಯಲ್ಲಿ ನಾಲ್ಕು ಮಕ್ಕಳು ಊಟ ಮಾಡುತ್ತಿರುವುದು ಬೇಸರದ ಸಂಗತಿ – ಶಶಿಧರ ಕೋಸಂಬೆ, ಸದಸ್ಯರು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಚೌಹಾನ್, ವಿಭಾಗೀಯ ನಿಯಂತ್ರಣ ಅಧಿಕಾರಿ ಕರಬರ,ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ಬಸಮ್ಮ ಹತ್ತರಕಿ,ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದೀಪಾಕ್ಷಿ ಜಾನಕಿ, ಮೌನೇಶ್ ಪತ್ತಾರ ನಿರೂಪಿಸಿದರು, ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು. ವಿವಿಧ ಶಾಲೆಗಳಿಂದ ಮಕ್ಕಳು ಆಗಮಿಸಿದರು.

********


**ಕರ್ನಾಟಕ ನೀರಾವರಿ ನಿಗಮ ನಿಯಮಿತ**
**(ಕರ್ನಾಟಕ ಸರ್ಕಾರದ ಉದ್ಯಮ)**
**ಕಾರ್ಯನಿರ್ವಾಹಕ ಇಂಜನೀಯರರವರ ಕಚೇರಿ ಕ.ನೀ.ನಿ.ನಿ**
**ಕಾರ್ಯಾಗಾರ ಮತ್ತು ಯಾಂತ್ರಿಕ ವಿಭಾಗ ನವಿಲುತೀರ್ಥ–591116**
**ತಾಲ್ಲೂಕ: ಸವದತ್ತಿ ಜಿಲ್ಲಾ: ಬೆಳಗಾವಿ ರಾಜ್ಯ: ಕರ್ನಾಟಕ**
Division Mail : eewandmdivision@gmail.com

ಸಂಖ್ಯೆ/ಪಿಬಿ–1/ಇ–ಟೆಂಡರ/768 ದಿನಾಂಕ:06/01/2025

**ಅಲ್ಪಾವಧಿ ಟೆಂಡರ ಪ್ರಕಟಣೆ (3ನೇ ಕರೆ)**
**( ಇ–ಪ್ರೂಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ)**
**( ಏಕ ಲಕೋಟೆ ಪದ್ದತಿಯಲ್ಲಿ)**

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಾರ್ಯಗಾರ ಮತ್ತು ಯಾಂತ್ರಿಕ ವಿಭಾಗದಡಿಯಲ್ಲಿ 2701 ಲೆಕ್ಕ ಶೀರ್ಷಿಕೆಯಡಿ ಈ ಕೆಳಗೆ ನಮೂದಿಸಿರುವ ಇಂಡೆಂಟ್ ನಂಬರಿನ ಕಾಮಗಾರಿಗೆ ಶೇಕಡವಾರು ಟೆಂಡರನ್ನು ಏಕ ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.
ಇಂಡೆಂಟ್ ನಂ: 1510
ಕಾಮಗಾರಿಯ ಅಂದಾಜು ಮೊತ್ತ: ರೂ.4.75 ಲಕ್ಷ
ಇ.ಎಂ.ಡಿ ಮೊತ್ತ: ರೂ. 10000/–
. ಇ–ಪೋರ್ಟಲ್ ಮೂಲಕ ಟೆಂಡರನ್ನು ದಿನಾಂಕ:20/1/2025 ರಂದು ಸಂಜೆ 4.00 ಘಂಟೆಯವರೆಗೆ ಸಲ್ಲಿಸಬಹುದಾಗಿದೆ.ಬಿಡ್ ತೆರೆಯುವ ದಿನಾಂಕ:22/1/2025 ರಂದು ಬೆಳಿಗ್ಗೆ 11.00 ಘಂಟೆ. ಹಾಗೂ ಕಾಮಗಾರಿವಾರು ಇತರೆ ವಿವರಗಳನ್ನು ಇ–ಪ್ರೂಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.karnataka.gov.in ಪಡೆಯಬಹುದಾಗಿದೆ.ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಯನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ,
ಕನೀನಿನಿ. ಕಾರ್ಯಗಾರ ಮತ್ತು ಯಾಂತ್ರಿಕ ವಿಭಾಗ ನವಿಲುತೀರ್ಥ.
DIPR/BGM/RO-NO-1442/KSMCA/2024-25


BELAGINA SURYODHYA KANNADA DAILY MORNING Editor, Printer, PUblisher and Owned By GURURAJ IRAPPA KADAM Plot No.2743 NEAR KEB POWER HOUSE RAMTEERTH NAGAR, SHIVAJI NAGAR BELAGAVI-590016
DIST-BELAGAVI,STATE KARNATAKA PRINTED At M/S LAXMI PRINTERS, No. 627,Auto Nagar,Belagavi,Dist- Belagavi Karnataka, RNI No. KARKAN/2019/77640, Volume : 06, Issue : 282, Postal Reg No. PMG/KA/NK/BM/135/22-24 / POST AT Vantamury Colony Post Office